ಸಂಪುಟ: 05 ಸಂಚಿಕೆ: 321 ಪುಟಗಳು: 08 ಮಂಗಳವಾರ 03 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯುವಜನರ ಕರ್ತವ್ಯವೆಂದರೆ ಅವರು ತಮ್ಮ, ತಮ್ಮ ಕುಟುಂಬ, ಸಮಾಜ ಮತ್ತು ರಾಷ್ಟ್ರದ ವಿಚಾರದಲ್ಲಿ ಹೊಣೆಗಾರರಾಗಿರುವುದು

# 52 ಸಾವಿರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಹಣ ಬರ್ತಿಲ್ಲ!

## ಹಣ ಜಮೆಯಾಗದ ಫಲಾನುಭವಿಗಳು ಜಿಎಸ್‌ಟಿ, ಆದಾಯ ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ

• ಉದಯವಾಹಿನಿ, ಬೆಂಗಳೂರು

ಗೃಹಲಕ್ಷ್ಮಿ ಯೋಜನೆಗೆ ನೋಂದಣಿಯಾದರೂ 52 ಸಾವಿರ ಮಹಿಳೆಯರಿಗೆ ಹಣ ಜಮೆ ಆಗುತ್ತಿರಲಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಮಸ್ಯೆಯ ಮೂಲ ಯಾವುದು ಎಂದು ತಿಳಿಸಿದ್ದಾರೆ.

**ಜಿಎಸ್‌ಟಿ, ಆದಾಯ ತೆರಿಗೆ ವ್ಯಾಪ್ತಿಗೆ**

ವಿಶೇಷ ಅಧಿವೇಶನದ ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯರಾದ ಪಿಎಚ್ ಪೂಜಾರ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕಟ್ಟುತ್ತಿದ್ದಾರೆ ಎಂದು ಸುಮಾರು 52 ಸಾವಿರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಸಿಗುತ್ತಿಲ್ಲ. ಈ ಪೈಕಿ ಸುಮಾರು 20 ಸಾವಿರ ಫಲಾನುಭವಿಗಳ ಸಮಸ್ಯೆಯನ್ನು ಇತ್ಯರ್ಥ ಪಡಿಸಲಾಗಿದ್ದು, ಇನ್ನು ಉಳಿದವರ ಸಮಸ್ಯೆಯನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿದರು.

**ಸರ್ಕಾರ ಮತ್ತು ಇಲಾಖೆಯ ತಪ್ಪಿಲ್ಲ ಎಂದ ಸಚಿವೆ:** ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಇಲಾಖೆಗಳ ದಾಖಲೆಯಲ್ಲೂ ಇದೇ ರೀತಿ ತೋರಿಸುತ್ತಿದ್ದು, ಇದರಿಂದ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಿದ್ದು, ಸರ್ಕಾರದ ಹಾಗೂ ನಮ್ಮ ಇಲಾಖೆಯದ್ದು ಯಾವುದೇ ತಪ್ಪಿಲ್ಲ ಎಂದರು. (ಗೃಹಲಕ್ಷ್ಮಿ ಬ್ಯಾಂಕ್ ಆರಂಭ) ಸಾಫ್ಟ್‌ವೇರ್‌ನಲ್ಲಿ ಬದಲಾವಣೆ ಮಾಡಲು ಸಾಧ್ಯ ರಾಜ್ಯದಲ್ಲಿ ಸುಮಾರು 1.26 ಕೋಟಿ ಫಲಾನುಭವಿಗಳಿದ್ದು, ಕೆಲ ಫಲಾನುಭವಿಗಳು ಕೆಲವೊಂದು ವ್ಯವಹಾರ ನಡೆಸುವಾಗ ಜಿಎಸ್‌ಟಿ,



### ಟೆಂಗಿನಕಾಯಿ ಒಂಥರ ಬಲೂನ್ ಇದ್ದಂಗೆ

ಗೃಹಲಕ್ಷ್ಮಿ ಯೋಜನೆಯ ಬಗ್ಗೆ ಇನ್ನಿಲ್ಲದ ಅಪಪ್ರಚಾರ ಮಾಡುತ್ತಿರುವ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಒಂಥರ ಬಲೂನ್ ಇದ್ದಂಗೆ, ಯಾವಾಗ ಗಾಳಿ ಹೋಗುತ್ತದೆ ಗೊತ್ತಿಲ್ಲ. ಅವರಿಗೆ ಬೇರೆ ಯಾವುದೇ ಕೆಲಸವಿಲ್ಲದೇ ಈ ರೀತಿ ಅನಾವಶ್ಯಕವಾಗಿ ಅವರು ಮಾತನಾಡುತ್ತಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿಕಾರಿದರು.


ಆದಾಯ ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. ಗೃಹಲಕ್ಷ್ಮಿಗಾಗಿಯೇ ನಿರ್ಮಿಸಲಾಗಿರುವ ಸಾಫ್ಟ್‌ವೇರ್‌ನಲ್ಲಿ ಜಿಎಸ್‌ಟಿ, ಆದಾಯ ತೆರಿಗೆ ಅಂತ ತೋರಿಸಿದರೆ ಬದಲಾವಣೆ ಮಾಡಲು ಸಾಧ್ಯವಿಲ್ಲ. ಗೃಹಲಕ್ಷ್ಮಿ ಯೋಜನೆ ನಿರಂತರ ಪ್ರಕ್ರಿಯೆ, ಈಗಾಗಲೇ ಆದಾಯ ತೆರಿಗೆ ಜಿಎಸ್‌ಟಿ ಕೌನ್ಸಿಲ್ ಗಮನಕ್ಕೂ ತರಲಾಗಿದೆ ಎಂದರು.

**ಗೃಹಲಕ್ಷ್ಮಿ ಯೋಜನೆ 26 ಕಂತು ಬಿಡುಗಡೆ:** ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಹಿಂದಿನ ಬಿಜೆಪಿ ಸರ್ಕಾರದಿಂದ ರಾಜ್ಯದ ಜನತೆ ಭ್ರಮ ನಿರಸಗೊಂಡಿದ್ದರು. ಕೊಟ್ಟ ಮಾತಿನಂತೆ ನಾವು ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೊಳಿಸಿದ್ದೇವೆ.

ಇದುವರೆಗೂ 26 ತಿಂಗಳ ಕಂತು ಬಿಡುಗಡೆಯಾಗಿದ್ದು, ಮನೆ ಮನೆಗೆ ನಮ್ಮ ಯೋಜನೆಗಳು ತಲುಪುತ್ತಿವೆ. ಕಳೆದ ವರ್ಷದ ಫೆಬ್ರವರಿ, ಮಾರ್ಚ್ ತಿಂಗಳ ಹಣ ಬಿಡುಗಡೆ ಕುರಿತು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹಾಗೂ ಹಣಕಾಸು ಇಲಾಖೆಯವರು ಇಷ್ಟರಲ್ಲೇ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

## ಮಾರ್ಚ್ ಅಂತ್ಯದ ವೇಳೆಗೆ ಎಲ್ಲಾ ಕೇಸ್ ವಿಲೇವಾರಿಗೊಳಿಸಬೇಕು

• ಉದಯವಾಹಿನಿ, ಬೆಂಗಳೂರು



ಎಸಿ ಕೋರ್ಟ್‌ನ ಎಲ್ಲಾ ಪ್ರಕರಣಗಳನ್ನೂ ಮಾರ್ಚ್ ಅಂತ್ಯದ ವೇಳೆಗೆ ವಿಲೇವಾರಿಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಖಡಕ್ ಸೂಚನೆ ನೀಡಿದ್ದಾರೆ.

ಸೋಮವಾರ ವಿಕಾಸಸೌಧದಿಂದ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ''2023ಕ್ಕೂ ಮುಂಚೆ ಆಡಳಿತ ನಡೆಸಿದ ಸರ್ಕಾರಗಳು ಎಸಿ ನ್ಯಾಯಾಲಯದಲ್ಲಿ ಅವಧಿ ಮೀರಿದ 62,857 ತಕರಾರು ಪ್ರಕರಣಗಳನ್ನು ವಿಲೇವಾರಿ ಮಾಡದೆ ಉಳಿಸಿಹೋಗಿದ್ದವು.

ಇದಲ್ಲದೆ, 11,000 ಪ್ರಕರಣಗಳನ್ನು ಆರ್‌ಸಿಎಂಎಸ್ ನಲ್ಲಿ ದಾಖಲು ಮಾಡಿರಲಿಲ್ಲ. ಇವೆಲ್ಲವನ್ನೂ ಕೂಡಿದರೆ ಒಟ್ಟಾರೆ 73,000 ಪ್ರಕರಣಗಳ ಬಾಕಿ ಇದ್ದವು. ಜನ ಸಾಮಾನ್ಯರು ದಿನನಿತ್ಯ ಸರ್ಕಾರಿ ಕಚೇರಿಗೆ ಅಲೆಯುವ ಪರಿಸ್ಥಿತಿ ಇತ್ತು'' ಎಂದು ವಿಷಾದಿಸಿದರು.

## ಪಠ್ಯಪುಸ್ತಕ ಮುದ್ರಣ 266.67 ಕೋಟಿಗೆ ಟೆಂಡರ್

• ಉದಯವಾಹಿನಿ, ಬೆಂಗಳೂರು

ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಉಚಿತ ಪಠ್ಯಪುಸ್ತಕಗಳನ್ನು ಪೂರೈಸಲು ಶಾಲಾ ಶಿಕ್ಷಣ ಇಲಾಖೆ 266.67 ಕೋಟಿ ಮೊತ್ತಕ್ಕೆ ಟೆಂಡರ್ ಕರೆಯಲು ಅನುಮೋದನೆ ನೀಡಿ, ಆದೇಶ ಹೊರಡಿಸಿದೆ.

ಇದೇ ಮೊದಲ ಬಾರಿ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೂ ಉಚಿತ ಪಠ್ಯಪುಸ್ತಕ ಪೂರೈಸಲಾಗುತ್ತಿದ್ದು, ಪಿಯು ಬೇಡಿಕೆ 27.22 ಲಕ್ಷ ಸೇರಿ ಒಟ್ಟು 6.74 ಕೋಟಿ ಪಠ್ಯಪುಸ್ತಕ, ಅಭ್ಯಾಸ, ದಿನಚರಿ ಪುಸ್ತಕಗಳನ್ನು ಮುದ್ರಿಸಲು ಟೆಂಡರ್ ಆಹ್ವಾನಿಸುವಂತೆ ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಸೂಚಿಸಲಾಗಿದೆ. ಹಿಂದಿನ ಸಾಲಿನಲ್ಲಿ 9.78 ಲಕ್ಷ ಪಠ್ಯಪುಸ್ತಕ ಹಾಗೂ ಅಭ್ಯಾಸ ಪುಸ್ತಕಗಳು ಉಳಿಕೆಯಾಗಿವೆ. ಅವುಗಳನ್ನು ಪರಿಗಣಿಸಿ ಬೇಡಿಕೆಗೆ ಅನುಗುಣವಾಗಿ ನಿಗದಿಪಡಿಸಿದ ಮೊತ್ತದ ಒಳಗೆ ಮುದ್ರಣ ಕಾರ್ಯ ಕೈಗೊಳ್ಳಬೇಕು. ಮೊತ್ತವನ್ನು ವಿದ್ಯಾವಿಕಾಸ ಯೋಜನೆಯ ಅನುದಾನದಲ್ಲಿ ಭರಿಸಬೇಕು. ರಾಜ್ಯದಲ್ಲಿ ಮುದ್ರಣ ಘಟಕ ಹೊಂದಿರುವ ಮುದ್ರಣಕಾರರಿಗೆ ಟೆಂಡರ್ ನೀಡಬೇಕು. ಶೈಕ್ಷಣಿಕ ವರ್ಷದ ಆರಂಭದಲ್ಲೇ ಪಠ್ಯಪುಸ್ತಕಗಳು ಎಲ್ಲಾ ಶಾಲೆಗಳಿಗೂ ತಲುಪಿಸಬೇಕು ಎಂದು ಷರತ್ತುಗಳನ್ನು ವಿಧಿಸಲಾಗಿದೆ.

## ಐಟಿ ಶೋಧಕ್ಕೆ ರಿಟ್ ಅರ್ಜಿ ಸಲ್ಲಿಸಿದ್ದ ರಾಯ್ ಮತ್ತೆ ವಾಪಸ್ಸು

• ಉದಯವಾಹಿನಿ, ಬೆಂಗಳೂರು

ಆತ್ಮಹತ್ಯೆಗೆ ಶರಣಾಗಿರುವ ಕಾನ್ಫಿಡೆಂಟ್ ಪ್ರಾಜೆಕ್ಟ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮುಖ್ಯಸ್ಥ ಸಿ.ಜೆ.ರಾಯ್ ತಮ್ಮ ಕಂಪನಿಗಳ ಶೋಧನೆ ಹಾಗೂ ಜಪ್ತಿಗೆ ಕೊಚ್ಚಿಯ ಆದಾಯ ತೆರಿಗೆ ಇಲಾಖೆ ಕಳೆದ ವರ್ಷ ಹೊರಡಿಸಿದ್ದ ಆದೇಶ ರದ್ದುಪಡಿಸುವಂತೆ ಕೋರಿ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ನಂತರ ಎರಡನೇ ದಿನದಲ್ಲಿ ಹಿಂಪಡೆದಿದ್ದರು. ಕಾನ್ಫಿಡೆಂಟ್ ಪ್ರಾಜೆಕ್ಟ್, ಕಾನ್ಫಿಡೆಂಟ್ ಏರ್‌ಲೈನ್ಸ್, ಕಾನ್ಫಿಡೆಂಟ್ ರೆಸಾರ್ಟ್ಸ್, ಕಾನ್ಫಿಡೆಂಟ್ ಎಂಟರ್‌ಟೈನ್‌ಮೆಂಟ್ ಸೇರಿದಂತೆ ಎಂಟು ಕಂಪನಿಗಳ ಶೋಧನೆ ಮತ್ತು ಜಪ್ತಿಗೆ ಕೇರಳದ ಕೊಚ್ಚಿಯಲ್ಲಿರುವ ಆದಾಯ ತೆರಿಗೆ ಇಲಾಖೆ ಕಚೇರಿಯ ಪ್ರಧಾನ ನಿರ್ದೇಶಕರು 2025ರ ನವೆಂಬರ್ 27ರಂದು ಆದೇಶ ಹೊರಡಿಸಿದ್ದರು. ಡಿಸೆಂಬರ್ 3ರಂದು ಪಂಚನಾಮೆ ನಡೆಸಿದ್ದರು.

'ಶೋಧನೆಯ ಆದೇಶ ಮತ್ತು ಪಂಚನಾಮೆಯನ್ನು ಅಕ್ರಮ ಎಂದು ಘೋಷಿಸಿ, ರದ್ದುಪಡಿಸಬೇಕು' ಎಂದು ಕೋರಿ ಎಂಟು ಕಂಪನಿಗಳು ಮತ್ತು ಸಿ.ಜೆ.ರಾಯ್ 2025ರ ಡಿಸೆಂಬರ್ 16ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

**ವಿಧಾನಸಭೆಯಲ್ಲಿ 'ಪವರ್ ಶೇರಿಂಗ್' ಬಗ್ಗೆ ಸ್ವಾರಸ್ಯಕರ ಚರ್ಚೆ**

**ನೀನು ಹಾಲಂತೆ, ನಾನು ಸಕ್ಕರೆಯಂತೆ!**

**ಡಿಕೆಶಿ ಕಡೆ ಕೈತೋರಿಸಿ ಸಿದ್ದರಾಮಯ್ಯ ಮಾತು**



**ಒಬ್ಬ ಮನುಷ್ಯ ಧೈರ್ಯವಾಗಿ ನಿಂತ್ರೆ ಅದೇ ಬಹುಮತ**



## ಸಮಯವೇ ಉತ್ತರ ಕೊಡುತ್ತದೆ ಬಿಡಿ

# ಡಿಸಿಎಂ ಡಿಕೆಶಿ ಕಿಡಿ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ನಾಯಕತ್ವ ಗುದ್ದಾಟದ ಬಗ್ಗೆ ಸೋಮವಾರ ಸದನದಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು. ಡಿಸಿಎಂ ಡಿ.ಕೆ.ಶಿವಕುಮಾರ್, ಒಬ್ಬ ಮನುಷ್ಯ ಧೈರ್ಯವಾಗಿ ನಿಂತರೆ ಅದೇ ಬಹುಮತ ಎಂದು ಹೇಳಿರುವುದು ವಿಶೇಷವಾಗಿ ಗಮನ ಸೆಳೆಯಿತು. ವಿಧಾನಸಭೆಯಲ್ಲಿ ಕಾಂಗ್ರೆಸ್ ಪವರ್ ಶೇರ್ ಬಗ್ಗೆ ಪ್ರಸ್ತಾಪಿಸುತ್ತಾ, ನನಗೂ, ಡಿಸಿಎಂಗೂ ಆಗಲ್ಲ ಅಂತ ಬಿಜೆಪಿಯವರು ಹೇಳ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಡಿಕೆಶಿಯವರತ್ತ ನೋಡಿ ಹೇಳುತ್ತಾರೆ. ಡಿಕೆಶಿ ಕಡೆ ನೋಡಿದ ಸಿಎಂ, ನನಗೂ ಡಿಸಿಎಂಗೂ ಜಗಳ ಇದೆ ಅಂತಿದ್ದಾರೆ. ಹಾಲು ಅಂತ ನಿನಗೆ, ನನಗೆ ಸಕ್ಕರೆ ಅಂದಿದ್ದಾರೆ. ನಿನಗೂ ನನಗೂ ಹಾಲಾಹಲ ಇದೆ ಅಂತ ಹೇಳಿದ್ರು ಎಂದರು. ಇದಕ್ಕೆ ಕೂತಲ್ಲೇ ಪ್ರತಿಕ್ರಿಯಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಸಮಯವೇ ಉತ್ತರ ಕೊಡುತ್ತದೆ ಬಿಡಿ ಎಂದರು.

ಆಗ ಆರ್.ಅಶೋಕ್ ಮಧ್ಯಪ್ರವೇಶಿಸಿ, ಕರೆಕ್ಟ್, ಒಂದು ಮಾತು ನೂರು ಅರ್ಥ. ಇದು ಡಿಕೆಶಿ ಸ್ಟೈಲ್. ಸಮಯ ಉತ್ತರ ಕೊಡುತ್ತದೆ ಅಂತ ಡಿಕೆಶಿ ಹೇಳಿದ್ದಾರೆ. ಆ ಸಮಯ ಯಾವಾಗ ಬರುತ್ತದೆ ಅಂತ ಹೇಳಲಿ ಎಂದು ಕೇಳಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಚಿವ ಸಂತೋಷ್ ಲಾಡ್‌ಗೆ, ನೀನು ಯಾರ ಕಡೆ ಅಂತ ಟಕ್ಕರ್ ಕೊಟ್ಟರು. ಯಾರೋ ನನಗೆ ಹೇಳಿದ್ರು, ಡಿಕೆಶಿ ಕಡೆ 56 ಶಾಸಕರು ಇದ್ದಾರೆ ಅಂತೆ. ಆದ್ರೆ, ಸಂತೋಷ್ ಲಾಡ್ ಅಂಥವರು ಬೆಳಗ್ಗೆ ಅಲ್ಲಿ ರಾತ್ರಿ ಇಲ್ಲಿ ಇರ್ತಾರೆ. ಅದಕ್ಕೆ ಡಿಕೆಶಿಗೆ ಲಾಡ್ ಅಂಥವರನ್ನು ನೋಡಿ ಯಾರು ಯಾರ ಕಡೆ ಇದ್ದಾರೆ ಅಂತ ಗೊಂದಲ ಆಗಿದೆಯಂತೆ ಎಂದು ಅಶೋಕ್ ಕಾಲೆಳೆದರು.

ಅಶೋಕ್ ಮಾತಿಗೆ ಸಿಟ್ಟಾದ ಸಂತೋಷ್ ಲಾಡ್, ನಿಮ್ಮ ಮೇಲೆ ನಮಗೆ ಗೌರವ ಇದೆ. ಆ ಥರ ಮಾತಾಡಬೇಡಿ. ಬೆಳಗ್ಗೆ ಹೋಗುವ, ಸಂಜೆ ಹೋಗುವ ಅಗತ್ಯ ನನಗೆ ಇಲ್ಲ. ನೀವು 56 ಶಾಸಕರನ್ನು ಖರೀದಿಸಲು ಹೋಗಿದ್ದವರು. ಅವರ ಕಾಲಿಗೆ ಬಿದ್ದು ಖರೀದಿ ಮಾಡಿಸಿದವರು. ನೀವು ಈ ತರದ ಮಾತು ಮಾತನಾಡಬಾರದು ಎಂದು ಮನವಿ ಮಾಡಿದರು. ಆರ್. ಅಶೋಕ್ ಮಾತಿಗೆ ಸ್ಪಷ್ಟನೆ ನೀಡಿದ ಡಿ.ಕೆ.ಶಿವಕುಮಾರ್, ನಾನು ಸ್ಟೂಡೆಂಟ್ ಪಾಲಿಟಿಕ್ಸ್‌ನಿಂದ ಬಂದವ. ಏಟು ತಿಂದಿದ್ದೇನೆ. ನೋವುಂಡಿದ್ದೇನೆ, ಬೆಳೆದಿದ್ದೇನೆ. ಸಿದ್ದರಾಮಯ್ಯ ಸೇರಿ ನನ್ನ ಬಲ 136 ಶಾಸಕರು. ಎಲ್ಲಾ ಬಿಕ್ಕಟ್ಟಿನಲ್ಲಿ ಅವರ ಜತೆ ನಾನು ನಿಂತಿದ್ದೇನೆ. ಅವರು ನನ್ನ ಜತೆ ನಿಲ್ಲುತ್ತಾರೆ. ನಾವಿಬ್ರೂ ಹೀಗೇ ಜೋಡಿಯಾಗಿ ಇರುತ್ತೇವೆ. ಪಕ್ಷ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುವಾಗ ತೆಗೆದುಕೊಳ್ಳುತ್ತದೆ. ಅದು ಬೇರೆ. ನಾನು ಅಶೋಕ್ ಮಾತಿಗೆ ಜಗ್ಗಲ್ಲ. ಒಬ್ಬ ಮನುಷ್ಯ ಧೈರ್ಯವಾಗಿ ನಿಂತರೆ ಅದೇ ಬಹುಮತ ಎಂದು ಸೂಚ್ಯವಾಗಿ ತಿಳಿಸಿದರು.

**ಸಿದ್ದರಾಮಯ್ಯ ನನ್ನ ಜೊತೆಗಿದ್ದಾರೆ ಎಂದ ಡಿಕೆಶಿ:** 139 ಜನ ಹಾಗೂ ಸಿದ್ದರಾಮಯ್ಯ ನನ್ನ ಜೊತೆಗಿದ್ದಾರೆ. ರಾಜ್ಯದ ಜನರಿಗೆ ಕೊಟ್ಟ ಮಾತನ್ನು ಈಡೇರಿಸಿದ್ದಾರೆ. ನಾನು ಎಲ್ಲಾ ಸಂದರ್ಭದಲ್ಲಿ ಸಿದ್ದರಾಮಯ್ಯ ಜೊತೆಗೆ ನಿಂತಿದ್ದೇನೆ, ಅವರು ನನ್ನ ಜೊತೆಗೆ ನಿಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಳಿಕ ಮಾತನಾಡಿದ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ವಾಸ್ತವವಾಗಿ ಹೇಳಿದ್ದಾರೆ ಎಂದರು.

**ಆ ಸಮಯ ಯಾವುದು:** ಸಮಯಾನೇ ಉತ್ತರ ಕೊಡುತ್ತದೆ ಎಂದು ಡಿಕೆ ಶಿವಕುಮಾರ್ ಹೇಳುತ್ತಾರೆ. ಆದರೆ ಆ ಸಮಯ ಯಾವುದು ಎಂದು ಆರ್ ಅಶೋಕ್ ವ್ಯಂಗ್ಯವಾಡಿದರು. 56 ಜನ ಡಿಕೆ ಶಿವಕುಮಾರ್ ಜೊತೆಗೆ ಇದ್ದಾರೆ ಎಂದಿದ್ದರು. ಆದರೆ ಸಿದ್ದರಾಮಯ್ಯ ಬಣಕ್ಕೆ ಕೇಳಿದರು ಅವರಲ್ಲೇ ಬೆಳಗ್ಗೆ ಮನೆಗೆ ಬಂದಿದ್ದರು ಎಂದು ಹೇಳುತ್ತಾರೆ. ಹಾಗಾಗಿ ಯಾರು ಯಾವ ಕಡೆ ಇದ್ದಾರೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಸಂತೋಷ್ ಲಾಡ್ ಹೆಸರನ್ನು ಉಲ್ಲೇಖಿಸಿ ಕಾಲೆಳೆದರು. ಇದಕ್ಕೆ ಖಾರವಾಗಿಯೇ ಪ್ರತಿಕ್ರಿಯೆ ನೀಡಿದ ಸಚಿವ ಸಂತೋಷ್ ಲಾಡ್, ಬೆಳಗ್ಗೆ ರಾತ್ರಿ ವ್ಯವಸ್ಥೆಯಲ್ಲಿ ನಾವಿಲ್ಲ. ನನಗೆ ಆ ಅವಶ್ಯಕತೆ ಇಲ್ಲ. ನೀವು ಆ ರೀತಿಯಲ್ಲಿ ಸದನದಲ್ಲಿ ಮಾತನಾಡಬಾರದು. ಆದರೆ 16 ಜನರನ್ನು ಖರೀದಿ ಮಾಡಿದವರು ನೀವು ಎಂದು ಹೇಳಿದರು.

### ರಾಜ್ಯಕ್ಕೆ ಇಷ್ಟೊಂದು ಅನ್ಯಾಯ ಮಾಡ್ತಾರೆ ಅಂತ ನಿರೀಕ್ಷೆ ಇರಲಿಲ್ಲ

ವಿಬಿ ಜಿ ರಾಮ್ ಜಿ ನಲ್ಲಿ ರಾಮನ ಹೆಸರು ಸೇರಿಸಿದವರಿಗೆ ಬಹುಮಾನ ಕೊಡಬೇಕು ಎಂದು ಸಿಎಂ ಸಿದ್ದರಾಮಯ್ಯ ವ್ಯಂಗ್ಯವಾಗಿ ತಿರುಗೇಟು ನೀಡಿದರು. ವಿ ಬಿ ಜಿ ರಾಮ್ ಜಿ (ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್ ಅಜೀವಿಕ್ ಮಿಷನ್ ಗ್ರಾಮೀಣ್)ಯಲ್ಲಿ ರಾಮನ ಹೆಸರನ್ನು ಸೇರಿಸಿದವರಿಗೆ ಬಹುಮಾನ ಕೊಡಬೇಕು. ಇದಕ್ಕಾಗಿ ಬಹಳ ಕಸರತ್ತು ಮಾಡಿದ್ದಾರೆ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು. ಎರಡು ದಿನಗಳ ಕಾಲ ಸದನದಲ್ಲಿ ಮನರೇಗಾ ಕುರಿತಾದ ಚರ್ಚೆ ಆಗಲಿದೆ ಎಂದು ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಸದನದಲ್ಲಿ ತಿಳಿಸಿದರು. ದೇವನಹಳ್ಳಿಯಲ್ಲಿ ರೈತರ ಜಮೀನು ವಾಪಸ್ ಕೊಡಲಾಗಿದೆ. ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ನೀಡಲಾಗಿದೆ. ಮೆಕ್ಕೆಜೋಳ ಬೆಳೆಗಾರರ ಸಮಸ್ಯೆಗೆ ಸರ್ಕಾರ ಸ್ಪಂದಿಸಿದೆ ಎಂದು ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡರು.

**ಜಿ ರಾಮ್ ಜಿ ರಾಮನ ಹೆಸರು ಸೇರಿಸಿದವರಿಗೆ ಬಹುಮಾನ!**

### ಕೈಗಾರಿಕೆಗೆ ಎಲ್ಲಿ ಜಾಗ ಬೇಕು ಹೇಳಲಿ

ಇಂಡಸ್ಟ್ರಿ ನಿರ್ಮಾಣ ಮಾಡಲು ಜಾಗ ನೀಡ್ತಿಲ್ಲ ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಆರೋಪದ ವಿಚಾರಕ್ಕೆ ಡಿಸಿಎಂ ಡಿಕೆಶಿ ಪ್ರತಿಕ್ರಿಯಿಸಿ, ಎಲ್ಲಿ ಯಾವ ಜಾಗ ಬೇಕು ಕೇಳ್ರಪ್ಪ, ರಾಮನಗರದಲ್ಲೇ ಹೇಳಲಿ ಅವರ ಜಮೀನನ್ನೇ ಸ್ವಾಧೀನ ಮಾಡಿಕೊಡ್ತೀನಿ. ಎಲ್ಲಿ ಬೇಕು ಹೇಳಲಿ, ಒಂದು ಅರ್ಜಿ ಕೊಡೋಕೆ ಹೇಳಿ. ಯಾವ ಫ್ಯಾಕ್ಟರಿ ಮಾಡ್ತೀನಿ ಅಂತ ಹೇಳಲಿ ನಾನು ಭೂಸ್ವಾಧೀನ ಮಾಡಿ ಕೊಡ್ತೀನಿ. ಅವರೆಲ್ಲಾ ಯಾಕೆ ರಾಜ್ಯ ರಾಜಕಾರಣಕ್ಕೆ ವಾಪಸ್ಸು ಬರ್ತಿನಿ ಅಂತಾವ್ರೆ, ಅಂದ್ರೆ ಅಲ್ಲೇನೋ ಇದೆ, ನನ್ನ ಬಾಯಲ್ಲಿ ಅದು ಬರೋದು ಬೇಡ. ಈಗ ಒಂದೂವರೆ ವರ್ಷ ಮಂತ್ರಿ ಆಗಿದ್ರಲ್ಲ, ರಾಜ್ಯಕ್ಕೆ ಅವರ ಕೊಡುಗೆ ಏನು ಎಂದು ಹೇಳಲಿ, ರಾಮನಗರಕ್ಕೆ ಆದರೂ ಬರಲಿ, ಇಲ್ಲ ಎಲ್ಲಿಗಾದ್ರೂ ಬರಲಿ ಅದು ಅವರ ಖುಷಿ. ನಾವ್ಯಾರು ಬೇಡ ಎನ್ನಲು ಎಂದು ಪ್ರಶ್ನಿಸಿದರು.

### ಮೇಕೆದಾಟು ಯೋಜನೆಗೆ ಹೊಸ ಡಿಪಿಆರ್

ಮೇಕೆದಾಟು ಸೇರಿ ನೀರಾವರಿ ಯೋಜನೆಗೆ ಅನುದಾನ ನೀಡದ ವಿಚಾರ,5300 ಕೋಟಿ ಏನು ಭದ್ರಾ ಮೇಲ್ದಂಡೆಗೆ ಹೇಳಿದರೋ ಅದನ್ನೇ ಮಾಡಿಲ್ಲ. ಮೇಕೆದಾಟು ಯೋಜನೆ ಆರಂಭಕ್ಕೆ ನಾವು ಈಗಾಗಲೇ ಸಿದ್ದತೆ ಮಾಡಿಕೊಳ್ತಿದ್ದೀವಿ. ಈಗ ಮತ್ತೆ ಹೊಸ ಡಿಪಿಆರ್ ಮಂಡಿಸಲಿದೆ. ಅರಣ್ಯ ಜಮೀನಿಗೆ ಪರ್ಯಾಯ ಜಮೀನು ಕೊಡಲು ಮಂಡ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ಮಾಡಲಾಗಿದೆ. ಯೋಜನೆಯಿಂದ ಮಂಡ್ಯ, ಮೈಸೂರು, ಚಾಮರಾಜನಗರ, ತುಮಕೂರು, ಹಾಸನಕ್ಕೆ ಅನುಕೂಲ ಆಗಲಿರುವುದರಿಂದ ಮಂಡ್ಯ ಜಿಲ್ಲಾಧಿಕಾರಿಗೆ ಜವಾಬ್ದಾರಿ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಜನ ಮತ ಹಾಕಿದ್ದಾರೆ ಅಂತ ನಮ್ಮ ಮೇಲೆ ದ್ವೇಷ ಕಾರುತ್ತಿದ್ದಾರೆ ಎಂದು ಆರೋಪಿಸಿದರು.

# ಅಕ್ರಮ ಬಾಂಗ್ಲಾ ವಲಸಿಗರ ಬಗ್ಗೆ ಸದನದಲ್ಲಿ ತೀವ್ರ ಚರ್ಚೆ

## ವಿಪಕ್ಷಗಳ ಆರೋಪಗಳಿಗೆ ಖಡಕ್ ಉತ್ತರ ಕೊಟ್ಟ ಸಿದ್ದು, ಪರಂ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅಕ್ರಮವಾಗಿ ಬಾಂಗ್ಲಾ ನಿವಾಸಿಗಳು ನೆಲೆಸಿದ್ದಾರೆ ಎಂಬ ವಿಚಾರ ಸದನದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಯಿತು. ಕೋಗಿಲು ಬಡಾವಣೆಯಲ್ಲಿ ಬಾಂಗ್ಲಾ ನಿವಾಸಿಗಳು ಇದ್ದಾರೆ ಎಂಬ ಬಿಜೆಪಿ ಆರೋಪಕ್ಕೆ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಖಡಕ್ ಆಗಿಯೇ ಉತ್ತರಿಸಿದರು. ಅಲ್ಲದೆ, ಸಿಎಂ ಸಿದ್ದರಾಮಯ್ಯ ಕೂಡಾ ಧ್ವನಿಗೂಡಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ವಿಪಕ್ಷ ನಾಯಕ ಆರ್ ಅಶೋಕ್ ಆದಿಯಾಗಿ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ಆರೋಪ ಮಾಡಿದ್ದರು. ಅಲ್ಲದೆ, ಪುನೀತ್ ಕೆರೆಹಳ್ಳಿ ವಿರುದ್ಧ ಕ್ರಮ ಕೈಗೊಂಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಪರಮೇಶ್ವರ್ ಸ್ಪಷ್ಟನೆ ನೀಡಿದರು.

ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹೊರರಾಜ್ಯಗಳಿಗೆ ಹೋಲಿಸಿದರೆ ನಾವು ಮುಂದೆ. ವಿವಿಧ ವರದಿಗಳೇ ಇದನ್ನು ಸ್ಪಷ್ಟಪಡಿಸಿವೆ. ಬಾಂಗ್ಲಾದಿಂದ ಅಕ್ರಮವಾಗಿ ಹೇಗೆ ಬರ್ತಾರೆ ಎಲ್ಲಿಂದ ನುಸುಳಿ ಬರ್ತಾರೆ ಕಲ್ಕತ್ತಾ ಮೂಲಕ ಬರ್ತಾರೆ. ಹಾಗಾದರೆ ಬಿಎಸ್‌ಎಫ್ ಸಿಬ್ಬಂದಿ ಯಾಕೆ ಅವರನ್ನು ತಡೆಯಲ್ಲ ಎಂದು ಪ್ರಶ್ನಿಸಿದರು. ಅಲ್ಲಿಂದ ಬಂದವರು ಕರ್ನಾಟಕಕ್ಕೆ ಮಾತ್ರ ಬರಲ್ಲ. ಬೇರೆ ಕಡೆಯೂ ಅವರು ಹೋಗ್ತಾರೆ. ನಾವು ಈಗಾಗಲೇ 197 ಜನರನ್ನು ನಾವು ಡಿಪೋರ್ಟ್ ಮಾಡಿದ್ದೇವೆ. 320 ಜನ ಬಾಂಗ್ಲಾದವರನ್ನು ಗುರುತಿಸಿದ್ದೇವೆ. ಅವರನ್ನೂ ವಾಪಸ್ ಕಳಿಸ್ತೇವೆ. ಕೊಡಗು, ಬೆಂಗಳೂರು ಹಾಗೂ ಚಿಕ್ಕಮಗಳೂರು ಕಡೆ ಬಾಂಗ್ಲಾದವರು ಹೆಚ್ಚಾಗಿದ್ದಾರೆ. ವಿಶೇಷ ಕಾರ್ಯಾಚರಣೆ ನಡೆಸಿ ಅವರನ್ನು ಪತ್ತೆ ಮಾಡಿ ವಾಪಸ್ ಕಳಿಸುತ್ತೇವೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಧ್ವನಿಗೂಡಿಸಿ, ''ದೇಶಕ್ಕೆ ಬಾಂಗ್ಲಾದವರು





ಹೇಗೆ ಒಳಗೆ ಬಂದರು ಗಡಿಯಿಂದ ತಾನೇ ಒಳಗೆ ಬರೋದು. ಅಲ್ಲಿ ಅವರನ್ನ ಹೇಗೆ ಬಿಟ್ರು. ಗೃಹ ಸಚಿವರು ಹೇಳಿದಂತೆ ಅಲ್ಲಿ ಲೋಪ ಆಗಿದೆ. ಇದರ ಬಗ್ಗೆ ಅವರು ಯಾಕೆ ಸುಮ್ಮನಿದ್ರು.

ರಾಜ್ಯದಲ್ಲಿ ಬಾಂಗ್ಲಾದೇಶಿಗರಿದ್ದರೆ ಅವರಿಗೆ ನಾವು ಮನೆ ಕೊಡಲ್ಲ. ಒಂದು ವೇಳೆ ಇದ್ರೂ, ಅವರನ್ನ ಹೊರಗೆ ಹಾಕುತ್ತೇವೆ'' ಎಂದು ಭರವಸೆ ನೀಡಿದರು.


**ಪುನೀತ್ ಕೆರೆಹಳ್ಳಿ ಕಾನೂನು ಉಲ್ಲಂಘಿಸಿದ್ದಾರೆ:** ಪುನೀತ್ ಕೆರೆಹಳ್ಳಿ ಕಾನೂನು ಉಲ್ಲಂಘಿಸಿದ್ದಾರೆ. ಅವರು ಅಕ್ರಮ ಬಾಂಗ್ಲಾ ನಿವಾಸಿಗಳ ಬಗ್ಗೆ ಪೊಲೀಸರಿಗೆ ಮಾಹಿತಿ ಕೊಡಬೇಕಿತ್ತು. ಅವರಿಗೆ ಯಾರು ಅಧಿಕಾರ ಕೊಟ್ರು ಅಲ್ಲಿ ಹೋಗಿ ಪರಿಶೀಲನೆ ಮಾಡಲು ಎಂದು ಪುನೀತ್ ಪರ ಮಾತಾಡಿದ ಬಿಜೆಪಿ ಸದಸ್ಯ ಅರವಿಂದ ಬೆಲ್ಲದ್ ಗೆ ಡಾ.ಜಿ ಪರಮೇಶ್ವರ್ ತಿರುಗೇಟು ನೀಡಿದರು.

# ರೈಲ್ವೆ ಬಜೆಟ್: ಕರ್ನಾಟಕ್ಕೆ 7,748 ಕೋಟಿ ರೂ. ಅನುದಾನ

## 61 ನಿಲ್ದಾಣಗಳನ್ನು 2,110 ಕೋಟಿ ರೂ. ವೆಚ್ಚದಲ್ಲಿ ಸಂಪೂರ್ಣ ಪುನರಾಭಿವೃದ್ಧಿ: ವಿ. ಸೋಮಣ್ಣ

• ಉದಯವಾಹಿನಿ, ಬೆಂಗಳೂರು

ಕರ್ನಾಟಕಕ್ಕೆ ಈ ಬಾರಿ ರೈಲ್ವೆ ಬಜೆಟ್‌ನಲ್ಲಿ 7,748 ಕೋಟಿ ರೂ. ನೀಡಲಾಗಿದೆ. ಪ್ರಮುಖವಾಗಿ 61 ನಿಲ್ದಾಣಗಳನ್ನು 2,110 ಕೋಟಿ ರೂ. ವೆಚ್ಚದಲ್ಲಿ ಸಂಪೂರ್ಣ ಪುನರಾಭಿವೃದ್ಧಿಗೆ ಗುರುತಿಸಲಾಗಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರಾಜ್ಯ ರೈಲ್ವೆ ಖಾತೆ ಸಚಿವ ವಿ ಸೋಮಣ್ಣ ತಿಳಿಸಿದರು.




2026-27ರ ರೈಲ್ವೆ ಬಜೆಟ್ ಮುಖ್ಯಾಂಶಗಳಿಗೆ ಸಂಬಂಧಿಸಿದಂತೆ ನೈರುತ್ಯ ರೈಲ್ವೆ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕರು, ಸಚಿವರಾದ ಅಶ್ವಿನಿ ವೈಷ್ಣವ್, ವಿ. ಸೋಮಣ್ಣ ಮಾಧ್ಯಮ ಜೊತೆ ಮಾತನಾಡಿದರು.

**7,748 ಕೋಟಿಗೆ ರೂಪಾಯಿಗೆ ಏರಿಕೆ:** ಕಳೆದ ದಶಕದಲ್ಲಿ ಬಜೆಟ್ ಹಂಚಿಕೆ ಮತ್ತು ನಿರಂತರ ಹೂಡಿಕೆಯಲ್ಲಿ ನಡೆದ ಐತಿಹಾಸಿಕ ಹೆಚ್ಚಳದಿಂದ ಕರ್ನಾಟಕವು ರೈಲ್ವೆ ಮೂಲಸೌಕರ್ಯದಲ್ಲಿ ಅಭೂತಪೂರ್ವ ಪರಿವರ್ತನೆಗೆ ಸಾಕ್ಷಿಯಾಗಿದೆ.

2009-14ರ ಅವಧಿಯಲ್ಲಿ 835 ಕೋಟಿ ರೂ.ಯಾಗಿದ್ದ ರಾಜ್ಯಕ್ಕೆ ಸರಾಸರಿ ವಾರ್ಷಿಕ ರೈಲ್ವೆ ಬಜೆಟ್ ಹಂಚಿಕೆ, 2026 27ರಲ್ಲಿ 7,748 ಕೋಟಿ ರೂ. ಏರಿಕೆಯಾಗಿದ್ದು, ಸುಮಾರು ಒಂಬತ್ತು ಪಟ್ಟು ಹೆಚ್ಚಳವಾಗಿದ್ದು ರಾಜ್ಯದಲ್ಲಿ ರೈಲು ಸಾರಿಗೆಯ ವೇಗವಾದ ಆಧುನೀಕರಣಕ್ಕೆ ಕಾರಣವಾಗಿದೆ ಎಂದು ಸಚಿವರು ತಿಳಿಸಿದರು.

ಈ ಹೆಚ್ಚಿದ ಹೂಡಿಕೆಯ ಪರಿಣಾಮವಾಗಿ ಕರ್ನಾಟಕದಾದ್ಯಂತ ಸುಮಾರು 52,950 ಕೋಟಿ ರೂ. ಮೌಲ್ಯದ ರೈಲ್ವೆ ಮೂಲಸೌಕರ್ಯ ಕಾಮಗಾರಿಗಳು ಪ್ರಸ್ತುತ ಪ್ರಗತಿಯಲ್ಲಿವೆ. ಇವು ಹೊಸ ರೈಲು ಹಳಿ ನಿರ್ಮಾಣ, ನಿಲ್ದಾಣಗಳ ಸಮಗ್ರ ಪುನರಾಭಿವೃದ್ಧಿ ಮತ್ತು ಪ್ರಮುಖ ಸುರಕ್ಷತಾ ಸುಧಾರಣೆಗಳನ್ನು ಒಳಗೊಂಡಿದ್ದು, ರಾಜ್ಯದ ಎಲ್ಲ ಭಾಗಗಳಲ್ಲಿ ಸಮತೋಲಿತ ಅಭಿವೃದ್ಧಿಯಾಗುತ್ತಿದೆ ಎಂದು ಹೇಳಿದರು.



### 12 ಜೋಡಿ ವಂದೇ ಭಾರತ್ ಎಕ್ಸ್‌ಪ್ರೆಸ್

ಪ್ರೀಮಿಯಂ ರೈಲು ಸೇವೆಗಳ ವಿಸ್ತರಣೆಯಿಂದ ರಾಜ್ಯದ ಒಳಗೂ ಹೊರಗೂ ಸಂಪರ್ಕದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಪ್ರಸ್ತುತ ಕರ್ನಾಟಕದಲ್ಲಿ 12 ಜೋಡಿ ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು 3 ಜೋಡಿ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಯಾಣದ ವೇಗ, ಆರಾಮ ಮತ್ತು ದಕ್ಷತೆಯನ್ನು ಹೆಚ್ಚಿಸಿವೆ. ಜಾಲ ವಿಸ್ತರಣೆ ಮತ್ತು ವಿದ್ಯುದೀಕರಣ ಕಾರ್ಯಗಳು ವೇಗವಾಗಿ ಮುನ್ನಡೆಯುತ್ತಿವೆ. 2014ರಿಂದ ರಾಜ್ಯದಲ್ಲಿ ಸುಮಾರು 1,750 ಕಿ.ಮೀ ಹೊಸ ರೈಲು ಹಳಿಗಳನ್ನು ನಿರ್ಮಿಸಲಾಗಿದೆ, ಇದು ಶ್ರೀಲಂಕಾದ ಸಂಪೂರ್ಣ ರೈಲು ಜಾಲದ ಉದ್ದಕ್ಕಿಂತ ಹೆಚ್ಚಾಗಿದೆ. ರಾಜ್ಯದಲ್ಲಿ 97% ವಿದ್ಯುದೀಕರಣ ಸಾಧಿಸಲಾಗಿದ್ದು, 3,368 ಕಿ.ಮೀ ರೈಲು ಮಾರ್ಗಗಳನ್ನು ವಿದ್ಯುದೀಕರಣಗೊಳಿಸಲಾಗಿದೆ. ಜೊತೆಗೆ, ಸುರಕ್ಷತೆ ಮತ್ತು ಸುಗಮ ರಸ್ತೆ, ರೈಲು ಸಂಪರ್ಕಕ್ಕಾಗಿ 707 ಫ್ಲೈಓವರ್‌ಗಳು ಮತ್ತು ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗಿದೆ ಎಂದು ರೈಲ್ವೆ ಇಲಾಖೆ ಮಾಹಿತಿ ನೀಡಿದೆ.

**ಕರ್ನಾಟಕದ 61 ನಿಲ್ದಾಣಗಳನ್ನು ಸಂಪೂರ್ಣ ಪುನರಾಭಿವೃದ್ಧಿ:** ಅಮೃತ್ ನಿಲ್ದಾಣ ಯೋಜನೆಯಡಿಯಲ್ಲಿ ಪ್ರಯಾಣಿಕರ ಅನುಭವವನ್ನು ಆಧುನಿಕ ಹಾಗೂ ವಿಶ್ವಮಟ್ಟದ ಸೌಲಭ್ಯಗಳ ಮೂಲಕ ಮರುರೂಪಿಸಲಾಗುತ್ತಿದೆ. 2,110 ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕದ 61 ನಿಲ್ದಾಣಗಳನ್ನು ಸಂಪೂರ್ಣ ಪುನರಾಭಿವೃದ್ಧಿಗೆ ಗುರುತಿಸಲಾಗಿದೆ. ಬಾಗಲಕೋಟೆ, ಧಾರವಾಡ, ಗದಗ, ಗೋಕಾಕ್ ರೋಡ್ ಮತ್ತು ಮುನಿರಾಬಾದ್ ನಿಲ್ದಾಣಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾದಾಮಿ, ಆಳ್ನಾವರ್, ಕೊಪ್ಪಳ ಮತ್ತು ಬಂಟವಾಳ ನಿಲ್ದಾಣಗಳು ಉದ್ಘಾಟನೆಗೆ ಸಿದ್ಧವಾಗಿವೆ. ಈ ನಿಲ್ದಾಣಗಳು ಪ್ರಯಾಣಿಕರಿಗೆ ಸುಧಾರಿತ ಸೌಲಭ್ಯಗಳು, ಉತ್ತಮ ವ್ಯವಸ್ಥೆ ಮತ್ತು ಆಧುನಿಕ ಪ್ರಯಾಣ ವಾತಾವರಣ ಒದಗಿಸುತ್ತವೆ ಎಂದು ಸಚಿವರುಗಳು ಮಾಹಿತಿ ನೀಡಿದರು.

**ಹೊಸಪೇಟೆ - ವಾಸ್ಕೋ ಜೋಡಿ ಮಾರ್ಗ:** 4,730 ಕೋಟಿ ರೂ. ಅಂದಾಜು ವೆಚ್ಚದಲ್ಲಿ 312 ಕಿ.ಮೀ ಉದ್ದದ ಹೊಸಪೇಟೆಯ ವಾಸ್ಕೋ ಡ ಗಾಮಾ ಜೋಡಿಮಾರ್ಗ ಯೋಜನೆ ಮಂಜೂರಾಗಿದ್ದು, ಇದು ಸಾಮರ್ಥ್ಯ ವೃದ್ಧಿಗೆ ಉತ್ತೇಜನ ನೀಡಲಿದೆ ಎನ್ನಲಾಗಿದೆ.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 91.67 ₹/L | ಬಂಗಾರ: ₹15,317/Gram24ct ₹14,040/Gram22ct | ಬೆಳ್ಳಿ: ₹300.00/Gram

# ಕಳಪೆ ನಿರ್ವಹಣೆಯ 8 ಪಿಜಿಗಳಿಗೆ ಬೀಗ, 500ಕ್ಕೂ ಅಧಿಕ ಪಿಜಿಗಳಿಗೆ ನೋಟಿಸ್

• ಉದಯವಾಹಿನಿ, ಬೆಂಗಳೂರು



ರಾಜ್ಯ ರಾಜಧಾನಿಯಲ್ಲಿ ದುಡಿಮೆ ಹಾಗೂ ವಿದ್ಯಾಭ್ಯಾಸ ಹೀಗೆ ಹಲವು ಕನಸು ಹೊತ್ತು ಬರುವವರಿಗೆ ಹೆಚ್ಚಾಗಿ ಆಶ್ರಯ ನೀಡುವುದೇ ಪೇಯಿಂಗ್ ಗೆಸ್ಟ್‌ಗಳು, ಪಿಜಿ ಕಟ್ಟಡಗಳು. ಆದರೆ ಇತ್ತೀಚೆಗೆ ಈ ಪಿಜಿಗಳ ಸರಿಯಾದ ನಿರ್ವಹಣೆಯಿಲ್ಲದೆ ಸಾಕಷ್ಟು ಅನಾಹುತಗಳಿಗೆ ಕಾರಣವಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಜಿಬಿಎ ಮುಂದಾಗಿದೆ.

**ರಾಜಧಾನಿಯ ಪಿಜಿಗಳಿಗೆ ಜಿಬಿಎ ಶಾಕ್:** ನಗರದಾದ್ಯಂತ ಇರುವ ಹಲವು ಪಿಜಿಗಳಲ್ಲಿ ಮೂಲ ಸೌಕರ್ಯಗಳಿಂದ ಹಿಡಿದು ನಿರ್ವಹಣೆಯಲ್ಲಿ ಕಟ್ಟಡ ನಿರ್ವಾಹಕರು ಎಡವುತ್ತಿದ್ದು, ಮೂಲಭೂತ ನಿಯಮಗಳನ್ನೇ ಬದಿಗಿಡುತ್ತಿವೆ.

ಈಗಾಗಲೇ ಇಂತಹ 8 ಅಸುರಕ್ಷಿತ ಪಿಜಿಗಳಿಗೆ ಜಿಬಿಎ ಬೀಗ ಜಡಿದಿದೆ. ಈ ಬೆನ್ನಲ್ಲೇ, ಸದ್ಯ 574 ಪಿಜಿಗಳಿಗೆ ನೋಟಿಸ್ ಜಾರಿ ಮಾಡುವ ಮೂಲಕ ದಂಡವನ್ನು ವಿಧಿಸಿದೆ. ಪಿಜಿಗಳ ಕಳಪೆ ನಿರ್ವಹಣೆಯನ್ನು ಸರಿಪಡಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

**ರಾಜಧಾನಿಯ ಪಿಜಿಗಳಿಗೆ ಜಿಬಿಎ ಶಾಕ್**

ಈ ಹಿನ್ನಲ್ಲೆಯಲ್ಲಿ ಈಗಾಗಲೇ ಜನವರಿ ತಿಂಗಳಿನಲ್ಲೇ ಶಾಂತಿನಗರ, ಗಾಂಧಿನಗರ, ಶಿವಾಜಿನಗರ , ಸಿ.ವಿ.ರಾಮನ್‌ನಗರ, ಚಾಮರಾಜಪೇಟೆ, ಚಿಕ್ಕಪೇಟೆ ಸೇರಿದಂತೆ ವಿವಿಧೆಡೆ ಇರುವ ಪಿಜಿಗಳಿಗೆ ಆರೋಗ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಈ ಬೆನ್ನಲ್ಲೇ, ಅಡುಗೆ ಕೋಣೆಯಲ್ಲಿನ ಶುಚಿತ್ವ, ಶುದ್ಧ ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಇತರೆ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡದೇ ಇರುವ 500ಕ್ಕೂ ಅಧಿಕ ಪಿಜಿಗಳಿಗೆ ನೋಟಿಸ್ ಅತ್ಯಂತ ಕಳಪೆ ನಿರ್ವಹಣೆ ಹೊಂದಿರುವ 8 ಪಿಜಿಗಳನ್ನು ಬಂದ್ ಮಾಡಿದ್ದು, ಇದರೊಂದಿಗೆ ಇತರೆ ನಿಯಮಗಳ ಉಲ್ಲಂಘನೆಗೆ ಒಟ್ಟಾರೆ 3.09 ಲಕ್ಷ ದಂಡ ವಿಧಿಸಲಾಗಿದೆ.

**ಪಿಜಿ ಮಾಲೀಕರಿಗೆ ಅಧಿಕಾರಿಗಳ ಖಡಕ್ ವಾರ್ನಿಂಗ್:** ಪಿಜಿ ನಿರ್ವಹಣೆಯಲ್ಲಿ ಕಡ್ಡಾಯ ನಿಯಮ ಪಾಲನೆ ಮಾಡುವಂತೆ ಪಿಜಿ ಮಾಲೀಕರಿಗೆ ಅಧಿಕಾರಿಗಳು ಖಡಕ್ ವಾರ್ನಿಂಗ್ ನೀಡಿದ್ದಾರೆ. ಸದ್ಯ ಪರಿಶೀಲನೆಗೆ ಒಳಪಟ್ಟ ಎಲ್ಲಾ ಪಿಜಿಗಳ ಮೇಲೆ ನಿಗಾ ವಹಿಸಿದ್ದು, ನ್ಯೂನ್ಯತೆ ಸರಿಪಡಿಸದೇ ಹೋದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ಪಿಜಿಗಳಿಗೆ ಬೀಗ ಬೀಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

ಈ ಕುರಿತು ಕಳವಳ ವ್ಯಕ್ತಪಡಿಸಿರುವ ಪಿಜಿ ಮಾಲೀಕರ ಸಂಘದ ಅಧ್ಯಕ್ಷ ಅಧ್ಯಕ್ಷ ಅರುಣ್ ಕುಮಾರ್ ಏಕಾಏಕಿ ನಡೆಸುತ್ತಿರುವ ಈ ದಾಳಿ ಕಾರ್ಯಚರಣೆಯಿಂದ ಪಿಜಿ ಮಾಲೀಕರು ಆತಂಕಕ್ಕೊಳಗಾಗಿದ್ದಾರೆ ಎಂದು ತಿಳಿಸಿದ್ದಾರೆ.

## ಹರಿನಾಮ ಸಂಕೀರ್ತನೆ

• ಉದಯವಾಹಿನಿ, ಬೆಂಗಳೂರು



ಪದ್ಮನಾಭನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಫೆಬ್ರವರಿ 5, ಗುರುವಾರ ಸಂಜೆ 6-45ಕ್ಕೆ ವಿದುಷಿ ಶ್ರೀಮತಿ ಸಂಧ್ಯಾ ಶ್ರೀನಾಥ್ ಇವರಿಂದ ಹರಿನಾಮ ಸಂಕೀರ್ತನೆ. ವಾದ್ಯ ಸಹಕಾರ : ಶ್ರೀ ಬಿ.ಆರ್. ಪ್ರಕಾಶ್ (ಕೀಬೋರ್ಡ್), ಶ್ರೀನಿವಾಸ ಕಾಖಂಡಕಿ (ತಬಲಾ). ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಆರ್.ಕೆ. ಲೇಔಟ್, ಪದ್ಮನಾಭನಗರ, ಬೆಂಗಳೂರು-560070 ಸರ್ವರಿಗೂ ಆತ್ಮೀಯ ಸುಸ್ವಾಗತ.

## ಮದ್ಯಸೇವಿಸಿ ಅಪಾರ್ಟ್‌ಮೆಂಟ್‌ನಿಂದ ಬಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಾವು

• ಉದಯವಾಹಿನಿ, ಬೆಂಗಳೂರು

ಮದ್ಯಪಾನ ಮಾಡಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಅಪಾರ್ಟ್‌ಮೆಂಟ್‌ನ 7ನೇ ಮಹಡಿಯಿಂದ ಬಿದ್ದು ಮೃತಪಟ್ಟಿರುವ ಘಟನೆ ರಾಜರಾಜೇಶ್ವರಿನಗರ ಪೊಲೀಸ್‌ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಡಾ. ವಿಷ್ಣುವರ್ಧನ್ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ನಿವಾಸಿ 15 ವರ್ಷದ ವಿದ್ಯಾರ್ಥಿ ಮೃತಪಟ್ಟಿರುವುದು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಜ.31 ರಂದು ಶಾಲೆಯಲ್ಲಿ ಫೇರ್‌ವೆಲ್ ಡೇ ಹಮ್ಮಿಕೊಳ್ಳಲಾಗಿತ್ತು. ಬಹುತೇಕ ವಿದ್ಯಾರ್ಥಿಗಳು ಕಾರ್ಯಕ್ರಮ ಮುಗಿಸಿಕೊಂಡು ತಮ್ಮ ತಮ್ಮ ಮನೆಗೆ ತೆರಳಿದ್ದಾರೆ. ಕೆಲ ವಿದ್ಯಾರ್ಥಿ ಸ್ನೇಹಿತರು ಸೇರಿಕೊಂಡು ಅಂದು ಸಂಜೆ ಪಬ್‌ವೊಂದಕ್ಕೆ ಹೋಗಿ ಮದ್ಯಪಾನ ಹಾಗೂ ಧೂಮಪಾನ ಮಾಡಿ ಮನೆಗೆ ಹೋಗಿದ್ದಾರೆ.ಈ ಪೈಕಿ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದ ವಿದ್ಯಾರ್ಥಿ 7ನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾನೆ. ಇದು ಆಕಸ್ಮಿಕವೇ ಅಥವಾ ಪೋಷಕರ ಭಯದಿಂದ ಆತಹತ್ಯೆ ಮಾಡಿಕೊಂಡನೇ, ಇಲ್ಲವೇ ಮದ್ಯಸೇವನೆಯಿಂದ ತೂರಾಡಿಕೊಂಡು ಬಿದ್ದಿರ ಬಹುದೇ ಎಂಬುವುದು ಪೊಲೀಸರ ತನಿಖೆಯಿಂದಷ್ಟೇ ಗೊತ್ತಾಗಬೇಕಿದೆ. ಪೊಲೀಸರ ತನಿಖೆ ವೇಳೆ ಈ ವಿದ್ಯಾರ್ಥಿ ಮದ್ಯಪಾನ ಹಾಗೂ ಧೂಮಪಾನ ಮಾಡಿರುವುದು ಗೊತ್ತಾಗಿದೆ. ಅದಕ್ಕೆ ಅವಕಾಶ ಮಾಡಿಕೊಟ್ಟ ಪಬ್‌ನ ಮಾಲೀಕರು, ಸಿಬ್ಬಂದಿಗಳ ವಿರುದ್ಧ ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

## 16 ವರ್ಷದೊಳಗಿನ ಮಕ್ಕಳಿಗೆ ಜಾಲತಾಣ ನಿಷೇಧ : ರಾಜ್ಯ ಸರ್ಕಾರ ಗಂಭೀರ ಚಿಂತನೆ

• ಉದಯವಾಹಿನಿ, ಬೆಂಗಳೂರು

ಆರೋಗ್ಯದ ಮೇಲೆ ವ್ಯಾಪಕ ದುಷ್ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ 16 ವರ್ಷದ ಒಳಗಿನ ಮಕ್ಕಳು, ಸಾಮಾಜಿಕ ಜಾಲತಾಣ ಬಳಸುವುದನ್ನು ನಿಷೇಧ ಮಾಡಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಒಂದು ಕಡೆ ಕೇಂದ್ರ ಸರ್ಕಾರವು 16 ವರ್ಷಗಳ ವಯೋಮಿತಿಯ ಮಕ್ಕಳು ಸಾಮಾಜಿಕ ಜಾಲತಾಣ ಬಳಕೆ ಮಾಡುವುದನ್ನು ನಿಷೇಧ ಮಾಡಲು ಸಂಸತ್ತಿನಲ್ಲಿ ಕಾಯ್ದೆ ಜಾರಿ ಮಾಡುವ ಬಗ್ಗೆ ಗಂಭೀರ ಚಿಂತನೆ ನಡೆಸಿದೆ.

ಮತ್ತೊಂದು ಕಡೆ ಆಂಧ್ರಪ್ರದೇಶ, ಗೋವಾ ಮತ್ತು ಬಿಹಾರದಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಕೆ ಮಾಡುವುದನ್ನು ನಿಷೇಧಿಸಲು ಹೊಸ ಐಟಿ ಕಾಯ್ದೆ ಜಾರಿಗೊಳಿಸುವ ಬಗ್ಗೆ ಚಿಂತನ ಮಂಥನ ನಡೆಸಲಾಗಿದೆ. ಎನ್‌ಡಿಎ ಪ್ರಮುಖ ಮಿತ್ರಪಕ್ಷ ಟಿಡಿಪಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾರಾದರೂ ಸಾಮಾಜಿಕ ಮಾಧ್ಯಮ ಖಾತೆಯನ್ನು ರಚಿಸುವುದು, ನಿರ್ವಹಿಸುವುದನ್ನು ನಿಷೇಧಿಸುವ ರಾಷ್ಟ್ರವ್ಯಾಪಿ ಮಸೂದೆಯನ್ನು ಪ್ರಸ್ತಾಪಿಸಿದೆ.

# ಬೆಂಗಳೂರಿನಲ್ಲಿ ಎರಡು ದಿನ ಬಹುತೇಕ ಸ್ಥಳಗಳಲ್ಲಿ ನೀರು ಬಂದ್

### 100 ಕ್ಕೂ ಹೆಚ್ಚು ಬಡಾವಣೆಗಳಿಗೆ ಫೆ.5, 6 ರಂದು ಕಾವೇರಿ ನೀರು ಸ್ಥಗಿತ, ನೀರು ಸಂಗ್ರಹಿಸಿಟ್ಟುಕೊಳ್ಳಲು ಮನವಿ

• ಉದಯವಾಹಿನಿ, ಬೆಂಗಳೂರು




ತುರ್ತು ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇದೆ ಫೆ.5 ಮತ್ತು ಫೆ.6ರಂದು ಎರಡು ದಿನಗಳ ಕಾಲ ಬೆಂಗಳೂರು ನಗರದ ವಿವಿಧೆಡೆ ಕಾವೇರಿ ನೀರು ಸರಬರಾಜುವಿನಲ್ಲಿ ವ್ಯತ್ಯಯ ಆಗಲಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರಾದ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅವರು ತಿಳಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಪೈಪ್‌ಲೈನ್ ಕಾಮಗಾರಿ ಅಡಿಯಲ್ಲಿ 1200 ಮಿ.ಮೀ. ಮತ್ತು 700 ಮಿ.ಮೀ. ವ್ಯಾಸದ ಕೊಳವೆ ಮಾರ್ಗಗಳನ್ನು ಜೋಡಿಸಲು ಕಾಮಗಾರಿಯನ್ನು ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ ಮೊದಲನೇ, ಎರಡನೇ ಹಂತಗಳ ಜಲರೇಚಕ ಯಂತ್ರಗಾರಗಳನ್ನು ಫೆ.5 (ಗುರುವಾರ)ರಂದು ಬೆಳಗ್ಗೆ 6ರಿಂದ ಫೆ.6 (ಶುಕ್ರವಾರ)ರ ಬೆಳಗ್ಗೆ 6ರವರೆಗೆ 24ಗಂಟೆಗಳ ಕಾಲ ಸ್ಥಗಿತಗೊಳಿಸಲಾಗುತ್ತಿದೆ. ಕಾವೇರಿ ನೀರು ಸರಬರಾಜು ಯೋಜನೆಯ ಜಲರೇಚಕ ಯಂತ್ರ ಗಾರಗಳ ಸ್ಥಗಿತತೆಯಿಂದ ಕಾವೇರಿ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದ್ದು, ನಾಗರಿಕರು ಮುಂಜಾಗ್ರತೆಯಾಗಿ ಅಗತ್ಯ ಇರುವ ನೀರನ್ನು ಸಂಗ್ರಹಣೆ ಮಾಡಿಟ್ಟುಕೊಳ್ಳಲು ಅಧ್ಯಕ್ಷರು ಕೋರಿದ್ದಾರೆ.

**ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿರುವ ಪ್ರದೇಶಗಳ ವಿವರ:** ಮಾಗಡಿ ರಸ್ತೆ, ಕದ್ರೆನಹಳ್ಳಿ, ಮಿನಜ್ ನಗರ, ಗಂಗಾಧರ ನಗರ, ಪ್ರಗತಿಪುರ, ಪದ್ಮನಾಭ ನಗರ,ಆರ್.ಕೆ ಲೇಔಟ್, ಚಿಕ್ಕಲ್ಲಸಂದ್ರ, ಹನುಮಗಿರಿ ನಗರ, ಮುನೇಶ್ವರ ನಗರ, ಬೇಂದ್ರೆನಗರ, ಕುಮಾರಸ್ವಾಮಿ ಬಡಾವಣೆ 1ನೇ ಮತ್ತು 2ನೇ ಹಂತ, ಚಂದ್ರನಗರ, ಮಾರುತಿ ಬಡಾವಣೆ, ವಿಠ್ಠಲ್ ನಗರ, ಇಸ್ರೋ ಬಡಾವಣೆ, ಟೀಚರ್ಸ್ ಕಾಲೋನಿ, ಯಲಚೇನಹಳ್ಳಿ, ಕನಕಪುರ ಮುಖ್ಯರಸ್ತೆ, ಇಲಿಯಾಸ್ ನಗರ, ಪೂರ್ಣ ಪ್ರಜ್ಞಾ ಲೇಔಟ್, ಉತ್ತರಹಳ್ಳಿ, ಕೆ.ಎಸ್. ಆರ್.ಟಿ.ಸಿ ಬಡಾವಣೆ, ಅಂಕಪ್ಪ ಬಡಾವಣೆ, ಗುಮ್ಮಯ್ಯ ಬಡಾವಣೆ, ಬನಶಂಕರಿ 5ನೇ ಹಂತ, ಎ.ಜಿ.ಎಸ್ ಬಡಾವಣೆ, ಸಾರ್ವಭೌಮನಗರ ಸುಬ್ರಮಣ್ಯಪುರ, ಬಿ.ಹೆಚ್.ಸಿ.ಎಸ್ ಬಡಾವಣೆ, ಕೆನರಾ ಬ್ಯಾಂಕ್ ಕಾಲೋನಿ, ಕಾಕತೀಯ ನಗರ,ಸುದಗುಂಟ ಪಾಳ್ಯ, ಮಾರುತಿ ನಗರ, ಭವಾನಿ ಲೇಔಟ್, ವೆಂಟೇಶ್ವರ ಲೇಔಟ್, ಬೃಂದಾವನ ಲೇಔಟ್, ಮಡಿವಾಳ, ಚಿನ್ನಮ್ಮ ಲೇಔಟ್, ಕೋರಮಂಗಲ 2,4,5,6,7 8 ನೇ ಬ್ಲಾಕ್, ಚಿಕ್ಕಆಡುಗೋಡಿ, ಸೆಂಟ್ ಜಾನ್ ಆಸ್ಪತ್ರೆ, ರಾಜೇಂದ್ರ ನಗರ, ಆಡುಗೋಡಿ, ಜಾನ್ಸನ್ ಮಾರ್ಕೆಟ್, ಸಿಎಲ್‌ಆರ್, ಶಾಂತಿನಗರ, ಲಾಗ್ ಪೋರ್ಡ್ ಟೌನ್, ಎಂಜಿ ರಸ್ತೆ, ರಿಚ್‌ಮಂಡ್ ಟೌನ್ , ನೀಲಸಂದ್ರ, ಅಶೋಕ್ ನಗರ, ಆಸ್ಟಿನ್ ಟೌನ್ ನಲ್ಲಿ ನೀರು ಸ್ಥಗಿತ ಆಗಲಿದೆ, ಅಲ್ಲದೆ ವಿವೇಕ್ ನಗರ, ಈಜಿಪುರ, ದೊಮ್ಮಲೂರು ಲೇಔಟ್, ದೊಮ್ಮಲೂರು ವಿಲೇಜ್, ಕೋಡಿಹಳ್ಳಿ, ಕಮಾಂಡೋ ಆಸ್ಪತ್ರೆ, ಜೋಗಿಪಾಳ್ಯ, ಕೇಂಬ್ರಿಡ್ಜ್ ಲೇಔಟ್ ಚಾಮರಾಜಪೇಟೆ, ಶ್ರೀನಗರ ಬಿಎಸ್‌ಕೆ 1ನೇ ಹಂತ, ಅಶೋಕ್ ನಗರ ಪೈಪ್ ಲೈನ್ ರಸ್ತೆ, ಜಯನಗರ 4ನೇ ಟಿ ಬ್ಲಾಕ್, ತಿಲಕ್ ನಗರ , ಮಾಧವನ ಪಾರ್ಕ್ , ಹೊಂಬೇಗೌಡ ನಗರ,ಲಕ್ಕಸಂದ್ರ, ಶಾಂತಿನಗರ ಲೇಔಟ್, ಜೆಕೆಪುರ, ಅಕ್ಕಿತಿಮ್ಮನ ಹಳ್ಳಿ, ಜಗಜೀವನರಾಮನಗರ, ರುದ್ರಪ್ಪ ಗಾರ್ಡನ್, ವಾಲ್ಮೀಕಿ ನಗರ, ಮಾವಳ್ಳಿ, ಶಂಕರಪುರಂ, ಕೆಂಪೇಗೌಡನಗರ, ಸುಧಾಮನಗರ, ಬನಗಿರಿ, ಜಯನಗರ, 6,7 8ನೇ ಬ್ಲಾಕ್, ಯಡಿಯೂರು, ಇಟ್ಟಮಡು, ಎಸ್‌ಬಿಎಂ ಕಾಲೋನಿ, ಹೊಸಕೆರೆಹಳ್ಳಿ, ಐಟಿಐ ಲೇಔಟ್, ಶ್ರೀನಿವಾಸ ನಗರ, ಡಿಸೋಜಾ ನಗರ, ಕೆರೆಕೋಡಿ, ಮುನೇಶ್ವರನಗರ, ಜೆಪಿನಗರ 1, 2 3ನೇ ಹಂತ, ಮಾರೇನಹಳ್ಳಿ, ಜಯನಗರ 5 9ಬ್ಲಾಕ್, ಭೈರಸಂದ್ರ, ಎಲ್ ಐ ಸಿ ಕಾಲೋನಿ, ಸಿದ್ದಾಪುರ, ವಿಲ್ಸನ್ ಗಾರ್ಡನ್, ನಿಮಾನ್ಸ್ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ನಿಲುಗಡೆ ಆಗಲಿದೆ.



**ನೀರು ಸರಬರಾಜಿನಲ್ಲಿ ವ್ಯತ್ಯಯ**

**ಬೆಂಗಳೂರಿನಲ್ಲಿ ಫೆಬ್ರವರಿ 5 ಮತ್ತು 6ರಂದು ಎರಡು ದಿನಗಳ ಕಾಲ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ತುರ್ತು ನಿರ್ವಹಣೆ ಕಾಮಗಾರಿ ಹಿನ್ನೆಲೆಯಲ್ಲಿ ನೀರು ಸರಬರಾಜು ಸ್ಥಗಿತಗೊಳಿಸಲಾಗುತ್ತಿದೆ. ನಾಗರಿಕರು ಮುಂಜಾಗ್ರತೆಯಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಸೂಚಿಸಲಾಗಿದೆ. ನಗರದ ಹಲವು ಪ್ರದೇಶಗಳಲ್ಲಿ ಈ ಅಡಚಣೆ ಎದುರಾಗಲಿದೆ.**

## ವಿವಾದಿತ ದ್ವೇಷ ಭಾಷಣ ತಡೆ ವಿಧೇಯಕವನ್ನು ಪರಿಶೀಲನೆಗಾಗಿ ರಾಷ್ಟ್ರಪತಿಗೆ ಕಳಿಸಿದ ರಾಜ್ಯಪಾಲ ಗೆಲ್ಹೋಟ್

• ಉದಯವಾಹಿನಿ, ಬೆಂಗಳೂರು

ಕಳೆದ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಪ್ರತಿಪಕ್ಷಗಳ ವಿರೋಧದ ನಡುವೆಯೂ ವಿಧಾನಮಂಡಲದ ಉಭಯ ಸದನಗಳಲ್ಲಿ ಅಂಗೀಕರಿಸಿದ್ದ ವಿವಾದಿತ ಕರ್ನಾಟಕ ದ್ವೇಷ ಭಾಷಣ, ದ್ವೇಷ ಅಪರಾಧಗಳ ವಿಧೇಯಕಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸಹಿ ಹಾಕದೆ, ರಾಷ್ಟ್ರಪತಿ ಅಂಗಳಕ್ಕೆ ಕಳುಹಿಸಿದ್ದಾರೆ.

ಕರ್ನಾಟಕ ದ್ವೇಷ ಭಾಷಣ, ದ್ವೇಷ ಅಪರಾಧಗಳ ವಿಧೇಯಕಕ್ಕೆ ರಾಜ್ಯಪಾಲರು ಸಹಿ ಹಾಕದೆ ರಾಷ್ಟ್ರಪತಿಗೆ ರವಾನೆ ಮಾಡಿದ್ದಾರೆ. ಈ ವಿಧೇಯಕದ ಪರಿಶೀಲನೆಗಾಗಿ ರವಾನೆ ಮಾಡಿದ್ದಾರೆ. ರಾಜ್ಯಪಾಲರ ಈ ನಿರ್ಧಾರ ಸರ್ಕಾರದಿಂದ ತೀವ್ರ ಟೀಕೆಗೆ ಗುರಿ ಆಗಿದ್ದು, ಸರ್ಕಾರದ ರಾಜಕೀಯ ದುರುದ್ದೇಶಕ್ಕೆ ಹಿನ್ನಡೆಯಾಗಿದೆ ಎಂದು ಹೇಳಲಾಗುತ್ತಿದೆ.

ತಮ್ಮ ನಿರ್ಧಾರಕ್ಕೆ ಸ್ಪಷ್ಟನೆಯಾಗಿ 29 ಪ್ರಮುಖ ಕಾರಣಗಳನ್ನು ಉಲ್ಲೇಖಿಸಿದ್ದಾರೆ. ಈ ಹಿನ್ನೆಲೆ ದ್ವೇಷ ಭಾಷಣ ಮಸೂದೆ ಮತ್ತೊಮೆ ರಾಷ್ಟ್ರಮಟ್ಟದಲ್ಲಿ ಮಹತ್ವ ಪಡೆದುಕೊಂಡಿದೆ.



ಅಲ್ಲದೆ, ರಾಜ್ಯಪಾಲರು, ಕಾಂಗ್ರೆಸ್ ಸರ್ಕಾರದ ನಡುವಣ ಸಂಘರ್ಷಕ್ಕೆ ಮತ್ತೊಂದು ಹಂತಕ್ಕೆ ಬಂದಿದೆ.ಈ ಮಸೂದೆ ವಿರುದ್ಧ ಈಗಾಗಲೇ 40ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿರುವುದು ಗಮನಾರ್ಹ. ದ್ವೇಷ ಭಾಷಣದ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಈ ಅಸ್ಪಷ್ಟತೆಯಿಂದಾಗಿ ಧರ್ಮ, ಜಾತಿ, ಜನಾಂಗ, ವ್ಯಕ್ತಿಗಳ ಮೇಲೆ ಪೂರ್ವಾಗ್ರಹದಿಂದ ಕ್ರಮ ಜರುಗುವ ಸಾಧ್ಯತೆಯನ್ನು ಹೆಚ್ಚಿಸಲಿದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ.

ಮಸೂದೆಯನ್ನು ಉಭಯ ಸದನಗಳಲ್ಲಿ ಅರ್ಥಪೂರ್ಣ ಮತ್ತು ಸಮಗ್ರ ಚರ್ಚೆಗೆ ಒಳಪಡಿಸದೇ ಅಂಗೀಕರಿಸಲಾಗಿದೆ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟಿದ್ದಾರೆ. ಇದರ ಪರಿಣಾಮವಾಗಿ ಸಂವಿಧಾನಾತ್ಮಕವಾಗಿ ಸಂರಕ್ಷಿತ ಪ್ರಜಾ ಪ್ರಭುತ್ವದ ಚರ್ಚೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಗಂಭೀರ ಧಕ್ಕೆಯಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದ್ದಾರೆ.

**ರಾಷ್ಟ್ರಪತಿಗಳಿಗೆ**

**ಮೂಲಭೂತ ಹಕ್ಕನ್ನು ಕಸಿಯುವ ಭೀತಿ**

**ಇದಲ್ಲದೆ, ಮಸೂದೆಯಲ್ಲಿ ಹಲವಾರು ಕಾನೂನು ತೊಡಕುಗಳು ಇರುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ. ಇದು ಮಿತಿ ಮೀರಿದ ಭಯಾನಕ ಪರಿಣಾಮಗಳನ್ನು ಬೀರುವ ಸಾಧ್ಯತೆ ಇದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬ ಮೂಲಭೂತ ಹಕ್ಕನ್ನು ಕಸಿಯುವ ಭೀತಿ ಇದರಿಂದ ಉಂಟಾಗಬಹುದು ಎಂಬುದೂ ಅವರ ಪ್ರಮುಖ ಆಕ್ಷೇಪವಾಗಿದೆ.**

**ದ್ವೇಷ ಭಾಷಣ ವಿಧೇಯಕ ರವಾನೆ:** ವಿಧೇಯಕದಲ್ಲಿ ದ್ವೇಷ ಭಾಷಣಕ್ಕೆ ಸಂಬಂಧಿಸಿದ ಕಠಿಣ ನಿಬಂಧನೆ ಗಳಿವೆ ಆದರೆ ಇದು ಸಂವಿಧಾನದ ಅನುಚ್ಛೇದ 19ರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ವಿರೋಧಿಗಳು ಆರೋಪಿಸಿದ್ದಾರೆ. ವಿಧೇಯಕ ಸಮಗ್ರ ಚರ್ಚೆಯಿಲ್ಲದೆ ಮಂಡಿಸಲಾಗಿದೆ ಎಂದು ರಾಜ್ಯಪಾಲರ ಅಭಿಪ್ರಾಯವಿದೆ.

## ಶಾಸಕರಿಗೆ ಲ್ಯಾಪ್‌ಟಾಪ್ ಅಥವಾ ಐಫೋನ್‌ಕೊಡುತ್ತೇನೆ, ಆದರೆ ಒಂದು ಕಂಡೀಷನ್: ಯು.ಟಿ.ಖಾದರ್

• ಉದಯವಾಹಿನಿ, ಬೆಂಗಳೂರು



ಶಾಸಕರಿಗೆ ಲ್ಯಾಪ್‌ಟಾಪ್ ಅಥವಾ ಐಫೋನ್ ನೀಡುವ ಆಲೋಚನೆ ತಮಗಿದೆ. ಅದನ್ನು ಶಾಸಕರು ಮಾತ್ರ ಬಳಕೆ ಮಾಡಬೇಕು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಷರತ್ತು ವಿಧಿಸಿದ್ದಾರೆ. ವಿಧಾನಸಭೆಯ ಕಲಾಪದ ಆರಂಭದಲ್ಲಿ ಬಿಜೆಪಿ ಶಾಸಕ ಪ್ರಭು ಚವ್ಹಾಣ್ ಅವರು ಶಾಸಕರಿಗೆ ಲ್ಯಾಪ್ ಟಾಪ್ ಕೊಡಿ ಎಂದು ಮನವಿ ಮಾಡಿದರು. ಅದಕ್ಕೆ ಸ್ಪಂದಿಸಿದ ಸಭಾಧ್ಯಕ್ಷರು ತಮಗೆ ಲ್ಯಾಪ್ ಟಾಪ್ ನೀಡುವ ಆಲೋಚನೆ ಇದೆ. ಆದರೆ ಅದನ್ನು ಶಾಸಕರು ತಾವು ಬಳಸದೆ ಸ್ನೇಹಿತರಿಗೆ, ಹಿತೈಷಿಗಳಿಗೆ, ಬಂಧುಗಳಿಗೆ, ಅಕ್ಕ-ತಮ್ಮ, ಆಪ್ತ ಸಹಾಯಕರಿಗೆ ನೀಡುವುದಾದರೆ ಪ್ರಯೋಜನ ಆಗುವುದಿಲ್ಲ. ಖುದ್ದಾಗಿ ಶಾಸಕರೇ ಬಳಸುವುದಾದರೆ ಕೊಡುತ್ತೇನೆ ಎಂದರು.

ಜೊತೆಗೆ ಲ್ಯಾಪ್‌ಟಾಪ್ ಬಳಕೆ ಮಾಡಲು ಶಾಸಕರಿಗೆ ಮೂರು ದಿನಗಳ ತರಬೇತಿ ನೀಡಲಾಗುವುದು. ಅದರಲ್ಲಿ ಭಾಗವಹಿಸಿದವರಿಗೆ ಮಾತ್ರ ಐಪಾಡ್ ನೀಡುತ್ತೇನೆ ಎಂದು ಸಭಾಧ್ಯಕ್ಷರು ಹೇಳಿದರು.


ವಿಧಾನಸಭೆಯ ಕಲಾಪದ ಆರಂಭದಲ್ಲಿ ಸಚಿವರ, ಶಾಸಕರ ಹಾಜರಾತಿ ಕಡಿಮೆ ಇರುವುದು ವಿರೋಧ ಪಕ್ಷಗಳ ಕೆಂಗೆಣ್ಣಿಗೆ ಗುರಿಯಾಯಿತು.

ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಆರಂಭದಲ್ಲೇ ಹಿಂದಿನ ದಿನ ಕಲಾಪಕ್ಕೆ ನಿಗದಿತ ಸಮಯಕ್ಕೆ ಹಾಜರಾದ ಶಾಸಕರ ಹೆಸರುಗಳನ್ನು ಪ್ರಕಟಿಸಿದರು. ಬಳಿಕ ವಿರೋಧ ಪಕ್ಷದ ನಾಯಕ ಅಶೋಕ್, ಸಚಿವರ ಸಾಲಿನಲ್ಲಿ ಯಾರೂ ಇಲ್ಲ. ಆಡಳಿತ ಪಕ್ಷದ ಸದಸ್ಯರ ಸಂಖ್ಯೆಯು ಕಡಿಮೆ ಇದೆ.

ಟ್ರೆಜರಿ ಬ್ಯಾಂಕ್ ಸಂಪೂರ್ಣ ಖಾಲಿ ಇದೆ. ರಾಜ್ಯಪಾಲರ ಭಾಷಣದ ಮೇಲೆ ನಾವು ಚರ್ಚೆ ಮಾಡಿದರೂ ಅದನ್ನು ಬರೆದುಕೊಳ್ಳಲು ಯಾರೂ ಇಲ್ಲ ಎಂದು ಆಕ್ಷೇಪಿಸಿದರು. ಸುರೇಶ್‌ಕುಮಾರ್ ಅವರು ನಮಗೆ ಮಾತನಾಡಲು ಸ್ಫೂರ್ತಿ ಬೇಕಾದರೆ ಅದನ್ನು ಕೇಳಿಸಿಕೊಳ್ಳಲು ಸಚಿವರು, ಶಾಸಕರು ಇರಬೇಕು. ಇಲ್ಲಿ ಯಾರೂ ಇಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಸಂತೋಷ್ ಲಾಡ್ ಅವರು ಸದನದಲ್ಲಿದ್ದಾರೆ. ಉಳಿದವರು ಬರುತ್ತಾರೆ. ನೀವು ಮಾತನಾಡಿ ಎಂದು ಸಭಾಧ್ಯಕ್ಷರು ಸಲಹೆ ನೀಡಿದರು.

## ರಾಜಕಾರಣದಲ್ಲಿ ಪ್ರಭಾವಿಗಳಿಗೆ ತಲೆನೋವಾದ ಎಐ ತಂತ್ರಜ್ಞಾನ

• ಉದಯವಾಹಿನಿ, ಬೆಂಗಳೂರು



ಆಧುನಿಕ ತಂತ್ರಜ್ಞಾನ ಯುಗದಲ್ಲಿ ದಿನೇ ದಿನೇ ಹೊಸ ಸವಾಲುಗಳು ಸೃಷ್ಟಿಯಾಗುತ್ತಿದ್ದು, ಕೃತಕಬುದ್ಧಿ ಮತ್ತೆ ತಂತ್ರಜ್ಞಾನ ಬಳಸಿ ಸೃಷ್ಟಿಸಲಾಗುತ್ತಿರುವ ಕಿರುಚಿತ್ರಗಳು ರಾಜಕಾರಣದಲ್ಲಿ ಪ್ರಭಾವಿಗಳಿಗೆ ತೀವ್ರ ತಲೆನೋವಾಗಿ ಪರಿಣಮಿಸಿವೆ. ಪ್ರಭಾವಿ ನಾಯಕರುಗಳ ಮಾದರಿಯಲ್ಲೇ ವಿಡಿಯೋ ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡಲಾಗುತ್ತಿದ್ದು, ವಿರೋಧಿಗಳು ತಮ್ಮ ಎದುರಾಳಿಗಳ ತೇಜೋವಧೆ ಮಾಡಲು ಕೃತಕಬುದ್ಧಿ ಮತ್ತೆ ತಂತ್ರಜ್ಞಾನ ಬಳಸಿ ತಯಾರಿಸುವ ವಿಡಿಯೋಗಳನ್ನು ಬಳಕೆ ಮಾಡುತ್ತಿದ್ದಾರೆ.

ಆರಂಭದಲ್ಲಿ ಬಿಜೆಪಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮಾದರಿಯ ಕೃತಕ ಬುದ್ಧಿಮತ್ತೆಯ ಕಿರುಚಿತ್ರಗಳನ್ನು ತಯಾರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದರು. ಆ ಕಿರುಚಿತ್ರದಲ್ಲಿ ಅಧಿಕಾರ ಹಂಚಿಕೆಯ ಸಂದರ್ಭದಲ್ಲಿನ ಗೊಂದಲಗಳ ಬಗ್ಗೆ ನಾನಾ ರೀತಿಯ ವ್ಯಾಖ್ಯಾನ ಮಾಡಲಾಗಿತ್ತು. ಮತ್ತೊಂದು ಹೆಜ್ಜೆ ಮುಂದೆ ಹೋಗಿ ನಾವಿಬ್ಬರೂ ಜಂಟಿಯಾಗಿ ರಾಜ್ಯವನ್ನು ಲೂಟಿ ಮಾಡುತ್ತಿದ್ದೇವೆ ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮಾತನಾಡಿಕೊಂಡಂತೆಯೂ ನಕಲಿ ವಿಡಿಯೋಗಳನ್ನು ಸೃಷ್ಟಿಸಿ ಹರಿಯಬಿಡಲಾಗಿತ್ತು.

ಇತ್ತೀಚೆಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ಉಂಟಾದ ಗೊಂದಲಕ್ಕೆ ಕೌಂಟರ್ ಎಂಬಂತೆ ಯುವ ಕಾಂಗ್ರೆಸ್ ವತಿಯಿಂದ ಪ್ರಧಾನಿ ನರೇಂದ್ರಮೋದಿ ಮತ್ತು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಹೋಲುವ ನಕಲಿ ವಿಡಿಯೋಗಳನ್ನು ತಯಾರಿಸಿ ಯುವ ಕಾಂಗ್ರೆಸ್ ತನ್ನ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿತ್ತು. ಇತ್ತೀಚೆಗೆ ಬಳ್ಳಾರಿ ಗಲಭೆಗೆ ಸಂಬಂಧಪಟ್ಟಂತೆ ನಾರಾ ಭರತ ರೆಡ್ಡಿ ಬೆಂಬಲಿಗರ ಹೆಸರಿನಲ್ಲಿ ಒಂದಿಷ್ಟು ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಲಾಗಿದೆ.

ಅದರಲ್ಲಿ ಜನಾರ್ಧನ ರೆಡ್ಡಿ, ಶ್ರೀರಾಮುಲು ಅವರನ್ನು ಹೋಲುವ ವಿಡಿಯೋಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ರಾಜಕಾರಣದಲ್ಲಿ ತಮಗೆ ಇಷ್ಟವಾಗದೇ ಇರುವವರನ್ನು ತೇಜೋವಧೆ ಮಾಡಲು ಅಥವಾ ತಮ್ಮ ಅಭಿಪ್ರಾಯವನ್ನು ಬೇರೆಯವರ ಬಾಯಲ್ಲಿ ಹೇಳಿಸಿ ವಿಡಂಬಣೆ ಮಾಡಲು ಕೃತಕಬುದ್ಧಿಮತ್ತೆಯ ಈ ವಿಡಿಯೋಗಳನ್ನು ಬಳಸಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಇದು ವಿಪರೀತಕ್ಕೂ ತಲುಪಿರುವ ಉದಾಹರಣೆಗಳಿವೆ.

ವಿಡಿಯೋದಲ್ಲಿ ನೈಜ ವ್ಯಕ್ತಿಗಳ ಚಹರೆ ಮತ್ತು ದೈಹಿಕ ಸ್ವರೂಪವನ್ನು ಚಿತ್ರಿಸಲಾಗುತ್ತದೆ. ಅಮಾಯಕರಿಗೆ ಇದು ಕೃತಕ ವಿಡಿಯೋ ಎಂದು ಅರ್ಥವಾಗುವ ಸಾಧ್ಯತೆಗಳು ಕಡಿಮೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಹೋಲುವ ವಿಡಿಯೋಗಳನ್ನು ತಯಾರಿಸಿ ನಾವಿಬ್ಬರು ಸೇರಿ ಭ್ರಷ್ಟಾಚಾರ ಮಾಡುತ್ತೇವೆ ಎಂಬಂತೆ ಚಿತ್ರಿಸುವುದು ಜನಸಾಮಾನ್ಯರನ್ನು ಸುಲಭವಾಗಿ ದಾರಿ ತಪ್ಪಿಸಲು ಅವಕಾಶ ಮಾಡಿಕೊಡುತ್ತಿದೆ.

## ಕೇಂದ್ರದ ವಿರುದ್ಧ ಕಾಲು ಕೆರೆದು ಜಗಳವಾಡುವ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಕಾಂಗ್ರೆಸ್ ಸರ್ಕಾರ ಕೇಂದ್ರದ ವಿರುದ್ಧ ಪದೇ ಪದೇ ಕಾಲು ಕೆರೆದು ಜಗಳವಾಡುತ್ತಿದ್ದು, ದ್ವೇಷದ ಭಾವನೆ ಸೃಷ್ಟಿಸುತ್ತಿದೆ. ಇದರಿಂದಾಗಿ ಅಭಿವೃದ್ಧಿಗೆ ಹಿನ್ನಡೆ ಉಂಟು ಮಾಡುತ್ತಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, ಕೇಂದ್ರ, ರಾಜ್ಯ ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಅವರು ಕೇಂದ್ರದೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸಿದ್ದರಿಂದಾಗಿ ಬೆಂಗಳೂರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮೆಟ್ರೊ ರೈಲು ಅನುಷ್ಠಾನಕ್ಕೆ ಬಂದವು. ಕಾಲು ಕೆರೆದು ಜಗಳವಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದರು.



**ದೇವರು ನೆಲೆಸಲಿ ಎಂದು ದೇವಸ್ಥಾನ ಕಟ್ಟುತ್ತೇವೆ. ಅಲ್ಲಿ ದೇವರಿಗಿಂತ ಮೊದಲು ಪಿಶಾಚಿಗಳು ಸೇರಿಕೊಂಡರೆ ಅಂಥ ದೇವಸ್ಥಾನ ನಮಗೆ ಬೇಡ. ಅದನ್ನು ಕೆಡವಲೇ ಬೇಕಾಗುತ್ತದೆ. ಅದಕ್ಕಾಗಿ ಸಂವಿಧಾನ ಸುಡುತ್ತೇನೆ ಎಂದು ಹೇಳಿದ್ದಾಗಿ ಅಂಬೇಡ್ಕರ್ ಸ್ಪಷ್ಟಪಡಿಸಿದ್ದಾರೆ, ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಕೆಲವೇ ಯೋಜನೆಗಳಿಗೆ ಇಡಲಾಗಿದೆ. ಆದರೆ ನಕಲಿ ಗಾಂಧಿಗಳ ಹೆಸರನ್ನು ಇಟ್ಟಿರುವ ಪಟ್ಟಿ ತಮ್ಮ ಬಳಿ ಇದ್ದು ಅದು ಬಹಳ ಉದ್ದವಿದೆ.**

**-ಆರ್.ಅಶೋಕ್**
**ವಿರೋಧ ಪಕ್ಷದ ನಾಯಕ**

ಕಾಂಗ್ರೆಸ್‌ನವರಿಗೆ ರಾಮನ ಕಂಡರೆ ಸಹ್ಯವಾಗುವುದಿಲ್ಲ. ಅದಕ್ಕಾಗಿ ವಿಕಸಿತ ಭಾರತ, ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಯೋಜನೆಗೆ ವಿರೋಧ ಮಾಡುತ್ತಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ 12 ಪುಟಗಳಷ್ಟು ವಿಬಿಜಿ ರಾಮ್‌ಜಿ ಯೋಜನೆಯನ್ನು ಟೀಕಿಸಲು ಬಳಕೆ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ವಿಬಿ ಜಿ ರಾಮ್‌ಜಿ ಯಲ್ಲಿರುವುದು ಶ್ರೀರಾಮನ ಹೆಸರಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿ ಆಕ್ಷೇಪಿಸಿದರು. ಸಚಿವ ಭೈರತಿ ಸುರೇಶ್ ಮಾತನಾಡಿ, ಬಿಜೆಪಿಯವರು ಎಲ್ಲದಕ್ಕೂ ದೇವರನ್ನೇ ಎಳೆದು ತರುವುದು ಏಕೆ ಎಂದು ಪ್ರಶ್ನಿಸಿದರು. ಬಿಜೆಪಿಯ ಸುರೇಶ್‌ಕುಮಾರ್, ರಾಜ್ಯಪಾಲರ ಭಾಷಣದಲ್ಲಿ ವಿಬಿಜಿ ರಾಮ್ ಜಿ ಅನ್ನು ಕಾಂಗ್ರೆಸ್ ಸರ್ಕಾರ ವಿಬಿ ಗ್ರಾಮ್ ಜೀ ಎಂದು ಬದಲಾವಣೆ ಮಾಡಿದೆ ರಾಮನ ಕಂಡರೆ ಇವರಿಗೆ ಸಹನೆ ಇಲ್ಲ ಎಂದರು.

ರಾಮಲಿಂಗಾರೆಡ್ಡಿ ಅವರ ಹೆಸರಿನಲ್ಲೇ ರಾಮ ಇದ್ದಾನೆ ಎಂದು ಭೈರತಿ ಸುರೇಶ್ ಹೇಳಿದಾಗ, ಅಶೋಕ್ ಅವರು ಇವರೇ ಆಗಿದ್ದರೆ ರಾಮನ ಹೆಸರು ಇಟ್ಟುಕೊಳ್ಳುತ್ತಿರಲಿಲ್ಲ. ಅವರ ತಂದೆ ನಾಮಕರಣ ಮಾಡಿದ್ದಕ್ಕೆ ಆ ಹೆಸರು ಉಳಿದಿದೆ ಎಂದು ಅಶೋಕ್ ಲೇವಡಿ ಮಾಡಿದರು.

# ಹೆಬ್ಬಾಳ ಸೇರಿ 30 ಬಡಾವಣೆಗಳಲ್ಲಿ ವಿದ್ಯುತ್ ಕಡಿತ

### ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ ಕರೆಂಟ್ ಇರಲ್ಲ, ತುರ್ತು ನಿರ್ವಹಣಾ ಕಾಮಗಾರಿಗಾಗಿ ಈ ಅಡಚಣೆ ಎಂದ ಬೆಸ್ಕಾಂ

• ಉದಯವಾಹಿನಿ, ಬೆಂಗಳೂರು



ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಾಹಣಾ ಕಾಮಗಾರಿ ಬೆಂಗಳೂರಿನ ಹಲವು ಬಡಾವಣೆಗಳಲ್ಲಿ ಬುಧವಾರ (ಫೆಬ್ರವರಿ 4) ಬೆಳಿಗ್ಗೆಯಿಂದ ಸಂಜೆವರೆಗೂ ವಿದ್ಯುತ್ ವ್ಯತ್ಯಯವಾಗಲಿದೆ. ಈ ಬಗ್ಗೆ ಬೆಸ್ಕಾಂನಿಂದ ಮಾಹಿತಿ ನೀಡಲಾಗಿದೆ. ಹೆಬ್ಬಾಳ ವಿಭಾಗದ 66/11 ಕೆವಿಎ ಎಲ್.ಆರ್.ಬಂಡೆ ಉಪಕೇಂದ್ರ ವ್ಯಾಪ್ತಿಯಲ್ಲಿ ಬುಧವಾರ ಬೆಳ್ಳಿಗೆ 11 ರಿಂದ ಸಂಜೆ 4 ಗಂಟೆಗಳವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಬೆಸ್ಕಾಂ ವಿದ್ಯುತ್ ಕಡಿತವಾಗುವ ಪ್ರದೇಶಗಳು ಎಲ್ಲೆಲ್ಲಿ ?:** ಕಾವಲಬೈರಸಂದ್ರ, ಎಲ್.ಆರ್.ಬಂಡೆ ಮುಖ್ಯರಸ್ತೆ, ಗಾಂಧಿನಗರ, ಚಿನ್ನಣ್ಣ ಲೇಔಟ್, ಅಂಬೇಡ್ಕರ್ ಲೇಔಟ್, ಅನ್ವರ್ ಲೇಔಟ್, ಕಾವೇರಿ ನಗರ, ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಸುಲ್ತಾನ್ ಪಾಳ್ಯ, ರಂಕಾನಗರ, ಕನಕನಗರ, ಕೆ.ಎಚ್.ಬಿ ಮುಖ್ಯರಸ್ತೆ, ಭುವನೇಶ್ವರಿ ನಗರ, ಡಿ.ಜಿ.ಎ ಹಳ್ಳಿ, ಕೆ.ಜೆ.ಹಳ್ಳಿ, ಕೆ.ಜೆಕಾಲೋನಿ, ಆದರ್ಶ ನಗರ, ವಿ.ನಾಗೇನಹಳ್ಳಿ, ಪೆರಿಯಾರ್ ನಗರ, ಪೆರಿಯಾರ್ ಸರ್ಕಲ್, ಶಾಂಪುರ, ಕುಶಾಲ ನಗರ, ಮೋದಿ ರಸ್ತೆ, ಮೋದಿ ಗಾರ್ಡನ್, ದೊಡ್ಡಣ್ಣನಗರ, ಮುನಿವೀರಪ್ಪ ಲೇಔಟ್, ಸುಗರ್ ಮಂಡಿ, ಸಾಲ್ಟ್ ಮಂಡಿ, ಮುನೇಶ್ವರನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಬಾಗೇಪಲ್ಲಿ ಪಟ್ಟಣದ ಬೆಸ್ಕಾಂ ಉಪ ವಿಭಾಗೀಯ ಕಚೇರಿ ಮುಂಭಾಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ ಬೆಸ್ಕಾಂ ಎಇಇ ಸೋಮಶೇಖರ್ ಮೂಲಕ ಇಂಧನ ಸಚಿವ ಕೆ.ಜೆ. ಜಾರ್ಜ್‌ಗೆ ಮನವಿಪತ್ರ ಸಲ್ಲಿಸಿದ ನಂತರ ಅವರು ಮಾತನಾಡಿದರು. ಉಚಿತ ವಿದ್ಯುತ್ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ರಾಜ್ಯ ಕಾಂಗ್ರೆಸ್ ಸರಕಾರ ಗ್ರಾಹಕರು ಬಳಕೆ ಮಾಡುತ್ತಿರುವ ಗೃಹ ಬಳಕೆಯ ವಿದ್ಯುತ್ ದರವನ್ನು ನಿರಂತರವಾಗಿ ಏರಿಕೆ ಮಾಡಿ ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕುವುದರ ಜತೆಗೆ ಹೆಚ್ಚುವರಿ ಶುಲ್ಕ ವಿಧಿಸಿ ಯದ್ವಾತದ್ವ ವಿದ್ಯುತ್ ಬಿಲ್‌ನ ಬರೆ ಎಳೆಯುತ್ತಿರುವ ಸರಕಾರದ ನಡೆಯನ್ನು ಬದಲಿಸಿಕೊಳ್ಳಬೇಕಿದೆ ಎಂದರು.

**ವಿದ್ಯುತ್‌ಗೆ ಹೆಚ್ಚುವರಿ ಬಿಲ್ ವಸೂಲಿ ಆರೋಪ**

**ಕಾಂಗ್ರೆಸ್ ಪಕ್ಷ 200 ಯೂನಿಟ್ ಉಚಿತ ವಿದ್ಯುತ್ ನೀಡುತ್ತೇವೆ ಎಂದು ಗ್ಯಾರಂಟಿ ಘೋಷಣೆ ಮಾಡಿ ಅಧಿಕಾರಕ್ಕೆ ಬಂದಿರುವ ರಾಜ್ಯ ಸರಕಾರ ಇದೀಗ ಗೃಹ ಬಳಕೆ ವಿದ್ಯುತ್‌ಗೆ ಹೆಚ್ಚುವರಿ ಬಿಲ್ ವಸೂಲಿ ಮಾಡುವುದರ ಜತೆಗೆ, ರೈತರ ಪಂಪ್‌ಸೆಟ್‌ಗಳಿಗೆ ಡಿಜಿಟಲ್ ಮೀಟರ್ ಮೂಲಕ ವಿಧಿಸಿದೆ. ವಿದ್ಯುತ್ ಶುಲ್ಕ ಪದ್ಧತಿಯನ್ನು ಕೂಡಲೇ ಕೈಬಿಡಬೇಕೆಂದು.**

**- ಡಿ.ಟಿ. ಮುನಿಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ**

**ವಿದ್ಯುತ್ ಬಿಲ್ ವಸೂಲಿ ಮಾಡಲು ಬೆಸ್ಕಾಂ ಇಲಾಖೆಯ ಮೀಟರ್ ರೀಡರ್ಸ್ ಮುಂದು**

**ಡಿಜಿಟಲ್ ಮೀಟರ್ ಅಳವಡಿಸಲು ಜನಸಾಮಾನ್ಯರಿಂದ 9 ರಿಂದ 11 ಸಾವಿರ ಹಣ ಸುಲಿಗೆ ಮಾಡುತ್ತಿದ್ದಾರೆ. ಕಳೆದ 5 ತಿಂಗಳಿನಿಂದ ರೈತರ ಪಂಪ್‌ಸೆಟ್‌ಗಳಿಗೂ ವಿದ್ಯುತ್ ಬಿಲ್ ವಸೂಲಿ ಮಾಡಲು ಬೆಸ್ಕಾಂ ಇಲಾಖೆಯ ಮೀಟರ್ ರೀಡರ್ಸ್ ಮುಂದಾಗಿದ್ದಾರೆ. ಜತೆಗೆ ವಿದ್ಯುತ್‌ಅನ್ನು ಖಾಸಗೀಕರಣ ಮಾಡಲು ಹೊರಟಿರುವುದರಿಂದ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಜಟಿಲವಾಗಲಿದ್ದು, ಕೂಲಿ ಕಾರ್ಮಿಕರು, ಸಾಮಾನ್ಯ ವರ್ಗದವರು ಜೀವನ ನಡೆಸಲು ಕಷ್ಟಕರವಾಗುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ 200 ಯೂನಿಟ್ ವಿದ್ಯುತ್‌ನ್ನು ಸಂಪೂರ್ಣ ಉಚಿತವಾಗಿ ಪೂರೈಸಬೇಕೆಂದು ಪ್ರತಿಭಟನೆ ನಡೆಸಿ ಇಂಧನ ಸಚಿವರಿಗೆ ಮನವಿ ಸಲ್ಲಿಸುತ್ತಿದ್ದೇವೆ. ಸರಕಾರ ಎಚ್ಚೆತ್ತುಕೊಳ್ಳದಿದ್ದರೆ ಕೆಪಿಆರ್‌ಎಸ್ ಸಂಘಟನೆ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಿದೆ ಎಂದು ಎಚ್ಚರಿಸಿದರು.**

## ಬೆಂಗಳೂರಿನ ವಿವಿಧೆಡೆ ಹತ್ತು ದ್ವಿಚಕ್ರ ವಾಹನ ಜಪ್ತಿ: ಮೂವರು ಆರೋಪಿಗಳ ಸೆರೆ

• ಉದಯವಾಹಿನಿ, ಬೆಂಗಳೂರು

ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಡಿ.ಜೆ.ಹಳ್ಳಿ ನಿವಾಸಿ ಮೊಹಮದ್ ರಾಖೀಬ್, ಕೆ.ಜಿ.ಹಳ್ಳಿಯ ರಫೀಕ್ ಬಾಷ ಹಾಗೂ ಪೀಣ್ಯ ನಿವಾಸಿ ಮೊಹಮದ್ ಅಸ್ಕರ್ ಎಂಬುವರನ್ನು ಬಂಧಿಸಿ, 5.50 ಲಕ್ಷ ಮೌಲ್ಯದ ಹತ್ತು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಠಾಣಾ ವ್ಯಾಪ್ತಿಯ ಲಿಂಗರಾಜಪುರದ ಮನೆಯ ಆವರಣದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವು ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡರು. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ, ಬಾತ್ಮೀದಾರರ ಮಾಹಿತಿ ಆಧರಿಸಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು.




ವಾಹನಗಳನ್ನು ಕಳವು ಮಾಡಿದ್ದಾಗಿ ಆರೋಪಿಗಳು ತಪ್ಪೊಪ್ಪಿಕೊಂಡರು ಎಂದು ಪೊಲೀಸರು ತಿಳಿಸಿದರು. ವಿವಿಧ ಕಂಪನಿಯ ಹತ್ತು ದ್ವಿಚಕ್ರ ವಾಹನಗಳನ್ನು ಶಾಂಪುರ ಎಂಬ ಸ್ಥಳದಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು. ಆರೋಪಿಗಳ ಬಂಧನದಿಂದ ಬಾಣಸವಾಡಿ ಪೊಲೀಸ್ ಠಾಣೆಯ ಎರಡು, ಡಿ.ಜೆ.ಹಳ್ಳಿ ಪೊಲೀಸ್ ಠಾಣೆ, ಗೋವಿಂದಪುರ, ರಾಜರಾಜೇಶ್ವರಿ, ಉಪ್ಪಾರಪೇಟೆ, ನೆಲಮಂಗಲ ಪೊಲೀಸ್‌ಠಾಣೆಯ ತಲಾ ಒಂದು ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಪತ್ತೆಯಾಗಿದೆ ಎಂದು ಹೇಳಿದ್ದಾರೆ.

# ಜೂನ್‌ನಿಂದ ಎಕ್ಸ್‌ಪ್ರೆಸ್‌ವೇನಲ್ಲಿ ಟೋಲ್ ಪ್ಲಾಜಾಗಳು ಮಾಯ!

## ● ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ಇನ್ನು ಕೆಲವೇ ದಿನಗಳಲ್ಲಿ ಹೊಸ ಬಗೆಯ ಟೋಲ್ ಸಂಗ್ರಹಣಾ ವ್ಯವಸ್ಥೆ ಅಳವಡಿಕೆ

• **ಉದಯವಾಹಿನಿ, ಮೈಸೂರು**

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಇನ್ನು ಕೆಲವೇ ದಿನಗಳಲ್ಲಿ ಟೋಲ್ ಸಂಗ್ರಹಣಾ ಕೇಂದ್ರಗಳು ಕಣ್ಮರೆಯಾಗಲಿವೆ.

ಪ್ರಾಯಶಃ ಇದೇ ಜೂನ್‌ನಿಂದ ಟೋಲ್ ಪಾವತಿಸಲು ವಾಹನಗಳು ಟೋಲ್ ಕೇಂದ್ರಗಳಲ್ಲಿ ನಿಲ್ಲುವ ಹಾಗಿರುವುದಿಲ್ಲ. ಹಾಗೆ ರೊಯ್ಯನೆ ಹೋಗಬಹುದು! ಆದರೆ, ನಿಮ್ಮ ಫಾಸ್ಟ್ ಟ್ಯಾಗ್ ಖಾತೆಯಿಂದ ಟೋಲ್ ಮಾತ್ರ ಎಷ್ಟು ಕಟ್ ಆಗಬೇಕೋ ಅಷ್ಟು ಕಟ್ ಆಗಿರುತ್ತೆ! ಇದಕ್ಕೆ ಕಾರಣ, ಕೇಂದ್ರ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಆರ್ ಐ) ಜಾರಿಗೆ ತರುತ್ತಿರುವ ಮಲ್ಟಿ-ಲೇನ್ ಫ್ರೀ ಫ್ಲೋ (ಎಂಎಲ್‌ಎಫ್‌ಎಫ್) ಟೋಲಿಂಗ್ ವ್ಯವಸ್ಥೆ. ಈ ಹೊಸ ವ್ಯವಸ್ಥೆಯು ಜೂನ್ ವೇಳೆಗೆ ಸಂಪೂರ್ಣವಾಗಿ ಕಾರ್ಯಗತಗೊಳ್ಳುವ ನಿರೀಕ್ಷೆಯಿದೆ. ಇದು ಹೆದ್ದಾರಿಯಲ್ಲಿ ಸಂಚಾರವನ್ನು ಸುಗಮಗೊಳಿಸಲು ಹಾಗೂ ಟೋಲ್ ಪ್ಲಾಜಾಗಳಲ್ಲಿನ ದಟ್ಟಣೆಯನ್ನು ಕಡಿಮೆ ಮಾಡುವುದಕ್ಕಾಗಿಯೇ ವಿಶೇಷವಾಗಿ ನಿರ್ಧರಿಸಲಾಗಿದೆ.

ಈ ವ್ಯವಸ್ಥೆಯು ಸ್ಯಾಟಲೈಟ್ ಆಧಾರಿತ ಜಿಪಿಎಸ್ ತಂತ್ರಜ್ಞಾನ, ಆರ್ ಎಫ್‌ಐಡಿ ಫಾಸ್ಟ್‌ಟ್ಯಾಗ್ ಆರ್ ಎಫ್‌ಐಡಿ ಫಾಸ್ಟ್‌ಟ್ಯಾಗ್ ರೀಡರ್‌ಗಳು ಮತ್ತು ಆಟೋಮೇಟೆಡ್ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್ ಪಿಆರ್) ಮುಂತಾದ ತಂತ್ರಜ್ಞಾನಗಳನ್ನು ಒಳಗೊಂಡಿದೆ.

ಈ ತಂತ್ರಜ್ಞಾನಗಳನ್ನು ಬಳಸಿಕೊಂಡು ವಾಹನಗಳನ್ನು ಸ್ವಯಂಚಾಲಿತವಾಗಿ ಗುರುತಿಸಿ, ನಿಲ್ಲಿಸದೆ ಟೋಲ್ ಶುಲ್ಕವನ್ನು ಕಡಿತಗೊಳಿಸುವ ಪದ್ಧತಿಯನ್ನು ಜಾರಿಗೆ ತರಲಾಗುತ್ತದೆ. ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಜೂನ್ ತಿಂಗಳಿನಿಂದ ಟೋಲ್ ಪಾವತಿಸಲು ವಾಹನಗಳು ನಿಲ್ಲುವ ಪ್ರಮೇಯ ಇರುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಆರ್ ಐ) ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದು, ಮಲ್ಟಿ-ಲೇನ್ ಫ್ರೀ ಫ್ಲೋ (ಎಂಎಲ್‌ಎಫ್‌ಎಫ್) ಎಂಬ ನೂತನ ಟೋಲಿಂಗ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ.

ಈ ಆಧುನಿಕ ತಂತ್ರಜ್ಞಾನವು ಹೆದ್ದಾರಿಯಲ್ಲಿ ಸಂಚಾರವನ್ನು ಇನ್ನಷ್ಟು ಸುಗಮಗೊಳಿಸಲಿದೆ.

ಅಲ್ಲದೆ, ಟೋಲ್ ಪ್ಲಾಜಾಗಳಲ್ಲಿ ವಾಹನಗಳ ಉದ್ದನೆಯ ಸಾಲುಗಳನ್ನು ತಪ್ಪಿಸಿ, ಪ್ರಯಾಣಿಕರ ಸಮಯವನ್ನು ಉಳಿಸಲಿದೆ. ಈ ಯೋಜನೆಯು ಈಗಾಗಲೇ ಆರಂಭವಾಗಿದ್ದು, ಜೂನ್ ವೇಳೆಗೆ ಸಂಪೂರ್ಣವಾಗಿ ಕಾರ್ಯಗತಗೊಳ್ಳುವ ನಿರೀಕ್ಷೆಯಿದೆ ಎಂದು ಎಚ್‌ಎಚ್‌ಎಐ ಪ್ರಾಜೆಕ್ಟ್ ನಿರ್ದೇಶಕ ಮಿಲಿಂದ್ ವಬಾಳೆ ತಿಳಿಸಿದ್ದಾರೆ.

**ಎಲ್ಲೆಲ್ಲಿ:** ಪ್ರಸ್ತುತ, ಟೋಲ್ ಪ್ಲಾಜಾಗಳು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು (ಮೈಸೂರು ಪ್ರವೇಶ ದ್ವಾರ), ಬೆಂಗಳೂರು-ನಿಡಘಟ್ಟ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಶೇಷಗಿರಿಹಳ್ಳಿ (ಬೆಂಗಳೂರು ಪ್ರವೇಶ ದ್ವಾರದ ಬಳಿ) ಮತ್ತು ಬಿಡದಿಯ ಸಮೀಪದ ಕಣಿಮಿಣಿಕೆ ಬಳಿ ಇವೆ. ಈ ಎಲ್ಲಾ ಸ್ಥಳಗಳಲ್ಲಿ ಟೋಲ್ ಕೇಂದ್ರ ರಹಿತ ಶುಲ್ಕ ವಸೂಲಿ ವ್ಯವಸ್ಥೆಯನ್ನು ಅಳವಡಿಸಲಾಗುವುದು. ಈ ವ್ಯವಸ್ಥೆಯು ಶೇ. 95 ರಷ್ಟು ದಕ್ಷತೆಯನ್ನು ಹೊಂದಿದೆ ಎಂದು ಹೇಳಲಾಗಿದೆ.


ಉದಯವಾಹಿನಿ ಚಿತ್ರ

**ಮೊದಲು ಪ್ರಯೋಗಾರ್ಥ ಅಳವಡಿಕೆ**

ಮೂರು ಟೋಲ್ ಪ್ಲಾಜಾಗಳಲ್ಲಿ ಅಳವಡಿಕೆ ಕಾರ್ಯ ಪೂರ್ಣಗೊಂಡ ನಂತರ, ಟ್ರಯಲ್ ರನ್‌ಗಳನ್ನು (ಪರೀಕ್ಷಾರ್ಥ ಸಂಚಾರ) ನಡೆಸಲಾಗುತ್ತದೆ. ಈ ಸಮಯದಲ್ಲಿ, ಪ್ರಸ್ತುತವಿರುವ ಟೋಲ್ ಬೂತ್‌ಗಳು ಸ್ವಲ್ಪ ಸಮಯದವರೆಗೆ ಕಾರ್ಯನಿರ್ವಹಿಸುತ್ತಲೇ ಇರುತ್ತವೆ. ವ್ಯವಸ್ಥೆಯ ನಿಖರತೆ, ಬಳಕೆದಾರರ ಅನುಸರಣೆ ಮತ್ತು ಜಾರಿಗೊಳಿಸುವಿಕೆಯ ಅಗತ್ಯತೆಗಳ ಆಧಾರದ ಮೇಲೆ, ಎಂಎಲ್ ಎಫ್‌ಎಫ್ ವ್ಯವಸ್ಥೆಯನ್ನು ಅಂತಿಮವಾಗಿ ಸಂಪೂರ್ಣವಾಗಿ ಜಾರಿಗೆ ತರಲಾಗುವುದು. ಇದು ಭೌತಿಕ ಟೋಲ್ ಬೂತ್‌ಗಳನ್ನು ಹಂತ ಹಂತವಾಗಿ ತೆಗೆದುಹಾಕಲು ದಾರಿ ಮಾಡಿಕೊಡುತ್ತದೆ, ಎಂದು ವಬಾಳೆ ಹೇಳಿದರು. ಈ ಹೊಸ ವ್ಯವಸ್ಥೆಗಾಗಿ ಟೋಲ್ ದರಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

**ಪ್ರಯಾಣಿಕರ ಸಮಯ ಉಳಿತಾಯ**

---

## ಹಾರೋಹಳ್ಳಿ: ಜಲಮಂಡಳಿಗೆ 1.34 ಕೋಟಿ ನೀರಿನ ಶುಲ್ಕ ಬಾಕಿ

• **ಉದಯವಾಹಿನಿ, ಹಾರೋಹಳ್ಳಿ**



ಹಾರೋಹಳ್ಳಿಗೆ ಕುಡಿಯುವ ನೀರು ಪೂರೈಸುತ್ತಿರುವ ಜಲಮಂಡಳಿಗೆ ಪಟ್ಟಣ ಪಂಚಾಯಿತಿ 1.34 ಕೋಟಿ ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿದೆ. ಬಾಕಿ ವಸೂಲಾಗದಿರುವುದು ಜಲಮಂಡಳಿಗೆ ತಲೆಬೇನೆ ತಂದಿದೆ. ಜಲಮಂಡಳಿಯು ಹಾರೋಹಳ್ಳಿ ಪಟ್ಟಣದಲ್ಲಿ 1.50 ದಶಲಕ್ಷ ಲೀಟರ್ ಶುದ್ಧ ನೀರನ್ನು ಸರಬರಾಜು ಮಾಡುತ್ತಿದೆ. ಪಟ್ಟಣದಲ್ಲಿ 2.600 ಗೃಹ ಸಂಪರ್ಕಗಳಿದ್ದು ಪಟ್ಟಣ ಪಂಚಾಯಿತಿ ವರ್ಷಗಳಿಂದ ನೀರಿನ ಶುಲ್ಕ ಪಾವತಿಸದೆ ಬಾಕಿ ಉಳಿಸಿಕೊಂಡಿದೆ. ಹಾರೋಹಳ್ಳಿಯ 2,600 ನೀರಿನ ಸಂಪರ್ಕಗಳಿಂದ ಬಾಕಿ ನೀರಿನ ಶುಲ್ಕ 1.28 ಕೋಟಿಯಷ್ಟಿದೆ. 2.56 ಲಕ್ಷ ವಾರ್ಷಿಕ ಬಡ್ಡಿ ವಿಧಿಸಲಾಗಿದೆ. ಒಟ್ಟು 1.34 ಕೋಟಿ ಶುಲ್ಕ ಪಾವತಿಸಬೇಕಿದೆ. ಬಾಕಿ ಪಾವತಿಸುವಂತೆ ಪಟ್ಟಣ ಪಂಚಾಯಿತಿಗೆ ನೋಟಿಸ್ ಜಾರಿ ಮಾಡಲಾಗಿದೆ. ಹಲವು ತಿಂಗಳಿಂದ ಸಮಯಾವಕಾಶ ಕೋರುತ್ತಿರುವ ಪಟ್ಟಣ ಪಂಚಾಯಿತಿ ಇದೂವರೆಗೂ ಬಾಕಿ ಪಾವತಿಸಿಲ್ಲ ಎಂದು ಜಲಮಂಡಳಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುಮಾರು 30ಸಾವಿರಕ್ಕೂ ಅಧಿಕ ಜನಸಂಖ್ಯೆ ಇರುವ ಇಡೀ ಪಟ್ಟಣಕ್ಕೆ ಒಂದೇ ಒಂದು ಕಾವೇರಿ ನೀರಿನ ಟ್ಯಾಂಕ್ ಇದೆ. ಟ್ಯಾಂಕ್ ತುಂಬಿದ ನಂತರ ಎಲ್ಲ ಕಡೆಯೂ ನೀರು ಬಿಡಬೇಕು. ಟ್ಯಾಂಕ್ ಕೂಡ ಸರಿಯಾಗಿ ತುಂಬಿಸುವುದಿಲ್ಲ. ಪ್ರತಿ ವಾರ್ಡ್ ನಲ್ಲಿ 2-3 ದಿನಕ್ಕೆ ನೀರು ಬಿಡಲಾಗುತ್ತಿದೆ. ಆದರೆ, ನೀರು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿಲ್ಲ ಎಂಬುದು ಸಾರ್ವಜನಿಕರ ಅಳಲು.

---

## ಶಾಲಾ ಜಾಗ ಒತ್ತುವರಿ ತೆರವಿಗೆ ತಹಶೀಲ್ದಾರ್ ಸೂಚನೆ

### ಶಾಲೆಯ ಒತ್ತುವರಿ ಜಾಗ ತೆರವುಗೊಳಿಸಿದರೆ ಶಾಲೆಗೆ ಮಕ್ಕಳು ಬರುವಂತೆ ವ್ಯವಸ್ಥೆ

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕಿನ ದೊಡ್ಡತೇಕಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಟಿ.ಪೆದ್ದನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಸೇರಿದ ಜಾಗವನ್ನು ಗ್ರಾಮಸ್ಥರು ಒತ್ತುವರಿ ಮಾಡಿದ್ದಾರೆ ಎಂಬ ದೂರಿನ ಮೇರೆಗೆ ತಹಶೀಲ್ದಾರ್ ಎನ್.ಗಗನಸಿಂಧು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶಾಲೆಗೆ ಸಂಬಂಧಿಸಿದ ಜಾಗವನ್ನು ಕೆಲವರು ಒತ್ತುವರಿ ಮಾಡಿರುವುದರಿಂದ ಎರಡು ವರ್ಷಗಳಿಂದ ಸರ್ಕಾರಿ ಶಾಲೆ ನಡೆಸದೆ ಮುಚ್ಚಿದ್ದಾರೆ. ಶಾಲೆಯ ಒತ್ತುವರಿ ಜಾಗ ತೆರವುಗೊಳಿಸಿದರೆ ಶಾಲೆಗೆ ಮಕ್ಕಳು ಬರುವಂತೆ ವ್ಯವಸ್ಥೆ ಮಾಡುತ್ತೇವೆ ಎಂದು ಗ್ರಾಮಸ್ಥರು ತಹಶೀಲ್ದಾರ್ ಅವರಿಗೆ ಮನವಿ ಮಾಡಿದ್ದರು. ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಶಾಲೆಗೆ ಸೇರಿದ ಜಾಗದಲ್ಲಿ ಮನೆ ಕಟ್ಟಿಸುತ್ತಿರುವವರಿಗೆ ಕಾಮಗಾರಿ ಸ್ಥಗಿತಗೊಳಿಸುವಂತೆ ಸೂಚಿಸಿದರು.

15 ದಿನದ ಒಳಗಾಗಿ ಈ ಜಾಗದ ದಾಖಲೆ ತಂದುಕೊಡಿ. ದಾಖಲೆಗಳು ಸರಿ ಇದ್ದಲ್ಲಿ ಕಾಮಗಾರಿ ಮುಂದುವರಿಸಲು ಅವಕಾಶ ನೀಡಲಾಗುತ್ತದೆ. ಪಿಡಿಒ ಅಥವಾ ನಮ್ಮ ಗಮನಕ್ಕೆ ಬಾರದೆ ಕಾಮಗಾರಿ ಪ್ರಾರಂಭಿಸಿದರೆ ಕಟ್ಟುನಿಟ್ಟಿನ ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು. ಶಾಲೆಯ ದಾಖಲೆಗಳಲ್ಲಿ ಶಾಲೆಗೆ ಸೇರಿದ ಜಾಗ 75x100 ಅಡಿಯಷ್ಟಿದೆ. ಆದರೆ ಸ್ಥಳದಲ್ಲಿ ಅಳತೆ ಮಾಡಿದರೆ 77x79 ಅಡಿ ಮಾತ್ರ ಬರುತ್ತಿದೆ.

ಉಳಿದ ಜಾಗ ಎಲ್ಲಿ ಹೋಯ್ತು ಎಂದು ಗ್ರಾಮಸ್ಥರನ್ನು ಪ್ರಶ್ನಿಸಿದ ಅವರು ಗ್ರಾಮದಲ್ಲಿ ಈ ವರ್ಷ ಶಾಲೆ ಆರಂಭವಾಗದಿದ್ದಲ್ಲಿ ಸಂಪೂರ್ಣ ಜಾಗವನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳುವಂತೆ ಕಂದಾಯ ನಿರೀಕ್ಷಕರೂ ಸೇರಿದಂತೆ ಗ್ರಾಮ ಸಹಾಯಕರಿಗೆ ಸೂಚಿಸಿದರು. ಒತ್ತುವರಿ ಮಾಡಿರುವ ಸರ್ಕಾರಿ ಶಾಲೆಯ ಜಾಗವನ್ನು ಸಂಪೂರ್ಣವಾಗಿ ಸ್ವಾಧೀನಕ್ಕೆ ಪಡೆದುಕೊಳ್ಳುತ್ತೇವೆ. ಗ್ರಾಮದಲ್ಲಿ ಸರ್ಕಾರಿ ಶಾಲೆ ಪುನರ್ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಗುತ್ತದೆ.

ಸಾರ್ವಜನಿಕರು ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ಓದಿಸಿ, ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಂದಾಯ ನಿರೀಕ್ಷಕ ಅಮರೇಂದ್ರ, ಗ್ರಾಮ ಲೆಕ್ಕಾಧಿಕಾರಿ ರಾಕೇಶ್, ದಿಬ್ಬೂರಹಳ್ಳಿ ಠಾಣೆಯ ಪಿಎಸ್‌ಐ ಶ್ಯಾಮಲ, ಪಿಡಿಒ ವಜೇಶ್, ಸಿಆರ್‌ಪಿ ವೆಂಕಟೇಶಪ್ಪ, ಜಯಚಂದ್ರ, ರಾಮಕೃಷ್ಣಪ್ಪ, ಶ್ರೀನಿವಾಸ್, ಪಿಳ್ಳಪ್ಪ, ಶಿವಪ್ಪ, ವೆಂಕಟರೆಡ್ಡಿ ದ್ಯಾವಪ್ಪ ಹಾಜರಿದ್ದರು.


ಉದಯವಾಹಿನಿ ಚಿತ್ರ

**ಕೊಳವೆಬಾವಿ ಮಾಯ**

ಗ್ರಾಮದ ಜನರಿಗೆ ನೀರು ಪೂರೈಸುವ ಉದ್ದೇಶದಿಂದ ಇದೇ ಸರ್ಕಾರಿ ಜಾಗದಲ್ಲಿ ಕೊಳವೆಬಾವಿ ಕೊರೆಸಿದ್ದು ಅದರಲ್ಲಿ ನೀರು ಸಹ ಇತ್ತು. ಆದರೆ ಜಾಗವನ್ನು ಒತ್ತುವರಿ ಮಾಡಿಕೊಳ್ಳುವ ಉದ್ದೇಶದಿಂದ ಕೊಳವೆಬಾವಿಗೆ ಅಳವಡಿಸಿದ್ದ ಪಂಪು, ಮೋಟಾರನ್ನು ಒಳಗೆ ಬೀಳಿಸಿದ್ದಾರೆ. ಅದರಲ್ಲಿನ ಪಂಪು ಮೋಟಾರು ಮೇಲೆತ್ತಿದರೆ ಗ್ರಾಮಕ್ಕೆ ಕುಡಿಯುವ ನೀರು ಲಭ್ಯವಾಗುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ತಹಶೀಲ್ದಾರ್‌ಗೆ ಮನವಿ ಮಾಡಿದರು.

---

## ಹುಲಿ ಸಂರಕ್ಷಿತಾ ಅರಣ್ಯ ಬಂಡೀಪುರದಲ್ಲಿ ಸುರಂಗ ಮಾರ್ಗದ ಪ್ರಸ್ತಾವನೆಗೆ ರಕ್ಷಣಾ ಸೇನೆ ವಿರೋಧ

• **ಉದಯವಾಹಿನಿ, ಗುಂಡ್ಲುಪೇಟೆ**

ಪ್ರತಿಷ್ಠಿತ ಹುಲಿ ಸಂರಕ್ಷಿತಾ ಅರಣ್ಯ ಬಂಡೀಪುರದಲ್ಲಿ ಸುರಂಗ ಮಾರ್ಗ ನಿರ್ಮಾಣ ಮಾಡುವ ಪ್ರಸ್ತಾವನೆಗೆ ಜಯಕರ್ನಾಟಕ ರಕ್ಷಣಾ ಸೇನೆ ವಿರೋಧ ವ್ಯಕ್ತಪಡಿಸಿದೆ.

ಗಡಿಭಾಗದಿಂದ ಕೇರಳಕ್ಕೆ ಸಂಪರ್ಕ ವ್ಯವಸ್ಥೆ ಕಲ್ಪಿಸುವ ದೃಷ್ಟಿಯಿಂದ ಸುರಂಗ ಮಾರ್ಗ ನಿರ್ಮಾಣ ಮಾಡಲು ಸಾಧಕ ಬಾಧಕಗಳ ಕುರಿತು ಕೂಲಂಕುಷವಾಗಿ ವರದಿ ತಯಾರಿಸಲು ಕೇಂದ್ರ ಹೆದ್ದಾರಿ ಸಚಿವಾಲಯ ತಜ್ಞರ ಸಮಿತಿ ನೇಮಿಸಿ ವರದಿ ಪಡೆಯಲು ಮುಂದಾಗಿರುವುದಕ್ಕೆ ಸಂಘಟನೆ ಅಪಸ್ವರವೆತ್ತಿದೆ. ಕೇರಳ ಸರ್ಕಾರದ ಲಾಭಿಗೆ ಮಂಡಿಯೂರಿದ ಕೇಂದ್ರ ಸರ್ಕಾರ ವನ್ಯಜೀವಿಗಳ ಸರ್ವನಾಶಕ್ಕೆ ಮುಂದಾಗಿದೆ ಎಂದು ಸಂಘಟನೆ ಚಾಮರಾಜನಗರ ಜಿಲ್ಲಾಧ್ಯಕ್ಷ ಈಶ್ವರ್ ಕಳವಳ ವ್ಯಕ್ತಪಡಿಸಿದರು.

ರಾಜಕಾರಣದ ಹಪಾಹಪಿ ಅಧಿಕಾರದ ದುಂಬಾಲಿಗೆ ಬಿದ್ದಿರುವ ರಾಜಕಾರಣಿಗಳು ವನಸಿರಿಯನ್ನೇ ಉದ್ಯಮಿಗಳಿಗೆ ಅಡಮಾನವಿಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ, ಚುನಾವಣಾ ಪೂರ್ವದಲ್ಲಿ ಸರ್ವಸಂಪತ್ತಿನ ರಕ್ಷಕರಂತೆ ಭಾಷಣ ಬಿಗಿಯುವ ಪಂಡಿತರು ಇಡೀ ವನ್ಯಸಂಕುಲಕ್ಕೆ ಕಂಟಕವಾಗಿ ಪರಿಣಮಿಸಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಕೇರಳದ ಸಂಸದೆ ಪ್ರಿಯಾಂಕ ವಾದ್ರಾರವರು ಕೇರಳಿಗರ ಸಿಂಪತಿ ಗಿಟ್ಟಿಸಲು ಬಂಡೀಪುರವನ್ನ ಅವಸಾನದತ್ತ ಕೊಂಡೊಯ್ಯುವ ದುರಾಲೋಚನೆ ಬಿಡಬೇಕು , ರಾಜ್ಯ ಸರ್ಕಾರ ಸುರಂಗ ಮಾರ್ಗಕ್ಕೆ ಯಾವುದೇ ಕಾರಣಕ್ಕೂ ಅಸ್ತು ಎನ್ನದೆ ವನ್ಯಸಂಪತ್ತು, ಜೀವಿಗಳ ರಕ್ಷಣೆಗೆ ನಿಲ್ಲಬೇಕು ಎಂದು ಆಗ್ರಹಿಸಿದರು. ಕೇರಳ ಸರ್ಕಾರ ಹಲವು ವರ್ಷಗಳಿಂದಲೂ ರಾತ್ರಿ ಸಂಚಾರಕ್ಕೆ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ ಇಂತಹ ವಿನಾಶಕಾರಿ ಪ್ರಸ್ತಾವನೆಯನ್ನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಳ್ಳಿ ಹಾಕಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡುವ ಮೂಲಕ ಶಿರೆಸ್ತಾದಾರ್ ವಿನೋದ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂಧರ್ಭದಲ್ಲಿ ಸಂಘಟನೆ ಜಿಲ್ಲೆ ಗೌರಾವಧ್ಯಕ್ಷೆ ಪುಟ್ಟಮ್ಮ, ಪ್ರಧಾನ ಕಾರ್ಯದರ್ಶಿ ನಾಗರಾಜು, ಜಿಲ್ಲಾ ಕಾರ್ಯಾಧ್ಯಕ್ಷ ರಾಜಪ್ಪ ಬೆಳವಾಡಿ, ರೇಖಾ, ಮಂಜುನಾಥ್, ಅಜಿತ್ ಕುಮಾರ್, ಗುರುಪ್ರಸಾದ್ ಸೇರಿದಂತೆ ಹಲವರು ಹಾಜರಿದ್ದರು.


ಉದಯವಾಹಿನಿ ಚಿತ್ರ

**ಜಯಕರ್ನಾಟಕ ರಕ್ಷಣಾ ಸೇನೆ ವಿರೋಧ**

---

## ರೈತನ ಕೈ ಸೇರದ ಸೂರ್ಯಕಾಂತಿ ಹಣ

### ಗುಂಡ್ಲುಪೇಟೆ ಎಪಿಎಂಸಿ ಕಚೇರಿ ಮುಂಭಾಗ ಏಕಾಂಗಿ ಪ್ರತಿಭಟನೆ

• **ಉದಯವಾಹಿನಿ, ಗುಂಡ್ಲುಪೇಟೆ**

ಬೆಂಬಲ ಬೆಲೆ ಯೋಜನೆಯನ್ನ ನಂಬಿ ತಾನು ಬೆಳೆದಿದ್ದ ಸೂರ್ಯಕಾಂತಿಯನ್ನ ಮಾರಾಟ ಮಾಡಿದ್ದ ರೈತನೀಗ ಹಣಕ್ಕಾಗಿ ಪ್ರತಿಭಟನೆ ನಡೆಸಬೇಕಾಗಿರುವ ಪರಿಸ್ಥಿತಿ ನಿರ್ಮಾಣವಾಗಿದ್ದು ಅಧಿಕಾರಿಗಳ ನಡೆಗೆ ಬೇಸತ್ತ ತಾಲ್ಲೂಕಿನ ಹಕ್ಕಲಪುರ ಗ್ರಾಮದ ರೈತ ಸಿದ್ದಪ್ಪ ಅವರ ಸಹೋದರ ಪುನೀತ್ ಎಪಿಎಂಸಿ ಕಚೇರಿ ಮುಂಭಾಗದಲ್ಲಿ ಏಕಾಂಗಿಯಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ರೈತರಿಗೆ ಅನುಕೂಲವಾಗಲಿ ಎಂಬ ಮಹತ್ವಾಕಾಂಕ್ಷೆಯಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿದ ಬೆಂಬಲ ಬೆಲೆ ಯೋಜನೆಯನ್ನ ನಂಬಿ ಕಳೆದ ವರ್ಷ ನವೆಂಬರ್ ತಿಂಗಳಲ್ಲಿ 950 ಕೆಜಿ ಸೂರ್ಯಕಾಂತಿಯನ್ನ ಮಾರಾಟ ಮಾಡಿದ್ದೇವೆ ಆದರೆ ಇದುವರೆಗೂ ನಮಗೆ ಮಾರಾಟ ಮಾಡಿದ ಹಣ 73349 ರೂ ಹಣ ಕೈ ಸೇರಿಲ್ಲ ಎಂದು ರೈತ ಸಿದ್ದಪ್ಪ ಅವರ ಸಹೋದರ ಪುನೀತ್ ಬೇಸರ ಹೊರಹಾಕಿದ್ದಾರೆ.

ಕಷ್ಟಪಟ್ಟು ಬೆಳೆ ಬೆಳೆದು ಖರೀದಿ ಕೇಂದ್ರದಲ್ಲಿ ತಂದು ಮಾರಾಟ ಮಾಡಿದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೆವರರಿಸಿ ಬೆಳೆದ ಬೆಳೆಯ ಪ್ರತಿಫಲದ ಹಣ ಕೈ ಸೇರದೆ ಅನ್ನದಾತ ಇನ್ನಷ್ಟು ಸಂಕಷ್ಟಕ್ಕೆ ಸಿಲುಕುವಂತಾಗಿದೆ, ನಾವು ಬೆಳೆದ ಬೆಳೆಯನ್ನ ಖರೀದಿ ಕೇಂದ್ರಕ್ಕೆ ನೀಡುವುದಲ್ಲದೆ ಹಣಕ್ಕಾಗಿ ಪ್ರತಿ ನಿತ್ಯ ಕಚೇರಿಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತನ ಸಂಕಷ್ಟವನ್ನ ಕೇಳಲು ಯಾವೊಬ್ಬ ಅಧಿಕಾರಿಯೂ ಮುಂದಾಗುತ್ತಿಲ್ಲ, ಎಪಿಎಂಸಿ ಕಾರ್ಯದರ್ಶಿಯಾಗಲಿ ಅಧ್ಯಕ್ಷರಾಗಲಿ ನಮ್ಮ ಸಮಸ್ಯೆ ಕೇಳುವ ಗೋಜಿಗೆ ಹೋಗದೆ ಹಾರಿಕೆ ಉತ್ತರ ನೀಡುತ್ತಿದ್ದಾರೆ ಎಂದು ರೈತ ಸತೀಶ್ ದೂರಿದರು.

ದಲ್ಲಾಳಿಗಳ ಮಧ್ಯಸ್ಥಿಕೆ ತಪ್ಪಿಸಲು ಖರೀದಿ ಕೇಂದ್ರ ತೆರೆದು ನೋಂದಾಯಿತ ರೈತರ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾಮಾಡುವ ವ್ಯವಸ್ಥೆ ಮಾಡಲಾಗಿದೆ ಎಂಬ ಮಾಹಿತಿ ನೀಡಿದ್ದರು ಬಳಿಕ ತರಹೇವಾರಿ ಸಬೂಬು ಹೇಳುತ್ತಿದ್ದಾರೆ, ಎಪಿಎಂಸಿಯಲ್ಲಿ ಆಧಾರ್ ಕಾರ್ಡ್ ನೋಂದಣಿಯಾಗಿಲ್ಲ ಎಂಬ ಕಾರಣವನ್ನ ನೀಡಿ ವಾಪಾಸ್ ಕಳುಹಿಸಲಾಗುತ್ತಿದೆ, ಎಲ್ಲಾ ದಾಖಲಾತಿಗಳು ಸಲ್ಲಿಕೆಯಾಗಿದ್ದರೂ ಸಹ ಹಣ ಜಮಾ ಮಾಡದೆ ದ್ವಂದ್ವ ನೀತಿ ಅನುಸರಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

---

## ಫೆ.4 ರಿಂದ 8 ರವರೆಗೆ ಸಾಮೂಹಿಕ ಗಜಗೌರಿ ವ್ರತ

• **ಉದಯವಾಹಿನಿ, ರಾಮನಗರ**

ರಾಮನಗರ ಕ್ಷೇತ್ರದ ಜನರ ಲೋಕಕಲ್ಯಾಣಕ್ಕಾಗಿ ಫೆ.4 ರಿಂದ 8ರವರೆಗೆ ಸೀತಾರಾಮ ಸೇವಾ ಟ್ರಸ್ಟ್ ವತಿಯಿಂದ ಸಾಮೂಹಿಕ ಶ್ರೀಗಜಗೌರಿ ವ್ರತವನ್ನು ಆಚರಣೆ ಮಾಡಲಾಗುತ್ತಿದೆ ಎಂದು ನಗರಸಭಾ ಅಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರದ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೆ ಫೆ.4 ರಂದು ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಯಿಂದ ಗಂಗಾ ಪೂಜೆ, ಗೋ ಪೂಜೆ ಸೇರಿದಂತೆ ಹಲವು ಪೂಜಾ ಕಾರ್ಯಗಳೊಂದಿಗೆ ಗಜಗೌರಿ ವ್ರತ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು.

ವಿಶೇಷವಾಗಿ ಫೆ.7ರಂದು ನಗರಸಭೆ ಪೌರ ಕಾರ್ಮಿಕರಿಗೆ ಮಡಲಕ್ಕಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮಹಿಳೆಯರಿಗೆ ಗೌರವ ಸಮರ್ಪಣೆ ಮಾಡಲಾಗುವುದು. ಇದೆ ದಿನ ವಿವಿಧ ಭಜನಾ ಮಂಡಳಿಗಳಿಂದ ಅಖಂಡ ಭಜನೆ ಹಾಗೂ ರಾತ್ರಿ ಗಜಗೌರಿ ಹರಿಕಥೆ ಮತ್ತು ದೀಪ ನಮಸ್ಕಾರ ಕಾರ್ಯಕ್ರಮ ಇರಲಿದೆ ಎಂದು ಹೇಳಿದರು. ಫೆ.8 ರಂದು ಕೊನೆಯ ದಿನ ವಿವಿಧ ಮಠಾದಿಪತಿಗಳಿಂದ ಪ್ರವಚನ, ಆನೆಯ ಮೇಲೆ ಗಜಗೌರಿಗಳ ಭವ್ಯ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಹಮ್ಮಿಕೊಂಡಿದ್ದು ಸಂಜೆ ರಂಗರಾಯನದೊಡ್ಡಿ ಕೆರೆಯಲ್ಲಿ ವಿಸರ್ಜನೆಯೊಂದಿಗೆ ಐದು ದಿನಗಳ ಪೂಜಾ ಕಾರ್ಯಕ್ರಮ ಮುಕ್ತಾಯವಾಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಪ್ಪಗೆರೆ ಶಿವಲಿಂಗಯ್ಯ, ಬಲಮುರಿ ಗಣಪತಿ ದೇವಾಲಯ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಪಿ.ಶಿವಾನಂದ, ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಜೆ.ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಫೆ.5 ರಂದು ಸಂಜೆ 5.30 ಕ್ಕೆ ವಿಶೇಷವಾಗಿ ಆಶ್ಲೇಷ ಬಲಿ ಕಾರ್ಯಕ್ರಮ ಇದ್ದು, ಸರ್ಪದೋಷ ಸಮಸ್ಯೆ ಉಳ್ಳವರು ಸೇರಿದಂತೆ ಸಾರ್ವಜನಿಕರು ಸಂಕಲ್ಪ ಸಹಿತ ಪೂಜೆ ಸಲ್ಲಿಸಬಹುದಾಗಿದೆ. ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಹೋಗಲು ಸಾಧ್ಯವಾಗದೆ ಇರುವವರು ಇಲ್ಲಿ ಪರಿಹಾರ ಪೂಜೆ ಮಾಡಿಸಿಕೊಳ್ಳಬಹುದಾಗಿದೆ
> 
> -ಕೆ.ವಿ.ಉಮೇಶ್, ಸೀತಾರಾಮ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ

---

## ಮಿನಿ ನ್ಯೂಸ್

### ಡಿಕೆಎಸ್ ಚಾರಿಟಬಲ್ ಟ್ರಸ್ಟ್: ಜಿಲ್ಲಾ ಮಟ್ಟದ ಕನಕೋತ್ಸವಕ್ಕೆ ಅದ್ದೂರಿ ತೆರೆ

• **ಉದಯವಾಹಿನಿ, ಕನಕಪುರ**

ಡಿಕೆಎಸ್ ಚಾರಿಟಬಲ್ ಟ್ರಸ್ಟ್‌ನಿಂದ ಐದು ದಿನಗಳಿಂದ ನಡೆಯುತ್ತಿರುವ ಜಿಲ್ಲಾ ಮಟ್ಟದ ಕನಕೋತ್ಸವಕ್ಕೆ ದ್ದೂರಿ ತೆರೆ ಬಿದ್ದಿತು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಮನೋರಂಜನ ಕಾರ್ಯಕ್ರಮವು ಕನಕೋತ್ಸವ ಮುಕ್ತಾಯವಾಯಿತು. ಉತ್ಸವದ ಪ್ರಯುಕ್ತ ವಿವಿಧ ಸ್ಪರ್ಧೆ ಆಯೋಜಿಸಲಾಗಿತ್ತು.

ಕನಕೋತ್ಸವ ಕಾರ್ಯಕ್ರಮದಲ್ಲಿ ಜನರನ್ನು ಕುರಿತು ಡಿಕೆ ಶಿವಕುಮಾರ್ ಮಾತನಾಡಿದರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪರ್ಧೆ ವಿಜೇತರಿಗೆ ಬಹುಮಾನ. ಟ್ರೋಫಿ ಮತ್ತು ಸರ್ಟಿಫಿಕೇಟ್ ವಿತರಿಸಿದರು. ಚಿತ್ರ ನಟ, ನಟಿಯರು, ಹಾಸ್ಯ ಕಲಾವಿದರು, ಗಾಯಕರು, ನಿರೂಪಕರು, ರಿಯಾಲಿಟಿ ಶೋ ಸ್ಪರ್ಧಿಗಳು ಹಾಡು, ಕುಣಿದು ರಂಜಿಸಿದರು. ಈ ಬಾರಿ ಎರಡು ಲಕ್ಷ ಮಂದಿ ಕನಕೋತ್ಸವ ಸ್ಪರ್ಧೆಯಲ್ಲಿ ಪಾಲ್ಗೊಂಡು ಬಹುಮಾನ ಸ್ವೀಕರಿಸಿದ್ದಾರೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

### ನಮ್ಮೂರ ಸರ್ಕಾರಿ ಶಾಲೆ ಉಳಿಸಲು ಸಮಾವೇಶ

• **ಉದಯವಾಹಿನಿ, ಕೊರಟಗೆರೆ**

'ಜೀವ ಕೊಟ್ಟೇವು, ರಾಜ್ಯದಲ್ಲಿ ಒಂದೇ ಒಂದು ಸರ್ಕಾರಿ ಶಾಲೆ ಮುಚ್ಚಲು ಬಿಡುವುದಿಲ್ಲ' ಎಂದು ಪಟ್ಟಣ ಪಂಚಾಯಿತಿ ಎದುರು ನಡೆದ ಪ್ರತಿಭಟನಾ ಸಮಾವೇಶದಲ್ಲಿ ಪೋಷಕರು ಘೋಷಣೆ ಕೂಗಿದರು. ಹರಿಹರಪ್ಪನಪಾಳ್ಯ, ಕಾಮರಾಜನಹಳ್ಳಿ, ಹುಲುಗೋನಹಳ್ಳಿ, ಗುಂಡಿನಪಾಳ್ಯ, ಹುಲಿಕುಂಟೆ, ಗೌರಗನಹಳ್ಳಿ, ಬೋಡಬಂಡೆನಹಳ್ಳಿ, ಮಲ್ಲೇಶ್ವರಂ, ಹಂಚಿಹಳ್ಳಿ, ದಿಣ್ಣೆಪಾಳ್ಯ ಹಳ್ಳಿಗಳ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಅಡಿ ಮುಚ್ಚುತ್ತಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಸಮಾವೇಶ ನಡೆಯಿತು.

ಪ್ರಗತಿಪರ ಚಿಂತಕ ಸಿ.ಯತಿರಾಜ್ ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ಶಾಲೆಗಳನ್ನು ಉನ್ನತೀಕರಿಸಲಾಗುವುದು ಎಂಬ ಭ್ರಮೆ ಹುಟ್ಟಿಸಿ ರೈತರು, ಕಾರ್ಮಿಕರ ಮಕ್ಕಳು, ಬಡವರು ಓದುವ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ಖಂಡಿಸಬೇಕು. ಸರ್ಕಾರದ ಈ ನೀತಿಯನ್ನು ಸಂಪೂರ್ಣವಾಗಿ ಹಿಂಪಡೆಯುವವರೆಗೂ ಹೋರಾಟ ಕಟ್ಟಬೇಕು ಎಂದರು.

### ಭರವಸೆ, ನಿರಾಸೆಗಳ ನಡುವಿನ ಬಜೆಟ್

• **ಉದಯವಾಹಿನಿ, ಕೋಲಾರ**

ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ನಿರ್ಮಾಣ ಮಾಡುವುದಾಗಿ ಕೇಂದ್ರದ ಬಜೆಟ್‌ನಲ್ಲಿ ಘೋಷಣೆ ಆಗಿರುವುದು ಜಿಲ್ಲೆಯ ಪಾಲಿಗೆ ಆಶಾದಾಯಕ ಬೆಳವಣಿಗೆ ಆಗಿದೆ. ಆದರೆ, ಇನ್ನುಳಿದ ನಿರೀಕ್ಷಿತ ಯೋಜನೆಗಳು ಜಿಲ್ಲೆಗೆ ಲಭಿಸದಿರುವುದು ಸಹಜವಾಗಿಯೇ ನಿರಾಸೆ ತಂದೊಡ್ಡಿದೆ.

ಬೆಂಗಳೂರು ಚೆನ್ನೈ ಹೈಸ್ಪೀಡ್ ರೈಲು ಜಿಲ್ಲೆಯ ಮೂಲಕವೇ ಹಾದು ಹೋಗಲಿದೆ. ಇದರಿಂದ ಆರ್ಥಿಕ ಪ್ರಗತಿ ಸಾಧ್ಯವಾಗಲಿದೆ, ಸಂಪರ್ಕಕ್ಕೆ ಒತ್ತು ನೀಡಿದಂತಾಗುತ್ತದೆ. ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಸತತ 9ನೇ ಬಜೆಟ್‌ನಲ್ಲಿ ಅಪರೂಪದ ಲೋಹಕ್ಕೂ ಒತ್ತು ನೀಡಲಾಗಿದೆ. ಈ ಘೋಷಣೆ ಜಿಲ್ಲೆಯ ಪಾಲಿಗೆ ಪುಷ್ಟಿ ನೀಡಿದಂತಾಗಿದೆ. ಏಕೆಂದರೆ ಕೆಜಿಎಫ್‌ನ ಚಿನ್ನದ ಗಣಿ ಸಂಬಂಧಿಸಿದಂತೆ ಅಪರೂಪದ ಲೋಹವಿರುವುದು ಪತ್ತೆಯಾಗಿದ್ದು, ಮುಂದೆ ಜಾಗತಿಕ ಟೆಂಡರ್ ಕೂಡ ಕರೆಯಲಾಗುತ್ತಿದೆ.

ಈ ಸಂಬಂಧ ಸರ್ವೆ ನಡೆಸಲಾಗುತ್ತಿದೆ. ಒಂದು ಟನ್ ಮಣ್ಣು ತೆಗೆದರೆ 2 ಗ್ರಾಂ ಬಂಗಾರ ಸಿಗುವ ಸಾಧ್ಯತೆ ಇದೆ ಎಂಬುದು ಗೊತ್ತಾಗಿದೆ. ಈ ನಿಟ್ಟಿನಲ್ಲಿ ಪ್ರಕ್ರಿಯೆಗಳು ನಡೆಯುತ್ತಿವೆ. ಜಿಲ್ಲೆಗೊಂದು ಬಾಲಕಿಯರ ಹಾಸ್ಟೆಲ್ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ. ಇದಲ್ಲದೇ, ಜವಳಿ ಉದ್ಯಮ, ರೇಷ್ಮೆಗೆ ಒತ್ತು ನೀಡಿರುವ ಕಾರಣ ಕೋಲಾರದಲ್ಲೇ ರೇಷ್ಮೆ ಉತ್ಪನ್ನ ಸಂಬಂಧಿಸಿದ ಪಾರ್ಕ್ ನಿರ್ಮಾಣಕ್ಕೆ ಜೀವಬಂದಂತಾಗಿದೆ. ಎರಡು ಕಡೆ ಜಾಗವನ್ನೂ ಗುರುತಿಲಾಗಿದೆ.

### ಮಂಡ್ಯ ಕೃಷಿ ವಿವಿಯ ನೂತನ ಕುಲಪತಿಯಾಗಿ ನಾರಾಯಣಸ್ವಾಮಿ

• **ಉದಯವಾಹಿನಿ, ಮಂಡ್ಯ**



ಮಂಡ್ಯ ಜಿಲ್ಲೆಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಕೆ.ಸಿ. ನಾರಾಯಣಸ್ವಾಮಿ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.

ಕೃಷಿ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿರುವ ನಾರಾಯಣಸ್ವಾಮಿ ಅವರು ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ನಾರಾಯಣಸ್ವಾಮಿ ಮಾತನಾಡಿ, ಈ ಕೃಷಿ ವಿವಿಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಹಾಗೂ ರೈತಕೇಂದ್ರಿತ ಸಂಶೋಧನೆ, ಗುಣಮಟ್ಟದ ಶಿಕ್ಷಣ ಮತ್ತು ಪರಿಣಾಮಕಾರಿ ವಿಸ್ತರಣಾ ಚಟುವಟಿಕೆಗಳಿಗೆ ಆದ್ಯತೆ ನೀಡುವುದಾಗಿ ತಿಳಿಸಿದರು.

---

## ತಳ ಸಮುದಾಯಗಳು ಇನ್ನಷ್ಟು ಜಾಗೃತರಾಗಬೇಕಾಗಿದೆ: ಕೆ.ಶೇಷಾದ್ರಿ

### ರಾಮನಗರ ನಗರಸಭೆಯ ಸಹಯೋಗದೊಂದಿಗೆ ಕಾಯಕ ಶರಣ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ಉದ್ಘಾಟನೆ

• **ಉದಯವಾಹಿನಿ, ರಾಮನಗರ**

ಸಮಾಜದಲ್ಲಿರುವ ತಳ ಸಮುದಾಯಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಇನ್ನಷ್ಟು ಜಾಗೃತರಾಗಬೇಕಾದ ಅಗತ್ಯವಿದೆ ಎಂದು ರಾಮನಗರ ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ (ಶಶಿ) ಅವರು ಅಭಿಪ್ರಾಯಪಟ್ಟರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಮನಗರ ನಗರಸಭೆಯ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಕಾಯಕ ಶರಣ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಸಮಾನತೆ, ಶ್ರಮ, ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಡಿವಾಳ ಮಾಚಿದೇವರ ಚಿಂತನೆಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಬೇಕು. ಕಾಯಕವೇ ಕೈಲಾಸ ಎಂಬ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯವಾಗುತ್ತದೆ ಎಂದವರು ಹೇಳಿದರು. ತಳ ಸಮುದಾಯಗಳು ಶಿಕ್ಷಣ, ಸಂಘಟನೆಯನ್ನು ಆಧಾರವಾಗಿ ಮಾಡಿಕೊಂಡು ಮುಂದೆ ಬರಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಬಿ.ಪಿ. ಸುರೇಶ್ ಅವರು ಮಾತನಾಡಿ, ಕಾಯಕ ಶರಣ ಮಡಿವಾಳ ಮಾಚಿದೇವರು ಕೇವಲ ಶರಣರಲ್ಲ, ಶ್ರಮ ಸಂಸ್ಕೃತಿಯ ರಕ್ಷಕರಾಗಿದ್ದರು. ವಚನ ಸಂಸ್ಕೃತಿಯನ್ನು ಕಾಪಾಡಿ ಬೆಳೆಸಿದ ಒಬ್ಬ ವೀರಯೋಧರಾಗಿದ್ದ ಅವರು, ದುಡಿಮೆಯನ್ನು ಗೌರವಿಸಿದ ಮಹಾನ್ ಚೇತನ ಎಂದರು.ಸಮಾಜದಲ್ಲಿ ದುಡಿಮೆ ಮಾಡುವ ವರ್ಗಗಳೇ ನಿಜವಾದ ಶಕ್ತಿಕೇಂದ್ರಗಳು ಎಂಬ ಅರಿವು ಎಲ್ಲರಲ್ಲೂ ಮೂಡಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಮಡಿವಾಳ ಮಾಚಿದೇವರ ವಚನಗಳು ಸಮಾನತೆಯ ಸಂದೇಶ ನೀಡುತ್ತವೆ. ಜಾತಿ, ವರ್ಗ, ಲಿಂಗಭೇದವಿಲ್ಲದೆ ಮಾನವನಾಗಿ ಬದುಕುವ ಒತ್ತಾಸೆಯನ್ನು ಅವರು ಪ್ರತಿಪಾದಿಸಿದ್ದರು. ಇಂತಹ ಚಿಂತನೆಗಳನ್ನು ಇಂದಿನ ಸಮಾಜದಲ್ಲಿ ಪುನಃ ಪುನರುಜ್ಜೀವನಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಸುರೇಶ್ ತಿಳಿಸಿದರು.

ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರೈಡ್ ನಾಗರಾಜ್ ಮಾತನಾಡಿ, ಹಿಂದುಳಿದ ಸಮುದಾಯಗಳು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿ ಸಂಘಟಿತರಾಗಬೇಕಾಗಿದೆ. ಸರ್ಕಾರದ ಯೋಜನೆಗಳು ತಳಮಟ್ಟದ ಜನರಿಗೆ ತಲುಪಬೇಕಾದರೆ ಸಮುದಾಯದ ಒಳಗಿನ ಜಾಗೃತಿ ಅತ್ಯಂತ ಮುಖ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಮುದಾಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ಶಿಕ್ಷಣ, ಕಲೆ, ಕ್ರೀಡೆ, ಸಮಾಜಸೇವೆ ಸೇರಿದಂತೆ ವಿವಿಧ ವಲಯಗಳಲ್ಲಿ ಸಾಧನೆ ಮಾಡಿದವರನ್ನು ಗೌರವಿಸುವ ಮೂಲಕ ಯುವಜನರಿಗೆ ಪ್ರೇರಣೆ ನೀಡಲಾಯಿತು. ಕಾರ್ಯಕ್ರಮಕ್ಕೂ ಮುನ್ನ ವಿವಿಧ ಕಲಾತಂಡಗಳ ಮೆರವಣಿಗೆ ನಡೆಯಿತು. ಶರಣರ ಭಾವಚಿತ್ರಗಳು, ವಚನ ಫಲಕಗಳು ಹಾಗೂ ಸಾಂಸ್ಕೃತಿಕ ವೇಷಭೂಷಣಗಳು ಗಮನಸೆಳೆದವು. ಚಕ್ಕೆರೆ ಲೋಕೇಶ್ ತಂಡದವರು ಗೀತ ಗಾಯನ ನಡೆಸಿಕೊಟ್ಟರು. ಕಲಾವಿದ ಕನಕಪುರ ಶ್ರೀನಿವಾಸ್ ನಿರೂಪಿಸಿದರು.


ಉದಯವಾಹಿನಿ ಚಿತ್ರ


> ಶಿಕ್ಷಣದ ಜೊತೆಗೆ ಸಮುದಾಯವನ್ನು ಸಂಘಟಿಸಿ ಮುನ್ನಡೆಸುವ ಕಾರ್ಯ ಅಗತ್ಯವಿದೆ, ಯುವಜನರು ಕೇವಲ ಅಂಕಪಟ್ಟಿಗಳಿಗೆ ಸೀಮಿತರಾಗದೆ, ದೈಹಿಕ ಶಕ್ತಿ, ಶಿಸ್ತು ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸಮರ ಕಲೆಗಳ ಅಭ್ಯಾಸ ಅಗತ್ಯವಿದೆ, ಸಮುದಾಯದೊಳಗಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ನಡೆಯಬೇಕಾಗಿದೆ.
> 
> -ಹಾಸನ್ ರಘು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ

> ಶರಣರ ಚಳವಳಿ ಕೇವಲ ಧಾರ್ಮಿಕ ಚಳವಳಿಯಲ್ಲ, ಅದು ಒಂದು ಸಾಮಾಜಿಕ ಕ್ರಾಂತಿಯಾಗಿತ್ತು. ಮಡಿವಾಳ ಮಾಚಿದೇವರಂತಹ ಶರಣರು ಶ್ರಮಕ್ಕೆ ಗೌರವ ನೀಡುವ ಮೂಲಕ ಸಮಾಜದ ಮೂಲಭೂತ ಮೌಲ್ಯಗಳನ್ನು ಪ್ರಶ್ನಿಸಿದರು. ಇಂದಿನ ಕಾಲಘಟ್ಟದಲ್ಲಿ ಆ ಚಿಂತನೆಗಳನ್ನು ಅಕಾಡೆಮಿಕ್ ಅಧ್ಯಯನದ ಜೊತೆಗೆ ಸಾಮಾಜಿಕ ಆಚರಣೆಯಲ್ಲೂ ಅಳವಡಿಸಬೇಕಾಗಿದೆ.
> 
> -ದೀಪಕ್ ಕುಮಾರ್, ರಾಜ್ಯಶಾಸ್ತ್ರ ಪ್ರಾಧ್ಯಾಪಕ

> ಮಡಿವಾಳ ಮಾಚಿದೇವರ ಜೀವನ ಮತ್ತು ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ. ಸಮಾಜದ ಯುವಕರು ಶರಣರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ.
> 
> -ಪ್ರಕಾಶ್ ಮಂಟೇದಯ್ಯ, ಮಡಿವಾಳ ಸಮಾಜದ ಮುಖಂಡ

# ಹೊಸ ಭಾಷೆ ಬರೆಯುವ ಸಹೃದಯದ ಸತ್ಕಾರ್ಯವೇ ಸತ್ಸಂಗ

ಉದಯವಾಹಿನಿ ಚಿತ್ರ



• **ಉದಯವಾಹಿನಿ, ಕೆಂಭಾವಿ**

ಸಾಹಿತ್ಯ, ಸಂಗೀತ, ಸಾಂಸ್ಕೃತಿಕ, ಪರಂಪರೆಯ ಬೇರು, ಸಂಸ್ಕೃತಿಯ ಬೀಜ, ಶಿವಾನುಭವದ ಬೆಳೆ, ಪೈರು, ತೆನೆ, ಇಂದಿಗೂ ಈ ನೆಲದಲ್ಲಿ ಹಸಿರಾಗಿ ಉಳಿದಿದೆ ಎಂದು ವಡಗೇರಿಯ ಮಲ್ಲಯ್ಯ ಸ್ವಾಮಿ ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶ್ರೀಗುರು ಕಾಂತೇಶ್ವರ ಜನ ಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ರವಿವಾರ ಸಂಜೆ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದ ಅವರು ಹಸಿರು ಹೊನ್ನು ಹುಡುಕಿಕೊಳ್ಳಲು ಸಹೃದಯ ಉಸಿರಿನ ಜ್ಞಾನ ಮತ್ತು ಜಾಣತನ ಎರಡನ್ನೂ ಮಾಸಿಕ ಹುಣ್ಣಿಮೆಯ ಸತ್ಸಂಗದಲ್ಲಿ ಸೂಫಿ ಸಂತರ, ತತ್ವಪದಕಾರರ, ಶರಣರ ತತ್ವ ಚಿಂತನೆಯ ಮೇಲೆ ಬೆಳಕು ಚೆಲ್ಲುತ್ತಾ, ಹೊಸ ಭಾಷೆ ಬರೆಯುವ ಸಹೃದಯದ ಸತ್ಕಾರ್ಯವೇ ಸತ್ಸಂಗವೆಂದವರು, ಮಾಸಿಕ ಹುಣ್ಣಿಮೆಯ ಮಹಾನ್ ಕಾರ್ಯದಲ್ಲಿ ಭಾಗಿಯಾಗುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ಷ ಬ್ರ ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು ಶ್ರೀಮಠದ ಸದ್ಭಕ್ತರು ಶ್ರೀಮಠದಲ್ಲಿ ಜರುಗುವ ಹುಣ್ಣಿಮೆಯ ಸತ್ಸಂಗದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಆಶಿಸಿದರು. ಇತ್ತೀಚೆಗೆ ಜಿಲ್ಲಾ ಪಂಚಾಯತ್ ಯೋಜನಾ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಪುರಸಭೆ ಸದಸ್ಯರಾದ ರವಿಶಂಕರ ಸೊನ್ನದ ಹಾಗೂ ಆರೀಫ್ ಹುಸೇನ್ ಖಾಜಿ ಮತ್ತು ಕೊಟ್ಟೂರು ಚಾರಿಟೇಬಲ್ ಟ್ರಸ್ಟ್ ಕೊಡ ಮಾಡುವ ಸಾಹಿತ್ಯ ರತ್ನ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಶರಣಯ್ಯಸ್ವಾಮಿ ಹಿರೇಮಠ ಇವರಿಗೆ ಶ್ರೀಮಠದಿಂದ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಇದೇ ವೇಳೆ ಶರಣಕುಮಾರ ಯಾಳಗಿ ಹಾಗೂ ಸೋಮನಾಥ ಯಾಳಗಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು. ಡಾ ಯಂಕನಗೌಡ ಎಸ್ ಪಾಟೀಲ ನಿರೂಪಿಸಿ ವಂದಿಸಿದರು, ಸಾಹಿತಿ ನಿಂಗನಗೌಡ ದೇಸಾಯಿ, ಅಭಿಷೇಕ್ ಪಾಟೀಲ, ನಿಜಗುಣ ವಿಶ್ವಕರ್ಮ, ಮಾಳಪ್ಪ ಸುಂಕದ, ಅವ್ವಣ್ಣ ಸೇರಿದಂತೆ ಮಹಿಳೆಯರು ಮಕ್ಕಳು ಉಪಸ್ಥಿತರಿದ್ದರು.

# ಬೇಸಿಗೆ ಆರಂಭಕ್ಕೂ ಮುನ್ನ ನೀರಿನ ಬವಣೆ

## 156 ಗ್ರಾಮಗಳಲ್ಲಿ ಶುರುವಾಗಿದೆ ಜಲ ಆತಂಕ, 65 ಜನವಸತಿ ಪ್ರದೇಶಗಳು ತೀವ್ರ ಸಮಸ್ಯೆಗೆ ಒಳಗಾಗಲಿವೆ

• **ಉದಯವಾಹಿನಿ, ಚಿತ್ರದುರ್ಗ**

ಜಿಲ್ಲೆಯಲ್ಲಿ ಈ ಬಾರಿ ಹಿಂಗಾರು, ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಬಾರದೇ ಇರುವುದರಿಂದ ಬೇಸಿಗೆಯಲ್ಲಿ ಹಲವು ಕಡೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಇತ್ತೀಚಿನ ವರ್ಷಗಳಲ್ಲಿ ಅಂತರ್ಜಲದ ಕೊರತೆ ಇರದ ಕಾರಣ ಕುಡಿಯುವ ನೀರಿನ ಸಮಸ್ಯೆ ಅಷ್ಟಾಗಿ ಬಾಧಿಸಿರಲಿಲ್ಲ. ಈ ಬಾರಿ ಅಂತರ್ಜಲ ಕೊರತೆ ಕಾರಣಕ್ಕೆ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕ ಇದೆ.

### ಶಾಶ್ವತ ಪರಿಹಾರ ಸಿಕ್ಕಿಲ್ಲ

**ಹಿರಿಯೂರು ತಾಲ್ಲೂಕಿನ ಗೌನಹಳ್ಳಿಯಲ್ಲಿ ಈಗ ಕುಡಿಯುವ ನೀರಿನ ಸಮಸ್ಯೆ ತೀವ್ರ ಸ್ವರೂಪದಲ್ಲಿದ್ದು, ಕುಡಿಯುವ ನೀರಿನ ಮೂಲಗಳಿಲ್ಲದ ಬವಣೆ ಪಡುವಂತಾಗಿದೆ. ಕಳೆದ ಕೆಲ ದಿನಗಳ ಹಿಂದೆ ಗ್ರಾಮದ ಸ್ತ್ರೀಶಕ್ತಿ ಸಂಘದ ಮಹಿಳೆಯರು ಮಾರಿಕಣಿವೆಯಿಂದ ಐಮಂಗಲಕ್ಕೆ ಕುಡಿಯುವ ನೀರೊದಗಿಸುವ ಪೈಪ್ ಲೈನ್ ಒಡೆದು, ನೀರು ತುಂಬಿದ್ದರು. ಕೊನೆಗೆ ಅಧಿಕಾರಿಗಳು ಭೇಟಿಯಾಗಿ ಪರ್ಯಾಯ ವ್ಯವಸ್ಥೆ ಮಾಡಿ, ಸದ್ಯಕ್ಕೆ ಸಮಸ್ಯೆ ಬಗೆಹರಿಸಿದ್ದಾರೆ. ಆದರೆ, ಇನ್ನೂ ಶಾಶ್ವತ ಪರಿಹಾರ ಸಿಕ್ಕಿಲ್ಲ.**

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಿಂದ ಸದ್ಯಕ್ಕೆ ಜಿಲ್ಲೆಯ 59 ಗ್ರಾಮ ಪಂಚಾಯಿತಿಗಳ 156 ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಹುದು ಎಂದು ಅಂದಾಜಿಸಲಾಗಿದೆ. ಆಶ್ಚರ್ಯವೆಂದರೆ, ಚಳ್ಳಕೆರೆ

ಉದಯವಾಹಿನಿ ಚಿತ್ರ



**ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ ಹಳ್ಳಿಗಳನ್ನು ಗುರುತಿಸಲಾಗಿದೆ. ನೀರಿನ ಮೂಲ ಚೆನ್ನಾಗಿರುವ ಬೋರ್‌ವೆಲ್ ಗುರುತಿಸಿ, ಬಾಡಿಗೆ ಪಡೆದು ನೀರು ಸರಬರಾಜು ಮಾಡುತ್ತೇವೆ. ನೀರಿನ ಮೂಲಗಳಿಲ್ಲದಿದ್ದಲ್ಲಿ ಟ್ಯಾಂಕರ್‌ನಲ್ಲಿ ಪೂರೈಸಲಾಗುವುದು. ಕಳೆದ ವರ್ಷ ತುಂಬಾ ಕಡಿಮೆ ಟ್ಯಾಂಕರ್‌ಗಳಲ್ಲಿ ನೀರು ಒದಗಿದ್ದೆವು. ನೀರಿನ ಸಮಸ್ಯೆ ನಿರ್ವಹಣೆಗೆ ಅನುದಾನ ಕೊರತೆ ಇಲ್ಲ.**

**– ಟಿ. ವೆಂಕಟೇಶ್ ಜಿಲ್ಲಾಧಿಕಾರಿ**

ಮತ್ತು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ ಗ್ರಾಮಗಳಲ್ಲಿ ಒಂದೇ ಒಂದು ಗ್ರಾಮವನ್ನು ಸಹ ಗುರುತಿಸಲಾಗಿಲ್ಲ. ಉಳಿದಂತೆ ಚಿತ್ರದುರ್ಗ ತಾಲ್ಲೂಕಿನಲ್ಲಿ 20, ಜಿಲ್ಲಾಉಸ್ತುವಾರಿ ಸಚಿವರು ಪ್ರತಿನಿಧಿಸುವ ಹಿರಿಯೂರು ತಾಲ್ಲೂಕಿನಲ್ಲಿ ಅತಿ ಹೆಚ್ಚು 65 ಜನವಸತಿ ಪ್ರದೇಶಗಳು, ಹೊಳಲ್ಕೆರೆಯಲ್ಲಿ 51, ಹೊಸದುರ್ಗದಲ್ಲಿ 20 ಜನವಸತಿ ಪ್ರದೇಶಗಳನ್ನು ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದೆಂದು

**ಸುಮಾರು ಎಂಟು ಬಹುಗ್ರಾಮ ಕುಡಿಯುವ ಯೋಜನೆಗಳ ಕಾಮಗಾರಿ ಶೇ.80 ರಿಂದ 90ರಷ್ಟು ಪೂರ್ಣಗೊಂಡಿದೆ. ಆದರೆ, ಅರಣ್ಯಪ್ರದೇಶದಲ್ಲಿಅನುಮತಿ ಪಡೆಯುವ ಪ್ರಕ್ರಿಯೆ ವಿಳಂಬವಾಗುತ್ತಿರುವುದು. ಸಣ್ಣಪುಟ್ಟ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಕಾರ್ಯಾರಂಭ ಮಾಡುವುದಷ್ಟೇ ಬಾಕಿ ಇದೆ. ಮುಂಬರುವ ಜುಲೈ, ಆಗಸ್ಟ್ ಹೊತ್ತಿಗೆ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಿ, ನೀರೊದಗಿಸುವ ಗುರಿ ಇದೆ.**

**– ಅಮರನಾಥ್ ಜೈನ್ ಇಇ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ**

ಗುರುತಿಸಲಾಗಿದೆ. ಸ್ಥಳೀಯ ಮೂಲಗಳಿಂದಲೇ ನೀರು ಸರಬರಾಜು ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಹೇಳುತ್ತಿದ್ದಾರೆ.

**ಬಹುಗ್ರಾಮ ನೀರಿನ ಯೋಜನೆಗಳು:** ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನವಸತಿ ಪ್ರದೇಶಗಳಲ್ಲಿ ನದಿ ಮೂಲಗಳಿಂದ ನೀರೊದಗಿಸುವ 11 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಬಹುತೇಕ ಮುಕ್ತಾಯ ಹಂತದಲ್ಲಿವೆ.

ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕಿನ ಸಿರಿಗೆರೆ–ಭರಮಸಾಗರ ಸುತ್ತಲಿನ 45 ಗ್ರಾಮಗಳಿಗೆ ಶಾಂತಿ ಸಾಗರದಿಂದ ನೀರು ಪೂರೈಕೆ ಮಾಡುವ ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿದ್ದು, ನೀರು ಪೂರೈಕೆಯಾಗುತ್ತಿದೆ. ಹಿರಿಯೂರು ತಾಲ್ಲೂಕಿನ ಐಮಂಗಲ ಸುತ್ತಲಿನ 37 ಜನವಸತಿ ಪ್ರದೇಶಗಳಿಗೆ ನೀರೊದಗಿಸುವ ಯೋಜನೆ ಬಹುತೇಕ ಮುಕ್ತಾಯಗೊಂಡಿದೆ.

# ಮಿನಿ ನ್ಯೂಸ್

## ಹಳೇ ಪಿಂಚಣಿ ಯೋಜನೆ ಮರುಜಾರಿಗೆ ಆಗ್ರಹಿಸಿ ಸಮಾವೇಶ ಶೀಘ್ರ: ಷಡಾಕ್ಷರಿ

• **ಉದಯವಾಹಿನಿ, ಗದಗ**

ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಆಗ್ರಹಿಸಿ ಬೃಹತ್ ಸಮಾವೇಶ ನಡೆಸಲು ನೌಕರರೊಂದಿಗೆ ಚರ್ಚಿಸಿ, ನಿರ್ಧರಿಸಲಾಗುವುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು. ನಗರದಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 2.93 ಲಕ್ಷ ಮಂದಿ ಎನ್‌ಪಿಎಸ್ ನೌಕರರು ಇದ್ದಾರೆ. ಒಪಿಎಸ್‌ಗಾಗಿ ಸರ್ಕಾರ ಶೇ 10 ಮೊತ್ತ ನೀಡಿದರೆ ವರ್ಷಕ್ಕೆ 3 ಸಾವಿರ ಕೋಟಿ ಹೊರೆ ಆಗುತ್ತದೆ. ಆದರೆ, ರಾಜ್ಯದಲ್ಲಿ 2.73 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಅದರಿಂದ ಸುಮಾರು 2,500 ಕೋಟಿ ಉಳಿತಾಯ ಆಗುತ್ತಿದೆ. ಎನ್‌ಪಿಎಸ್ ಕಮಿಟಿ ಅಧ್ಯಕ್ಷರಾದ ಉಮಾ ಮಹಾದೇವನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ತಿಳಿಸಿಕೊಡಲಾಗಿದೆ. ಎನ್‌ಪಿಎಸ್‌ನಿಂದ ಒಪಿಎಸ್ ಆಗಬೇಕು. ಅದು ಬಿಟ್ಟು ಬೇರೆ ಯಾವುದೇ ನಿರ್ಣಯಕ್ಕೂ ಒಪ್ಪುವುದಿಲ್ಲ ಎಂಬುದನ್ನು ತಿಳಿಸಲಾಗಿದೆ ಎಂದರು.

## ಪ್ರಮಾಣಿಕ ಸೇವೆಗೆ ಪ್ರತಿಫಲ ನಿಶ್ಚಿತ

• **ಉದಯವಾಹಿನಿ, ಮುಂಡರಗಿ**

ನಿಷ್ಠೆ, ಪ್ರಾಮಾಣಿಕತೆಯಿಂದ ಸೇವೆ ಮಾಡುವ ಸಂದರ್ಭಗಳಲ್ಲಿ ಅಡೆತಡೆಗಳು ಬರುತ್ತವೆ. ಅವೆಲ್ಲವನ್ನು ಮೆಟ್ಟಿ ನಿಂತು ಪ್ರಾಮಾಣಿಕತೆಯಿಂದ ಸೇವೆ ಮಾಡಿದರೆ ನಾವು ನಿರೀಕ್ಷಿಸಿದ ಫಲ ಖಂಡಿತಾ ದೊರೆಯುತ್ತದೆ ಎಂದು ಡಿ.ವೈ.ಎಸ್.ಪಿ. ವೆಂಕಟಪ್ಪ ನಾಯಕ ತಿಳಿಸಿದರು ಇಲ್ಲಿಯ ಜಗದ್ಗುರು ಅನ್ನದಾನೀಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಶತಮಾನೋತ್ಸವದ ಸಮಾರೋಪ, ಸಿಬ್ಬಂದಿ ಸಮಾವೇಶ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು. ಸ್ವಸ್ಥ, ಸದೃಢ ಸಮಾಜ ನಿರ್ಮಾಣದಲ್ಲಿ ನಮ್ಮ ಮಠ, ಮಾನ್ಯಗಳು ಮಹತ್ವದ ಪಾತ್ರ ವಹಿಸುತ್ತವೆ.

ಎಲ್ಲಾ ವರ್ಗದ ಮಕ್ಕಳಿಗೆ ಉಚಿತ ಅನ್ನ, ಆಶ್ರಯ, ಜ್ಞಾನ ನೀಡುವ ಮೂಲಕ ನಮ್ಮ ಮಠಗಳು ಬಹುದೊಡ್ಡ ಕ್ರಾಂತಿ ಮಾಡಿದವು ಎಂದು ಹರ್ಷ ವ್ಯಕ್ತಪಡಿಸಿದರು. ನಿವೃತ್ತ ಪ್ರಾಚಾರ್ಯ ಡಿ.ಸಿ.ಮಠದ ಮಾತನಾಡಿ, ಹಿಂದುಳಿದ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಈ ಭಾಗದ ಮಕ್ಕಳ ಬದುಕಿಗೆ ಅನ್ನದಾನೀಶ್ವರ ಮಠವು ಬೆಳಕು ನೀಡಿದೆ. ವಿದ್ಯಾ ಸಮಿತಿಯು ಶತಮಾನೋತ್ಸವ ಆಚರಿಸುವ ಮೂಲಕ ಎಲ್ಲರಲ್ಲಿ ಹರ್ಷ ಮೂಡಿಸಿದೆ ಎಂದು ತಿಳಿಸಿದರು. ಅನ್ನದಾನೀಶ್ವರ ಸ್ವಾಮೀಜಿ ಮಾತನಾಡಿ, ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ ನಾವು ಕಲಿತ ಶಾಲೆ, ನಮಗೆ ಕಲಿಸಿದ ಗುರುಗಳನ್ನು ಮರೆಯಬಾರದು. ಸದಾ ನಮ್ಮ ಕೈಲಾದಷ್ಟು ಸಮಾಜ ಸೇವೆ ಮಾಡಬೇಕು ಎಂದು ಸಲಹೆ ನೀಡಿದರು.

## ಮಡಿವಾಳ ಮಾಚಿದೇವರ ಕಾಯಕನಿಷ್ಠೆ ಅನುಕರಣೀಯ: ಎಚ್.ಭೀಮಪ್ಪ

• **ಉದಯವಾಹಿನಿ, ಹಗರಿಬೊಮ್ಮನಹಳ್ಳಿ**

ಮಡಿವಾಳ ಮಾಚಿದೇವರ ಕಾಯಕನಿಷ್ಠೆ ಅಪಾರವಾದದ್ದು ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಎಚ್.ಭೀಮಪ್ಪ ಅಭಿಪ್ರಾಯಪಟ್ಟರು. ತಾಲ್ಲೂಕಿನ ಹಂಪಾಪಟ್ಟಣ ಗ್ರಾಮದಲ್ಲಿ ಮಡಿವಾಳರ ಸಮಾಜದಿಂದ ಹಮ್ಮಿಕೊಂಡಿದ್ದ ಶರಣ ಮಾಚಿದೇವರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. ಜಾತಿ, ಮತ, ಲಿಂಗ ಬೇಧವನ್ನು ತಿರಸ್ಕರಿಸಿದ ಬಸವಣ್ಣನವರ ಸಾಮಾಜಿಕ ಕ್ರಾಂತಿಯಲ್ಲಿ ಮಾಚಿದೇವರು ತಮ್ಮನ್ನು ತೊಡಿಗಿಸಿಕೊಂಡರು, ವಚನ ಸಾಹಿತ್ಯದ ಹಸ್ತಪ್ರತಿಗಳನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಹೊತ್ತಿದ್ದ ಇವರು ಅನುಭವ ಮಂಟಪದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು. ಪ್ರತಿಯೊಬ್ಬರೂ ಮಾಚಿದೇವರ ತತ್ವ, ಆದರ್ಶಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

## ಹಿಂದೂ ಏಕತಾ ಸಮಾವೇಶಕ್ಕೆ ಐಕ್ಯತೆ ಅಗತ್ಯ: ರವಿ ಬಿರಾದಾರ

• **ಉದಯವಾಹಿನಿ, ಕಮಲಾಪುರ**

ಪಟ್ಟಣದಲ್ಲಿ ನಡೆಯುವ ಹಿಂದೂ ಏಕತಾ ಸಮಾವೇಶಕ್ಕೆ ಎಲ್ಲಾ ಜಾತಿ ಜನಾಂಗದವರನ್ನು ಸೇರಿಸಿ, ವಿಶ್ವಾಸಕ್ಕೆ ತೆಗೆದುಕೊಂಡು, ಹಿಂದೂ ನಾವೆಲ್ಲರೂ ಒಂದು ಎಂಬ ಐಕ್ಯತೆ ಸಾರುವುದು ಅಗತ್ಯ ಎಂದು ಬಿಜೆಪಿ ಹಿರಿಯ ಮುಖಂಡ ರವಿ ಬಿರಾದಾರ ತಿಳಿಸಿದರು. ಕಮಲಾಪುರ ಪಟ್ಟಣದಲ್ಲಿ ಫೆ.2 ರಂದು ನಡೆಯಲಿರುವ ಹಿಂದೂ ಏಕತಾ ಸಮಾವೇಶ ನಿಮಿತ್ತ ಆಯೋಜಿಸಿದ್ದ ಸಮಾಲೋಚನೆ ಸಭೆಯಲ್ಲಿ ಅವರು ಮಾತನಾಡಿದರು.


ಪಟ್ಟಣದ ಹಿರಿಯರು, ಸ್ವಾಮೀಜಿಗಳು ಭಾಗವಹಿಸಬೇಕು. ಪಕ್ಷಾತೀತವಾಗಿ ಸಮಾವೇಶ ನಡೆಯಬೇಕು. ಎಲ್ಲಾ ಪಕ್ಷದಲ್ಲಿ ಹಿಂದೂಗಳಿದ್ದಾರೆ. ಅವರೆಲ್ಲರೂ ಭಾಗವಹಿಸಿದಾಗ ಬಲಿಷ್ಠ ಸಮಾಜ ಕಟ್ಟಲು ಸಾಧ್ಯ ಎಂದರು. ಸಮಾವೇಶದ ಆಯೋಜಕರಂತೆ ಓಡಾಡುವವರು ಸ್ವಹಿತಾಸಕ್ತಿ, ಮತ್ಸರ ಸಾಧಿಸಬಾರದು. ನಮ್ಮೆಲ್ಲ ಸ್ವಾರ್ಥ ಬದಿಗೊತ್ತಿ ಸದೃಢ ಹಿಂದೂ ಸಮಾಜ ನಿರ್ಮಾಣಕ್ಕೆ ಪಣ ತೊಡಬೇಕು. ಈ ನಿಟ್ಟಿನಲ್ಲಿ ನಾವೆಲ್ಲರು ಕಾರ್ಯನಿರ್ವಹಿಸಬೇಕು ಎಂದು ತಿಳಿಹೇಳಿದರು. ಕಮಲಾಪುರ ತಾಲ್ಲೂಕು ನಿರ್ಮಾಣ ಹೋರಾಟ ಸಮಿತಿ ಅಧ್ಯಕ್ಷ ಸುಭಾಷ ಬಿರಾದಾರ, ಜಿ.ಪಂ ಮಾಜಿ ಸದಸ್ಯ ಶಿವಶೆಟ್ಟಿ ಪಾಟೀಲ, ಹಿರಿಯ ಮುಖಂಡರಾದ ಅಮೃತಪ್ಪ ದೋಶೆಟ್ಟಿ, ವೀರು ಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು.

# ಈ ವಿಷಯದಲ್ಲಿ ಬಳ್ಳಾರಿಯೇ ಶ್ರೀಮಂತ ಜಿಲ್ಲೆ

• **ಉದಯವಾಹಿನಿ, ಬಳ್ಳಾರಿ**

ರಾಜ್ಯದ ಎಲ್ಲಾ ಜಿಲ್ಲಾ ಖನಿಜ ಪ್ರತಿಷ್ಠಾನಗಳಿಗೆ ಈ ವರೆಗೆ ಒಟ್ಟು 4828.34 ಕೋಟಿ ಸಿಕ್ಕಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯೊಂದಕ್ಕೆ ಸಿಕ್ಕ ಮೊತ್ತ 2623.82 ಕೋಟಿ. ಹೀಗಾಗಿ ಡಿಎಂಎಫ್ ವಿಚಾರದಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯದ ಯಾವುದೇ ಜಿಲ್ಲೆಗಿಂತಲೂ ಅತ್ಯಂತ ಶ್ರೀಮಂತ ಜಿಲ್ಲೆ.

ಡಿಎಂಎಫ್ ಹಣವನ್ನು ಆಯಾ ಜಿಲ್ಲೆಗಳಲ್ಲಿ ಗಣಿಗಾರಿಕೆ ಕಾರ್ಯಾಚರಣೆಯ ಪ್ರಭಾವಕ್ಕೆ ಒಳಗಾದ ಪ್ರದೇಶಗಳಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲಾಗುತ್ತದೆ. ಹಾಗೆ ನೋಡಿದರೆ, ಸಾವಿರಾರು ಕೋಟಿ ಹಣವನ್ನು ಡಿಎಂಎಫ್‌ನಲ್ಲಿ ಹೊಂದಿರುವ ಬಳ್ಳಾರಿಯು ಇಷ್ಟು ಹೊತ್ತಿಗೆ ಗಮನಾರ್ಹ ಅಭಿವೃದ್ಧಿಯಾಗಬೇಕಾಗಿತ್ತು. ಆದರೆ, ಹಾಗೆಲ್ಲ ಸುಲಭಕ್ಕೆ, ಹೇಗೆಂದರೆ ಹಾಗೆ ಈ ಹಣ ಬಳಸಲು ಸಾಧ್ಯವಿಲ್ಲ. ಅದಕ್ಕೆಂದೇ ಪ್ರತ್ಯೇಕ ನಿಯಮಾವಳಿ, ಕಾನೂನುಗಳಿವೆ.




ಹಾಗಾದರೆ, ಡಿಎಂಎಫ್ ಎಂದರೇನು, ಯಾವಾಗ ಸ್ಥಾಪನೆಯಾಯಿತು, ಬಳ್ಳಾರಿಗೆ ಮಾತ್ರ ಇಷ್ಟು ಹಣ ಸಿಗಲು ಕಾರಣವೇನು, ಬೇರೆ ಜಿಲ್ಲೆಗಳಲ್ಲಿ ಎಷ್ಟು ಹಣವಿದೆ. ಡಿಎಂಎಫ್‌ನ ಮೂಲ ಉದ್ದೇಶವೇನು, ಹಣವಿದ್ದರೂ ಬಳಸಲಾಗದ ಪರಿಸ್ಥಿತಿ ಏಕೆ... ಈ ಎಲ್ಲಾ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ.

**ಡಿಎಂಎಫ್ ಎಂದರೇನು?:** ಜಿಲ್ಲಾ ಖನಿಜ ಪ್ರತಿಷ್ಠಾನ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ದೇಶದ ಎಲ್ಲಾ ಜಿಲ್ಲೆಗಳಲ್ಲಿ ಡಿಎಂಎಫ್‌ಗಳನ್ನು ಸ್ಥಾಪಿಸಲು ಭಾರತ ಸರ್ಕಾರ ಅವಕಾಶ ಕಲ್ಪಿಸಿದೆ. ಗಣಿಗಾರಿಕೆ ಸಂಬಂಧಿತ ಚಟುವಟಿಕೆಗಳಿಂದ ಪ್ರಭಾವಿತವಾದ ಪ್ರದೇಶಗಳು, ಜನಸಮುದಾಯದ ಹಿತಾಸಕ್ತಿ ಮತ್ತು ಕಲ್ಯಾಣಕ್ಕಾಗಿ ಎಲ್ಲಾ ಡಿಎಂಎಫ್‌ಗಳು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ಅಡಿಯಲ್ಲಿ ಯೋಜನೆಗಳನ್ನು ರೂಪಿಸಿ, ಜಾರಿಗೆ ತರುತ್ತವೆ.

**ಎಲ್ಲಿಂದ ಹಣ?:** ಪ್ರತಿ ಜಿಲ್ಲೆಗಳ ಮುಖ್ಯ ಖನಿಜ ಮತ್ತು ಉಪ ಖನಿಜಗಳ ಗುತ್ತಿಗೆದಾರರು ತಾವು ಉತ್ಪಾದಿಸುವ ಪ್ರಮಾಣದ ಆಧಾರದ ಮೇಲೆ ರಾಜ್ಯ ಸರ್ಕಾರಕ್ಕೆ ರಾಯಧನ ಪಾವತಿಸುತ್ತಾರೆ. ರಾಯಧನದ ಒಂದು ಭಾಗವನ್ನು ಡಿಎಂಎಫ್‌ಗಳಿಗೆ ಸಂದಾಯ ಮಾಡುತ್ತಾರೆ.

**ಯಾವುದಕ್ಕೆ ಬಳಕೆ:** ಕುಡಿಯುವ ನೀರು, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ, ಗಣಿಗಾರಿಕೆ ಪೀಡಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯಂತಹ ಕಲ್ಯಾಣ ಯೋಜನೆಗಳಿಗೆ ಮಾತ್ರವೇ ಡಿಎಂಎಫ್‌ಗಳು ಹಣವನ್ನು ಖರ್ಚು ಮಾಡಬೇಕು.

# ಮೂರು ರಾಜ್ಯ ಪ್ರಶಸ್ತಿ ಪಡೆದ 'ದಂತಪುರಾಣ' ಚಿತ್ರ ಹೊಸಪೇಟೆಯಲ್ಲಿ ಮಾತ್ರ ಬಿಡುಗಡೆ

• **ಉದಯವಾಹಿನಿ, ಹೊಸಪೇಟೆ**

ದಂತಪುರಾಣ ಮಕ್ಕಳ ಸಿನಿಮಾಕ್ಕೆ ಈಗಾಗಲೇ ಮೂರು ರಾಜ್ಯ ಪ್ರಶಸ್ತಿಗಳು ಲಭಿಸಿದ್ದು, ನಿರ್ಮಾಣವಾದ ಆರು ವರ್ಷಗಳ ಬಳಿಕ ಹೊಸಪೇಟೆಯಲ್ಲಿ ಮಾತ್ರ ಫೆ.6ರಂದು ಈ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ವಿಶಾಲ್ ರಾಜ್ ಹೇಳಿದರು. ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಬಯಲು ಶೌಚಾಲಯ ಮುಕ್ತವಾಗಬೇಕು, ಮಕ್ಕಳು ಮೊಬೈಲ್ ಅನ್ನು ಹಿತಮಿತವಾಗಿ ಬಳಸಬೇಕು ಎಂಬ ಸಂದೇಶದೊಂದಿಗೆ ಹಳ್ಳಿ, ನಗರ ಜೀವನದ ಚಿತ್ರಣವನ್ನು ಈ ಸಿನಿಮಾ ಬಿಂಬಿಸುತ್ತದೆ. ನಗರದ ಮಿರಾಲಂ ಟಾಕೀಸ್‌ನಲ್ಲಿ ಈಗಾಗಲೇ ಮೂರು ದಿನ ಹೌಸ್‌ಫುಲ್ ಪ್ರದರ್ಶನಕ್ಕೆ ವ್ಯವಸ್ಥೆ ಆಗಿದೆ. ಇಲ್ಲಿನ ಯಶಸ್ಸನ್ನು ನೋಡಿಕೊಂಡು ಮುಂದೆ ಇತರ ಜಿಲ್ಲೆಗಳಲ್ಲೂ ಚಿತ್ರವನ್ನು ಬಿಡುಗಡೆ ಮಾಡಲಾಗುವುದು ಎಂದರು.

ರಂಗಭೂಮಿ ಕಲಾವಿದೆಯೂ ಆಗಿರುವ 82 ವರ್ಷದ ಮಂಜುಳಮ್ಮ ಅವರು ಈ ಚಿತ್ರದಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಬಾಲನಟ ಬೆಂಗಳೂರಿನ ಅಹಿಲ್ ಅನ್ಸಾರಿ ಸಹಿತ ಹೊಸಪೇಟೆ, ಮರಿಯಮ್ಮನಹಳ್ಳಿ, ಇಳಕಲ್‌ಗಳಂತಹ ಉತ್ತರ ಕರ್ನಾಟಕ ಭಾಗದ ಬಾಲಕಲಾವಿದರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಲಾವಿದೆ ಮಂಜಮ್ಮ ಜೋಗತಿ ಅವರೂ ಪ್ರಮುಖ ಪಾತ್ರದಲ್ಲಿದ್ದಾರೆ. ಮಕ್ಕಳು ಮಾತ್ರವಲ್ಲ ಕುಟುಂಬದ ಎಲ್ಲ ಸದಸ್ಯರೂ ಒಟ್ಟಾಗಿ ಕುಳಿತುಕೊಂಡು ನೋಡಬಹುದಾದ ಸಿನಿಮಾ ಇದು ಎಂದು ಹೇಳಿದರು.

**ಅನುಭವದ ಮಾದರಿ:** ಈ ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಒಂದು ಹಾಡಿಗೆ, ಬಾಲನಟನ ಪಾತ್ರಕ್ಕೆ ಹಾಗೂ ಪೋಷಕ ನಟಿ ಪಾತ್ರಕ್ಕೆ ರಾಜ್ಯಪ್ರಶಸ್ತಿಗಳು ಸಿಕ್ಕಿವೆ. ಆದರೆ ಥಿಯೇಟರ್‌ಗಳಲ್ಲಿ ಇದಕ್ಕೆ ಇನ್ನೂ ಪ್ರದರ್ಶನ ಭಾಗ್ಯ ಸಿಕ್ಕಿಲ್ಲ. ಈ ಹಿಂದೆ 'ಅನುಭವ' ಸಿನಿಮಾವನ್ನು ಬೆಂಗಳೂರಿನ ಒಂದೇ ಒಂದು ಥಿಯೇಟರ್‌ನಲ್ಲಿ ಬಿಡುಗಡೆ ಮಾಡಲಾಗಿತ್ತು. ಬಳಿಕ ಅದು ಜನಪ್ರಿಯತೆ ಪಡೆದು ರಾಜ್ಯದಾದ್ಯಂತ ಪ್ರದರ್ಶನ ಕಂಡಿತು. ಅದೇ ರೀತಿ 'ದಂತಪುರಾಣ' ಸಹ ಯಶಸ್ಸು ಗಳಿಸುವ ವಿಶ್ವಾಸದಲ್ಲಿದ್ದೇವೆ ಎಂದು ವಿಶಾಲ್ ರಾಜ್ ಹೇಳಿದರು.

# ವಚನ ಸಾಹಿತ್ಯಕ್ಕೆ ಪಟ್ಟಾಭಿಷೇಕ; ಮೂರು ದಿನಗಳ ವಚನ ವಿಜಯೋತ್ಸವಕ್ಕೆ ತೆರೆ

• **ಉದಯವಾಹಿನಿ, ಬೀದರ್**

ಲಿಂಗಾಯತ ಧರ್ಮ ಗ್ರಂಥ ವಚನ ಸಾಹಿತ್ಯದ ಭವ್ಯ ಮೆರವಣಿಗೆ ಹಾಗೂ ಅದಕ್ಕೆ ಪಟ್ಟಾಭಿಷೇಕ ಮಾಡುವುದರೊಂದಿಗೆ ನಗರದ ಬಸವಗಿರಿಯಲ್ಲಿ ಏರ್ಪಡಿಸಿದ್ದ ಮೂರು ದಿನಗಳ 24ನೇ ವಚನ ವಿಜಯೋತ್ಸವ ಕಾರ್ಯಕ್ರಮಕ್ಕೆ ಸಂಜೆ ವಿದ್ಯುಕ್ತ ತೆರೆ ಬಿತ್ತು.

ಬೆಳಿಗ್ಗೆ ನಗರದ ಬಸವೇಶ್ವರ ವೃತ್ತದಿಂದ ಪಾಪನಾಶ ಸಮೀಪದ ಬಸವಗಿರಿ ತನಕ ಭವ್ಯ ಮೆರವಣಿಗೆ ನಡೆಯಿತು. ಅಪಾರ ಸಂಖ್ಯೆಯ ಶರಣ–ಶರಣೆಯರು ಶ್ವೇತವಸ್ತ್ರ ಧರಿಸಿ, ಷಟಕೋನ ಚಿಹ್ನೆ ಇರುವ ಸ್ಕಾರ್ಫ್ ಧರಿಸಿ, ತಲೆಯ ಮೇಲೆ ವಚನ ಸಾಹಿತ್ಯ ಹೊತ್ತುಕೊಂಡು ಹೆಜ್ಜೆ ಹಾಕಿದರು. ಮಾರ್ಗದುದ್ದಕ್ಕೂ ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ, ವಚನ ಸಾಹಿತ್ಯಕ್ಕೆ ಜಯವಾಗಲಿ, ವಚನ ವಿಜಯೋತ್ಸವಕ್ಕೆ ಜಯವಾಗಲಿ ಎಂದು ಘೋಷಣೆಗಳನ್ನು ಹಾಕಿದರು. ಮೆರವಣಿಗೆಯಲ್ಲಿ 30 ಅಡಿ ಎತ್ತರದ ಬಸವೇಶ್ವರರ ಪುತ್ಥಳಿ ಗಮನ ಸೆಳೆಯಿತು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಡಿವಾಳ ಮಾಚಿದೇವರ ಸೇರಿದಂತೆ ಇತರೆ

ಉದಯವಾಹಿನಿ ಚಿತ್ರ



ಶರಣರ ವೇಷಧಾರಿಗಳಾಗಿ ಮಕ್ಕಳು ಒಂಟೆ ಮೇಲೆ ಕುಳಿತು ಗಮನ ಸೆಳೆದರು. ಷಟಸ್ಥಲ ಧ್ವಜ ಬೀಸುತ್ತ ವಚನಗಳಿಗೆ ಮೈಮರೆತು ಭಕ್ತಿಭಾವದಿಂದ ಹೆಜ್ಜೆ ಹಾಕಿದರು. ಕಲಾ ತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ಪಾಂಡೋಮಟ್ಟಿಯ ಗುರುಬಸವ ಸ್ವಾಮೀಜಿ, ಹುಲಸೂರಿನ ಶಿವಾನಂದ ಸ್ವಾಮೀಜಿ, ಬಸವ ಸೇವಾ ಪ್ರತಿಷ್ಠಾನದ ಗಂಗಾಂಬಿಕಾ ಅಕ್ಕ, ನಿವೃತ್ತ ಐಎಎಸ್ ಅಧಿಕಾರಿ, ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸಿ. ಸೋಮಶೇಖರ್ ಅವರು ವಚನ ಪಠಣ ಮಾಡುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

# ವಿದೇಶಿ ಉದ್ಯೋಗಾಕಾಂಕ್ಷಿಗಳಿಗಾಗಿ ಅಂತರರಾಷ್ಟ್ರೀಯ ಉದ್ಯೋಗ ಮೇಳ

• **ಉದಯವಾಹಿನಿ, ವಿಜಯಪುರ**

ವಿದೇಶಗಳಲ್ಲಿ ಉದ್ಯೋಗ ಬಯಸುವವರಿಗಾಗಿ ಏಪ್ರಿಲ್ 4ರಂದು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಉದ್ಯಮಶೀಲತೆ, ಜೀವನೋಪಾಯ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು. ಕರ್ನಾಟಕ ರಾಜ್ಯ ಕೌಶಲಾಭಿವೃದ್ಧಿ ನಿಗಮದಿಂದ ನಗರದ ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಸ್ಕಿಲ್ ಕನೆಕ್ಟ್ ಪೋರ್ಟಲ್:** ದೇಶದಲ್ಲಿ ನಿರುದ್ಯೋಗ ಸಮಸ್ಯೆ ಗಂಭೀರವಾಗಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಉದ್ಯೋಗ ಮೇಳ ಆಯೋಜನೆ ಜೊತೆಯಲ್ಲಿ ನಿರಂತರವಾಗಿ ಉದ್ಯೋಗ ಒದಗಿಸುವ ಉದ್ದೇಶದಿಂದ 'ಸ್ಕಿಲ್ ಕನೆಕ್ಟ್' ಎಂಬ ಆನ್‌ಲೈನ್ ಪೋರ್ಟಲ್ ಮೂಲಕವೇ ಉದ್ಯೋಗಕ್ಕೆ ನೋಂದಣಿ, ಆಯ್ಕೆ ಪ್ರಕ್ರಿಯೆ ನಡೆಸಲು ಯೋಜಿಸಲಾಗಿದೆ ಎಂದರು. ರಾಜ್ಯದಲ್ಲಿ ಪ್ರತಿ ವರ್ಷ 1.5 ಲಕ್ಷ ಜನ ಇಂಜಿನಿಯರಿಂಗ್ ಪದವಿ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಸರಿಯಾದ ಕೌಶಲ ಇಲ್ಲದ ಕಾರಣ ಶೇ 20ರಷ್ಟು ಜನರಿಗೆ ಪ್ಲೇಸ್‌ಮೆಂಟ್ ಆಗುತ್ತಿಲ್ಲ ಎಂದು ಹೇಳಿದರು.

**ಯುವ ಜನತೆ ಭಾರತದ ಶಕ್ತಿ:** ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಪ್ರಪಂಚದಲ್ಲಿ ಅತಿ ಹೆಚ್ಚು ಯುವ ಜನರು ಇರುವ ದೇಶ ಭಾರತ, 40 ಕೋಟಿಗೂ ಅಧಿಕ ಯುವ ಜನರಿದ್ದಾರೆ. ಯುವ ಜನತೆ ಭಾರತದ ಶಕ್ತಿಯಾಗಿದೆ ಎಂದರು.

ಉದಯವಾಹಿನಿ ಚಿತ್ರ



ಎಐ ತಂತ್ರಜ್ಞಾನದಿಂದ ಇಡೀ ಜಗತ್ತು ಬದಲಾವಣೆ ಆಗುತ್ತಿದೆ. ಇದಕ್ಕೆ ತಕ್ಕಂತೆ ನಾವು ಬದಲಾವಣೆ ಆಗಬೇಕಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭೆಗಳಿವೆ. ಅವರಿಗೆ ಸೂಕ್ತ ವೇದಿಕೆ ಸಿಗಬೇಕಿದೆ ಎಂದರು. ಎಐ ತಂತ್ರಜ್ಞಾನದಿಂದಾಗಿ ಭವಿಷ್ಯದಲ್ಲಿ ಇಂಜಿನಿಯರ್, ವೈದ್ಯರು ಸಹ ಸಂಕಷ್ಟ ಎದುರಿಸಬೇಕಾಗುತ್ತದೆ. ಇದಕ್ಕಾಗಿ ನಾವು ಎಐ ತಂತ್ರಜ್ಞಾನ ಸೇರಿದಂತೆ ಹೊಸ ಶಿಕ್ಷಣ ವ್ಯವಸ್ಥೆಗೆ ಮಾರ್ಪಾಡಾಗಬೇಕಿದೆ ಎಂದರು.

**2,074 ಹುದ್ದೆಗಳಿಗೆ ಆಯ್ಕೆ:** ಉದ್ಯೋಗ ಮೇಳದಲ್ಲಿ ಒಟ್ಟು 25,356 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 11,713 ಅಭ್ಯರ್ಥಿಗಳು ಹಾಜರಾಗಿದ್ದರು. 2,074 ಅಭ್ಯರ್ಥಿಗಳು ವಿವಿಧ ಕಂಪನಿಗಳ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ ಎಂದು ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ ತಿಳಿಸಿದ್ದಾರೆ.

4,313 ಅಭ್ಯರ್ಥಿಗಳು ಶಾರ್ಟ್ ಲಿಸ್ಟ್ ಆಗಿದ್ದಾರೆ. ಈ ಮೇಳದಲ್ಲಿ 160 ವಿವಿಧ ಕಂಪನಿಗಳು ನೋಂದಾಯಿಸಿಕೊಂಡು, 141 ಕಂಪನಿಗಳು ಭಾಗವಹಿಸಿದ್ದವು ಎಂದರು. ಕೌಶಲಾಭಿವೃದ್ಧಿ ನಿಗಮದದಿಂದ 'ನನ್ನ ವೃತ್ತಿ, ನನ್ನ ಆಯ್ಕೆ' ಸೇರಿದಂತೆ ವಿವಿಧ ತರಬೇತಿಗಳನ್ನು ನೀಡಲಾಗುತ್ತಿದೆ. ಸ್ವಾವಲಂಬಿ ಬದುಕಿಗೆ ಕೌಶಲ್ಯಾಭಿವೃದ್ಧಿ ಅವಶ್ಯಕವಿದ್ದು, ಈ ನಿಟ್ಟಿನಲ್ಲಿ ಮಹಿಳೆಯರು ಸ್ವಾವಲಂಬಿಯಾಗಲು ನಲ್–ಜಲ್ ಯೋಜನೆಯಡಿ ಅಸಾಧಾರಣ ಕೌಶಲ್ಯ ರೂಪಿಸಿಕೊಳ್ಳಲು ತರಬೇತಿ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

# ಹಸ್ತಪ್ರತಿ ಡಿಜಿಟಲೀಕರಣ; ಆರ್ಥಿಕ ಕೊರತೆ

• **ಉದಯವಾಹಿನಿ, ಹುಬ್ಬಳ್ಳಿ**

ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣಕ್ಕಾಗಿ, ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಹಾಗೂ ಡಿಜಿಟಲೀಕರಣ ಮಸೂದೆ–2025ಕ್ಕೆ ಈಚೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಆದರೆ, ತಾಳೆಗರಿಗಳಲ್ಲಿ ಇರುವ ವಚನ ಸಾಹಿತ್ಯವು ನಾಶವಾಗದಂತೆ, ಅದನ್ನು ಡಿಜಿಟಲೀಕರಣಗೊಳಿಸಿ ಶಾಶ್ವತವಾಗಿ ಕಾಪಾಡುವ ಕಾರ್ಯಕ್ಕೆ ಹಣಕಾಸಿನ ಕೊರತೆ ಉಂಟಾಗಿದೆ. ಇ–ಸಾಹಿತ್ಯ ದಾಖಲೀಕರಣ, ಸಂಶೋಧನಾ ಕೇಂದ್ರದ ಮುಖ್ಯಸ್ಥ ಅಶೋಕ ದೊಮ್ಮಲೂರು ಅವರು ತಮ್ಮ ತಂಡದೊಂದಿಗೆ ಸ್ವಯಂಪ್ರೇರಿತವಾಗಿ, ಸ್ವಂತ ಹಣ, ಇತರರ ನೆರವಿನೊಂದಿಗೆ ಈವರೆಗೆ 50 ಲಕ್ಷ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಿದ್ದಾರೆ. ವಿವಿಧೆಡೆ ಕೋಟ್ಯಂತರ ಹಸ್ತಪ್ರತಿಗಳಿದ್ದು, ಆರ್ಥಿಕ ತೊಂದರೆಯಿಂದ ಅವುಗಳ ಡಿಜಿಟಲೀಕರಣಕ್ಕೆ ತೊಡಕಾಗಿದೆ.

ಉದಯವಾಹಿನಿ ಚಿತ್ರ



ಹುಬ್ಬಳ್ಳಿಯ ಮೂರುಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಬೆಳಗಾವಿಯ ನಾಗಲೂರು ರುದ್ರಾಕ್ಷಿ ಮಠ, ಚಿತ್ರದುರ್ಗದ ಸಿರಿಗೆರೆ ಮಠ, ತುಮಕೂರಿನ ಸಿದ್ದಗಂಗಾಮಠ ಸೇರಿ ಧಾರವಾಡ, ಗುಲಬರ್ಗಾ, ಶಿವಮೊಗ್ಗ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಗಳನ್ನು ಉಚಿತವಾಗಿ ಡಿಜಿಟಲೀಕರಣ ಮಾಡಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ, ಕೆಳದಿ ವಸ್ತುಸಂಗ್ರಹಾಲಯದಲ್ಲಿನ ತಾಳೆಗರಿಗಳ ಡಿಜಿಟಲೀಕರಣ ಮಾಡಬೇಕಿದೆ. ದಿನಕ್ಕೆ 15,000 ಪ್ರತಿಗಳನ್ನು ಸ್ಕ್ಯಾನ್ ಮಾಡಲಾಗುತ್ತಿದ್ದು, ತಿಂಗಳಿಗೆ ಕನಿಷ್ಠ 4.50 ಲಕ್ಷ ಖರ್ಚಾಗುತ್ತಿದೆ' ಎಂದು ಕೇಂದ್ರದ ಅಶೋಕ ದೊಮ್ಮಲೂರು ಹೇಳಿದರು.

ನನ್ನದೇ ಖಾಸಗಿ ಕಂಪನಿ ಇರುವುದರಿಂದ, ಅದರಿಂದ ಬರುವ ಹಣದಲ್ಲಿ 1.50 ಲಕ್ಷವನ್ನು ಈ ಕಾರ್ಯಕ್ಕೆ ವಿನಿಯೋಗಿಸುತ್ತಿರುವೆ. 6 ತಿಂಗಳಿನಿಂದ ದೆಹಲಿಯ ಇಂದು ನೆಟ್‌ವರ್ಕ್ ಸಂಸ್ಥೆಯಿಂದ ಭಾಗಶಃ ನೆರವು ಸಿಗುತ್ತಿದೆ. ಸರ್ಕಾರದಿಂದಾಗಲೀ, ಮಠಗಳಿಂದಾಗಲೀ ನೆರವು ಸಿಕ್ಕಿಲ್ಲ ಎಂದರು. ಇಲ್ಲಿಯವರೆಗೆ ಆಗಿರುವುದು ವಚನಗಳ ಸಂಗ್ರಹವಷ್ಟೇ,

**ಸದ್ಯ ದೊರೆತ ಹಸ್ತಪ್ರತಿಗಳು 200–300 ವರ್ಷಗಳಷ್ಟು ಹಳೆಯವು. ಮೂಲ ಹಸ್ತಪ್ರತಿಗಳ ಹುಡುಕಾಟದಲ್ಲಿದ್ದೇವೆ. ಅದಕ್ಕಾಗಿ ಜೈನರ ಬಸದಿಗಳಲ್ಲಿ ಸಂಶೋಧನೆ ನಡೆಯುತ್ತಿದೆ.**

**– ಅಶೋಕ ದೊಮ್ಮಲೂರು, ಮುಖ್ಯಸ್ಥ ಇ–ಸಾಹಿತ್ಯ ದಾಖಲೀಕರಣ ಸಂಶೋಧನಾ ಕೇಂದ್ರ**

ಪರಿಷ್ಕರಣೆ ಅಲ್ಲವೆಂದು ಫ.ಗು.ಹಳಕಟ್ಟಿ, ಎಂ.ಎಂ.ಕಲಬುರ್ಗಿ ಅವರೂ ಹೇಳಿದ್ದಾರೆ. ವಚನ ಸಾಹಿತ್ಯ ಅಧಿಕೃತವಾಗಬೇಕಾದರೆ, ತಾಳೆಗರಿಗಳಲ್ಲಿನ ಹಸ್ತಪ್ರತಿಗಳ ಡಿಜಿಟಲೀಕರಣ, ಸಮಗ್ರ ಅಧ್ಯಯನ ಅವಶ್ಯವಿದೆ. ಇದಕ್ಕಾಗಿ ನಾನು, ತಂಡದೊಂದಿಗೆ ಶ್ರಮಿಸುತ್ತಿರುವೆ. ಸೀಮಿತ ಆರ್ಥಿಕ ಸಂಪನ್ಮೂಲದಲ್ಲೇ 2013ರಿಂದ ಡಿಜಿಟಲೀಕರಣ ಪ್ರಕ್ರಿಯೆ ನಿರಂತರವಾಗಿ ಜರುಗುತ್ತಿದೆ. ಹೆಚ್ಚಿನ ನೆರವು ಸಿಕ್ಕರೆ ವಚನ ಸಾಹಿತ್ಯಕ್ಕೆ ಹೊಸ ಆಯಾಮ ಸಿಗಬಹುದು ಎಂದರು.

# ವಿದೇಶಕ್ಕೆ ರಫ್ತಾಗುತ್ತಿರುವ ಮಾವಿಗೆ ಹೆಚ್ಚಿದ ಬೇಡಿಕೆ

## ಕೊಪ್ಪಳದ ಕೇಸರ್ ಮಾವಿಗೆ ಜಿಐ ಟ್ಯಾಗ್ ನೀಡಲು ತೋಟಗಾರಿಕೆ ಇಲಾಖೆ ಪ್ರಯತ್ನ, ತೋಟಗಾರಿಕೆ ಇಲಾಖೆಯಿಂದ ಪ್ರಸ್ತಾವನೆ

• **ಉದಯವಾಹಿನಿ, ಕೊಪ್ಪಳ**

ಹಣ್ಣುಗಳ ರಾಜ ಎಂದೇ ಖ್ಯಾತಿ ಪಡೆದ ಮಾವಿಗೆ ಜಾಗತಿಕ ಮಾನ್ಯತೆ ದೊರಕಿಸಲು ತೋಟಗಾರಿಕೆ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಜಿಲ್ಲೆ ಅಲ್ಲದೇ ದೇಶ, ವಿದೇಶಗಳಲ್ಲಿಯೂ ಜಿಲ್ಲೆಯ ಕೇಸರ್ ತಳಿಯ ಮಾವಿಗೆ ವ್ಯಾಪಕ ಬೇಡಿಕೆಯಿದೆ. 'ಕೊಪ್ಪಳ ಕೇಸರ್' ಎಂದೇ ಪ್ರಸಿದ್ಧಿ ಪಡೆದಿರುವುದರಿಂದ ಜಿಐ ಟ್ಯಾಗ್ (ಭೌಗೋಳಿಕ ಸೂಚ್ಯಂಕ) ಪಡೆಯುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆ ಪ್ರಯತ್ನ ಆರಂಭಿಸಿದೆ. ಜಿಲ್ಲೆಯಲ್ಲಿಪ್ರತಿ ವರ್ಷಕ್ಕೆ ತೋಟಗಾರಿಕೆ ಬೆಳೆ ಬೆಳೆಯುವ ಪ್ರದೇಶ ದ್ವಿಗುಣವಾಗುತ್ತಿದೆ. ಅದರಲ್ಲಿ ಮಾವಿಗೆ ಸಿಂಹಪಾಲು ದೊರಕಿದೆ. ಈ ವರೆಗೆ ಜಿಲ್ಲೆಯ 7 ತಾಲ್ಲೂಕು ವ್ಯಾಪ್ತಿಯಲ್ಲಿ 6 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿರೈತರು ಮಾವು ಬೆಳೆಯುತ್ತಿದ್ದಾರೆ.ಕಳೆದೊಂದು ದಶಕದ ಹಿಂದೆ 1 ಸಾವಿರ ಹೆಕ್ಟೇರ್‌ವಿದ್ದ ಮಾವಿನ ಪ್ರದೇಶ ಇದೀಗ ಐದು ಪಟ್ಟು ಹೆಚ್ಚಳವಾಗಿದೆ.

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಪೂರಕ ದಾಖಲೆ ಕೊಡುವ ಕೆಲಸವನ್ನು ತೋಟಗಾರಿಕೆ ಇಲಾಖೆ ಮಾಡುತ್ತಿದೆ. ಕೊಪ್ಪಳದ ಕೇಸರ್ ಮಾವಿಗೆ

**ಐದು ಪಟ್ಟು ಹೆಚ್ಚಳ**



ಜಿಐ ಟ್ಯಾಗ್ ಸಿಕ್ಕರೆ ಮಾರುಕಟ್ಟೆ ಪ್ರದೇಶ ಮತ್ತಷ್ಟು ದ್ವಿಗುಣಗೊಳ್ಳಲಿದೆ. ಇದರಿಂದ ಮಾವು ಬೆಳೆಗಾರರಿಗೆ ಇನ್ನಷ್ಟು ಅನುಕೂಲವಾಗಲಿದೆ.

**ಜಿಲ್ಲೆಯಲ್ಲಿ ಬೆಳೆಯುವ ಕೇಸರ್ ತಳಿಯ ಮಾವಿಗೆ ಜಿಐ ಟ್ಯಾಗ್ ಕೊಡಿಸಲು ಪ್ರಯತ್ನ ಮಾಡಲಾಗುತ್ತಿದೆ. ಈ ಕುರಿತು ತೋಟಗಾರಿಕೆ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಶೀಘ್ರದಲ್ಲೇ ಜಿಲ್ಲೆಗೆ ಮತ್ತೊಂದು ಹಿರಿಮೆ ದೊರಕಿಸುವ ನಿಟ್ಟಿನಲ್ಲಿಶ್ರಮಿಸಲಾಗುತ್ತಿದೆ.**

**– ಕೃಷ್ಣ ಉಕ್ಕುಂದ, ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ, ಕೊಪ್ಪಳ**

### ಜಿಐ ಟ್ಯಾಗ್ ಎಂದರೇನು?

**ಜಿಯೋಗ್ರಾಫಿಕಲ್ ಇಂಡಿಕೇಶನ್ ಟ್ಯಾಗ್ . ಅಂದರೆ, ಭೌಗೋಳಿಕ ಸೂಚನಾ ಟ್ಯಾಗ್ ಎಂದರ್ಥ. ಒಂದು ಉತ್ಪನ್ನದ ಭೌಗೋಳಿಕ ವಿಶೇಷತೆ ಮಾನ್ಯ ಮಾಡಲು ಜಿಐ ಟ್ಯಾಗ್ ನೀಡಲಾಗುತ್ತದೆ. ಒಂದು ಉತ್ಪನ್ನದ ಮೂಲ ಯಾವ ಪ್ರದೇಶದ್ದು ಎಂಬುದನ್ನು ಅದು ತಿಳಿಸುತ್ತದೆ. ಉದಾಹರಣೆಗೆ ಕಲಬುರಗಿಯ ತೊಗರಿ, ಶಿರಸಿಯ ಅಡಿಕೆಗೆ ಜಿಐ ಟ್ಯಾಗ್ ಸಿಕ್ಕಿದೆ. ಚನ್ನಪಟ್ಟಣದ ಬೊಂಬೆ, ಇಳಕಲ್ ಸೀರೆ, ಮೈಸೂರು ರೇಷ್ಮೆ, ಉಡುಪಿ ಮಲ್ಲಿಗೆ ಸೇರಿ ನಾನಾ ಉತ್ಪನ್ನಗಳಿಗೆ ಜಿಐ ಟ್ಯಾಗ್ ನೀಡಲಾಗಿದೆ. ಒಟ್ಟಾರೆ, ಆ ವಸ್ತುವಿನ ಹೆಸರು ಕೇಳಿದರೆ ಅದರ ಭೌಗೋಳಿಕ ಪ್ರದೇಶ ಗುರುತಿಸುವಂತಿರಬೇಕು.**

**ಕೊಪ್ಪಳ ಕೇಸರ್‌ನ ವೈಶಿಷ್ಟ್ಯ:** ಇಲ್ಲಿನ ಒಣ ಹವಾಮಾನ ಮತ್ತು 45 ಡಿಗ್ರಿವರೆಗಿನ ತಾಪಮಾನ ಹಣ್ಣುಗಳಿಗೆ ವಿಶಿಷ್ಟ ಸಿಹಿ, ಪರಿಮಳ ಮತ್ತು ಗಾಢ ಬಣ್ಣ ನೀಡುತ್ತದೆ. ಗುಜರಾತ್‌ನ ಗೀರ್ ಕೇಸರ್‌ಗಿಂತ ಎರಡು ತಿಂಗಳು ಮುಂಚಿತವಾಗಿ (ಏಪ್ರಿಲ್ ಮಧ್ಯದಲ್ಲಿ) ಮಾರುಕಟ್ಟೆಗೆ ಬರುವ ಈ ಮಾವು, ಪ್ರತಿ ಕೆಜಿಗೆ 150–250 ರೂ. ವರೆಗೆ ಮಾರಾಟವಾಗುತ್ತಿದ್ದು, ಈಗಾಗಲೇ ಅಂತಾರಾಷ್ಟ್ರೀಯ ಮನ್ನಣೆ ಪಡೆದಿದೆ. ಕೊಪ್ಪಳ ಕೇಸರ್ ಮಾವು ದುಬೈ, ಬಹ್ರೇನ್, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಯುರೋಪಿಯನ್ ರಾಷ್ಟ್ರಗಳಿಗೆ ಈಗಾಗಲೇ ರಫ್ತಾಗುತ್ತಿದೆ. ಪ್ರತಿ ವರ್ಷ ಏಪ್ರಿಲ್–ಮೇನಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿರಾಶಾದಾಯಕ ಮನೋಭಾವವು ಕೇವಲ ನಿಮ್ಮ ಅವಕಾಶಗಳನ್ನು ಸೀಮಿತಗೊಳಿಸುವುದಷ್ಟೇ ಅಲ್ಲದೇ ದೇಹದ ಸಾಮರಸ್ಯವನ್ನೂ ಭಂಗಪಡಿಸುವುದರಿಂದ ಅವುಗಳನ್ನು ತಡೆಯಬೇಕು. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ಮಕ್ಕಳ ಜೊತೆಗಿನ ನಿಮ್ಮ ಕಠಿಣ ವರ್ತನೆ ನಿಮಗೆ ಸಿಟ್ಟು ಬರಿಸಬಹುದು.

**ವೃಷಭ** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದು ಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ.

**ಮಿಥುನ** ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ನಿಮ್ಮ ಹಣವನ್ನು ಉಳಿಸಲು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ.

**ಕರ್ಕಾಟಕ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ಸಿಂಹ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು, ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಸ್ನೇಹಿತರು, ಸಂಬಂಧಿಗಳೊಡನೆ ಆನಂದಿಸಿ. ನಿಮ್ಮ ಕಠಿಣ ಪದಗಳು ಶಾಂತಿ ಹಾಳು ಮಾಡಿ ನಿಮ್ಮ ಪ್ರಿಯತಮೆಯ ಜೊತೆಗಿನ ಮಧುರ ಸಂಬಂಧವನ್ನು ಹಾಳು ಮಾಡಬಹುದಾದ್ದರಿಂದ ನಿಮ್ಮ ಮಾತುಗಳನ್ನು ನಿಯಂತ್ರಿಸಲು ಪ್ರಯತ್ನಿಸಿ.

**ಕನ್ಯಾ** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ, ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ., ಆಗೇ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು ಕುಟುಂಬದ ಸದಸ್ಯರು ಬೆಂಬಲ ನೀಡಿದರೂ ತುಂಬ ಬೇಡಿಕೆಯಿಡುತ್ತಾರೆ.

**ತುಲಾ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು. ಗುಣಪಡಿಸಲಾರದ್ದನ್ನು ತಡೆದುಕೊಳ್ಳಬೇಕು ಎಂದು ನೆನಪಿಡಿ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ,

**ವೃಶ್ಚಿಕ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು, ಆದ್ದರಿಂದ ಇಂದು ನೀವು ನಿಮ್ಮ ವಸ್ತುವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು. ಭೇಟಿ ನೀಡುವ ಸಂಬಂಧಿಗಳು ನೀವು ಅಂದುಕೊಂಡಿದ್ದಕ್ಕಿಂತ ಚೆನ್ನಾಗಿರಬಹುದು.

**ಧನಸ್ಸು** ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ, ಆರಾಮತರುತ್ತದೆ. ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ ಸ್ನೇಹಿತರು ವೈಯಕ್ತಿಕ ಜೀವನದ ಬಗ್ಗೆ ನಿಮಗೆ ಉತ್ತಮ ಸಲಹೆ ನೀಡುತ್ತಾರೆ. ಪ್ರೇಮ ಜೀವನವಾಗಿ ಮದುವೆಯ ಪ್ರಸ್ತಾಪ ಜೀವನಪೂರ್ಣದ ಬಂಧದಲ್ಲಿ ಬದಲಾಗಬಹುದು.

**ಮಕರ** ಆರೋಗ್ಯದ ಆರೈಕೆ ಮಾಡಿಕೊಳ್ಳಿ, ಎಲ್ಲವನ್ನೂ ಹೊಂದಿಸಿ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ.


**ಕುಂಭ** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ನೀವು ಮಕ್ಕಳು ಅಥವಾ ನಿಮಗಿಂತ ಕಡಿಮೆ ಅನುಭವಿಯಾಗಿರುವವರ ಜೊತೆ ತಾಳ್ಮೆಯಿಂದಿರಬೇಕು.

**ಮೀನ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ, ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ.

### ವಚನಸಾಹಿತ್ಯದ ಸಂರಕ್ಷಕ ಕಾಯಕಯೋಗಿ ಮಡಿವಾಳ ಮಾಚಿದೇವರು: ಪ್ರಾಧ್ಯಾಪಕ ಡಾ.ಎನ್.ಎಸ್.ಮಹಂತೇಶ

# ಮಡಿವಾಳ ಎಂದರೆ ಕೇವಲ ಬಟ್ಟೆ ತೊಳೆಯುವವರಲ್ಲ

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ಹನ್ನೆರಡನೆ ಶತಮಾನದ ಸಾಮಾಜಿಕ ಕ್ರಾಂತಿಯ ಇತಿಹಾಸದಲ್ಲಿ ಮಡಿವಾಳ ಮಾಚಿದೇವರ ಹೆಸರು ಅಚ್ಚಳಿಯದಂತಿದೆ. ಅವರು ಕೇವಲ ಶರಣರಾಗಿರದೆ, ಶರಣ ಸಂಕುಲ, ವಚನ ಸಾಹಿತ್ಯದ ರಕ್ಷಾಕವಚವಾಗಿ ಕಾರ್ಯನಿರ್ವಹಿಸಿದ್ದರು ಎಂದು ಇತಿಹಾಸ ಸಂಶೋಧಕರು ಹಾಗೂ ಪ್ರಾಧ್ಯಾಪಕ ಡಾ.ಎನ್.ಎಸ್.ಮಹಂತೇಶ ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ, ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ವತಿಯಿಂದ ಹಮ್ಮಿಕೊಂಡಿದ್ದ ಮಡಿವಾಳ ಮಾಚಿದೇವರ ಜಯಂತಿ ಆಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಶರಣ ಚಳುವಳಿಯ ಇತಿಹಾಸದಲ್ಲಿ ವೀರ, ದೇವ ಎಂಬ ಬಿರುದುಗಳಿಂದ ಅಲಂಕೃತರಾದ ಏಕೈಕ ಶರಣ ಮಡಿವಾಳ ಮಾಚಿದೇವರು. ತಮ್ಮ ಅಪ್ರತಿಮ ಕಾಯಕ ನಿಷ್ಠೆ, ವೈಚಾರಿಕ ಧೈರ್ಯ ಇಂದಿಗೂ ಆದರ್ಶಪ್ರಾಯ. ಕೇವಲ ಬಟ್ಟೆ ಒಗೆಯುವ ಕಾಯಕಕ್ಕೆ ಸೀಮಿತವಾಗದ ಮಾಚಿದೇವರು, ಸಮಾಜದ ಹೊಲಸನ್ನು ತೊಳೆಯುವ ಕ್ರಾಂತಿಕಾರಿಯಾಗಿ ಹೊರಹೊಮ್ಮಿದವರು ಎಂದು ತಿಳಿಸಿದರು.

ಮಾಚಿದೇವರ ಬದುಕಿನಲ್ಲಿ ಬಸವಣ್ಣನವರಿಗೆ ಅತ್ಯುನ್ನತ ಸ್ಥಾನವಿತ್ತು. ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ ಎಂಬ ಅವರ ವಚನವು ಬಸವಣ್ಣನವರ ಮೇಲಿದ್ದ ಅವರ ಅಪಾರ ಗೌರವ ಮತ್ತು ಭಕ್ತಿಯ ಸಂಕೇತವಾಗಿದೆ ಎಂದು ತಿಳಿಸಿದ ಅವರು, ಮಾಚಿದೇವರು ತಮ್ಮ ಸಾಹಸ, ಭಕ್ತಿ ಮತ್ತು ವೈಚಾರಿಕತೆಯ ಮೂಲಕ ವಚನ ಚಳುವಳಿಯ ಇತಿಹಾಸದಲ್ಲಿ ಮಹಾನ್ ಚೇತನವಾಗಿ ಅಜರಾಮರವಾಗಿದ್ದಾರೆ ಎಂದರು.

**ಬಟ್ಟೆ ಹಾಸುವ ನಡೆಮುಡಿ ಸೇವೆ**

ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್.ಶಿವಣ್ಣ ಗಂಜಿಗಟ್ಟೆ ಮಾತನಾಡಿ, ಸಮಾಜದ ಅಶುದ್ಧತೆಯನ್ನು ತೊಳೆದು ಪರಿಶುದ್ಧತೆ ನೀಡುವ ಹಾಗೂ ಪ್ರತಿಯೊಬ್ಬ ವ್ಯಕ್ತಿಯೂ ಸುಂದರವಾಗಿ ಕಾಣಲು ಮಡಿವಾಳ ಸಮುದಾಯದ ಸೇವೆ ಅರ್ಹವಾದುದ್ದು. ಇಂದಿಗೂ ದೇವಸ್ಥಾನಗಳ ಉತ್ಸವಗಳಲ್ಲಿ ದೇವರ ದಾರಿಗೆ ಬಟ್ಟೆ ಹಾಸುವ ನಡೆಮುಡಿ ಸೇವೆಯನ್ನು ಸಮುದಾಯವು ಅತ್ಯಂತ ಶ್ರದ್ಧೆಯಿಂದ ಪಾಲಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು. ಸಮುದಾಯವು ಈಗ ಕೇವಲ ಸಾಂಪ್ರದಾಯಿಕ ವೃತ್ತಿಗೆ ಸೀಮಿತವಾಗದೇ ಆಧುನಿಕತೆಯತ್ತ ಮುಖ ಮಾಡಿದ್ದು, ರಾಜ್ಯ ಸರ್ಕಾರದ ಮಡಿವಾಳ ಅಭಿವೃದ್ಧಿ ನಿಗಮದ ಸೌಲಭ್ಯಗಳನ್ನು ಬಳಸಿಕೊಂಡು ಉದ್ಯಮಶೀಲ ಆಗುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರದ ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ತಹಶೀಲ್ದಾರ್ ಬಿ.ಎಂ.ಗೋವಿಂದರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ, ಜಿಲ್ಲಾ ಮಡಿವಾಳರ ಸಂಘ ಅಧ್ಯಕ್ಷ ಬಿ.ರಾಮಪ್ಪ, ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಗೌರವಾಧ್ಯಕ್ಷ ಡಾ.ಬಸವರಾಜು, ಮಡಿವಾಳ ಮಾಚಿದೇವರ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಟಿ.ರುದ್ರೇಶ್, ರಾಜ್ಯ ಮಡಿವಾಳರ ಸಂಘದ ಗೌರವಾಧ್ಯಕ್ಷೆ ಬಿ.ರಂಗಮ್ಮ, ಮುಖಂಡರಾದ ಪರಶುರಾಮ್, ರಂಗಸ್ವಾಮಿ, ಪ್ರಕಾಶ್, ಮಂಜುನಾಥ್, ಮಲ್ಲಿಕಾರ್ಜುನ, ಲಕ್ಷ್ಮಣ ಸೇರಿದಂತೆ ಮತ್ತಿತರರು ಇದ್ದರು.

> ಮಾಚಿದೇವರು ಕೇವಲ ನಂಬಿಕೆಯ ಆಧಾರದ ಮೇಲೆ ಬದುಕಿದವರಲ್ಲ, ಅವರು ವೇದ, ಶಾಸ್ತ್ರ, ಪುರಾಣ ಮತ್ತು ಆಗಮಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದವರು. ಇವು ಸಮಾಜಕ್ಕೆ ಎಷ್ಟು ಪೂರಕವಾಗಿವೆ ಎಂಬುದನ್ನು ತಾರ್ಕಿಕವಾಗಿ ವಿವರಿಸುವ ಮೂಲಕ ಅಂದಿನ ಸಮಾಜದಲ್ಲಿ ಹೊಸ ಅರಿವು ಮೂಡಿಸಿದ್ದರು ಎಂದು ತಿಳಿಸಿದ ಅವರು, ಮಡಿವಾಳ ಎಂದರೆ ಕೇವಲ ಬಟ್ಟೆ ತೊಳೆಯುವವರಲ್ಲ, ಬದಲಾಗಿ ಜನರ ಮನಸ್ಸಿನ ಅಜ್ಞಾನವೆಂಬ ಮೈಲಿಗೆಯನ್ನು ತೊಳೆಯುವ ಶಕ್ತಿ ಎಂದು ಸ್ವತಃ ಬಸವಣ್ಣನವರೇ ಮಾಚಿದೇವರನ್ನು ಕೊಂಡಾಡಿದ್ದಾರೆ. ಅವರ ಕಾಯಕ ನಿಷ್ಠೆ ಮತ್ತು ನಿರ್ಭೀತ ವ್ಯಕ್ತಿತ್ವವು ಎಲ್ಲರಿಗೂ ಮಾದರಿ.
>
> – ಡಾ.ಎನ್.ಎಸ್.ಮಹಂತೇಶ
> ಇತಿಹಾಸ ಸಂಶೋಧಕರು, ಪ್ರಾಧ್ಯಾಪಕ

## ವಿಕಸಿತ ಭಾರತ ನಿರ್ಮಾಣಕ್ಕೆ ಪೂರಕ: ಮಹಾಂತೇಶ ಕವಟಗಿಮಠ

• ಉದಯವಾಹಿನಿ, ಬೆಳಗಾವಿ



ವಿಕಸಿತ ಭಾರತ ನಿರ್ಮಾಣದ ಗುರಿಗೆ ಪೂರಕವಾದ ಬಜೆಟ್ ಇದಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು. ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಈ ಬಜೆಟ್ ಮೂಲಕ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದೆ. ಶಿಕ್ಷಣವನ್ನು ಔದ್ಯೋಗಿಕರಣದತ್ತ ಕೊಂಡೊಯ್ದಿದೆ. ಮೂಲಸೌಕರ್ಯ ಸುಧಾರಣೆ ಜತೆಗೆ, ಸಂಪರ್ಕ ಸಂವಹನಕ್ಕೆ ಒತ್ತು ಕೊಟ್ಟಿದೆ ಎಂದರು. ಬಿಜೆಪಿ ವಕ್ತಾರ ಎಂ.ಬಿ.ಝಿರಲಿ, 2047ರ ಹೊತ್ತಿಗೆ ವಿಕಸಿತ ಭಾರತ ನಿರ್ಮಿಸಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಕನಸಿಗೆ ಒತ್ತು ಕೊಡುವ ಬಜೆಟ್ ಇದಾಗಿದೆ.

ಯುವಕರಿಗೆ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಆದ್ಯತೆ ಕೊಡಲಾಗಿದೆ. ಶಿಕ್ಷಣ. ಆರೋಗ್ಯ ಮೂಲ ಸೌಕರ್ಯ ಅಭಿವೃದ್ಧಿ ರಂಗಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ಕೊಡಲಾಗಿದೆ. ಇಡೀ ದೇಶದ ಜನರು ಮೆಚ್ಚುವಂಥ ಪರಿಪೂರ್ಣ ಬಜೆಟ್ ಇದಾಗಿದೆ ಎಂದು ಶ್ಲಾಘಿಸಿದರು.

**ಚಿನ್ನಾಭರಣ ವ್ಯಾಪಾರಕ್ಕೆ ಪೂರಕ:** ಈ ಸಾಲಿನ ಬಜೆಟ್ ಚಿನ್ನಾಭರಣ, ರತ್ನದ ಆಭರಣಗಳ ಕ್ಷೇತ್ರಕ್ಕೆ ಉತ್ತೇಜಕವಾಗಿದೆ. ವಿಶೇಷವಾಗಿ ಟಯರ್-2, ಟಯರ್-3 ನಗರಗಳಲ್ಲಿ ಕೌಶಲ ಅಭಿವೃದ್ಧಿಗೆ ಒತ್ತು ನೀಡಿರುವುದು ಹೆಚ್ಚು ಫಲಪ್ರದವಾಗಲಿದೆ.

ಚಿನ್ನ, ವಜ್ರದ ಉದ್ಯಮದಲ್ಲಿ ಕೈಗೊಂಡ ಕ್ರಮಗಳಿಂದ ದೇಶದ ಆರ್ಥಿಕತೆಗೆ ನೇರವಾದ ಕೊಡುಗೆ ನೀಡಿದಂತಾಗುತ್ತದೆ. ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ 7ರಷ್ಟು ಭಾಗವನ್ನು ಚಿನ್ನ, ರತ್ನದ ಉದ್ಯಮವೇ ನೀಡುತ್ತಿದೆ. ಸದ್ಯ ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರಗಳಿಂದ ಇದು ಇನ್ನಷ್ಟು ಹೆಚ್ಚಲಿದೆ ಎಂದು ಚಂದೂಕಾಕಾ ಸರಾಫ್ ಜ್ಯುವೆಲ್ಸ್‌ನ ನಿರ್ದೇಶಕ ಸಿದ್ದಾರ್ಥ ಶಾ ಪ್ರತಿಕ್ರಿಯೆ ನೀಡಿದ್ದಾರೆ.

## ಸಂಭ್ರಮದ ಶ್ರೀ ದುರ್ಗಾದೇವಿ ರಥೋತ್ಸವ


ಉದಯವಾಹಿನಿ ಚಿತ್ರ

• ಉದಯವಾಹಿನಿ ಗದಗ

ಸೊರಟೂರು ಗ್ರಾಮದ ಶ್ರೀ ದುರ್ಗಾದೇವಿಯ ರಥೋತ್ಸವ ಸಾವಿರಾರು ಭಕ್ತರ ಸಮೂಹದಲ್ಲಿ ವೈಭವದಿಂದ ಸಕಲ ವಾದ್ಯಗಳೊಂದಿಗೆ ರಥೋತ್ಸವ ಜರುಗಿತು. ನೂರಾರು ಭಕ್ತ ಭಕ್ತಸಮೂಹ ವನ್ನೊಳಗೊಂಡು ಉದೋ ಉದೋ ಎಂಬ ಜಯಘೋಷದೊಂದಿಗೆ ಭಕ್ತಿ ಭಾವದಿಂದ ಭಕ್ತರು ಕೂಡಿದ್ದರು.

ಭಕ್ತರು ಬೇಡಿದ ವರವ ನೀಡುವ ಅಮ್ಮ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ ಎಂಬ ನಂಬಿಕೆ ಇದೆ. 2 ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ಮುಂಜಾನೆ ಆರು ಗಂಟೆಗೆ ಅಗ್ನಿ ಹಾಯುವ ಕಾರ್ಯಕ್ರಮದಿಂದ ಪ್ರಾರಂಭ ಆಗುವುದು. ಡೊಳ್ಳು ವಾದ್ಯಗಳೊಂದಿಗೆ ಜಯಘೋಷದೊಂದಿಗೆ ಸಂಜೆ 6 ಗಂಟೆಗೆ ರಥೋತ್ಸವ ನೆರವೇರಿತು.

## ಕೇಂದ್ರ ಬಜೆಟ್‌ನಲ್ಲಿ ಧಾರವಾಡ ಜಿಲ್ಲೆಗೆ ನಿರಾಶೆ

• ಉದಯವಾಹಿನಿ, ಹುಬ್ಬಳ್ಳಿ



ಉದಯವಾಹಿನಿ ಚಿತ್ರ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ ಮಂಡಿಸಿದ 2026–27ನೇ ಸಾಲಿನ ಬಜೆಟ್ ಹುಬ್ಬಳ್ಳಿ–ಧಾರವಾಡ ಸೇರಿ ಒಟ್ಟಾರೆ ಧಾರವಾಡ ಜಿಲ್ಲೆಗೆ ನಿರಾಶಾದಾಯಕವಾಗಿದೆ.

ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಹೊಸ ಯೋಜನೆಗಳನ್ನು ಘೋಷಣೆ ಮಾಡಿಲ್ಲ. ಇದು ಶ್ರೀಮಂತರ ಪರ, ಕೇವಲ ಘೋಷಣೆಗಳಿಗಷ್ಟೇ ಸೀಮಿತವಾದ ಬಜೆಟ್ ಎಂಬ ಟೀಕೆಗಳು ವ್ಯಕ್ತವಾಗಿವೆ. ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗೆ (ಡಿಮಾನ್ಸ್) ಅನುದಾನ ಒದಗಿಸಿ, ಬೆಂಗಳೂರಿನ ನಿಮ್ಹಾನ್ಸ್ ಮಾದರಿಯಲ್ಲಿ ಅಭಿವೃದ್ಧಿ, ಜಲ ಸಂಪನ್ಮೂಲ ವಿಶ್ವವಿದ್ಯಾಲಯ ಘೋಷಿಸಬೇಕು ಎಂಬ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ. ಬಿಜೆಪಿ ಮುಖಂಡರು ಬಜೆಟ್ ಅನ್ನು ಸ್ವಾಗತಿಸಿದ್ದು, ಆತ್ಮ ನಿರ್ಭರ, ವಿಕಸಿತ ಭಾರತ ನಿರ್ಮಾಣಕ್ಕೆ ಪೂರಕವಾದ ಬಜೆಟ್ ಎಂದು ಶ್ಲಾಘಿಸಿದ್ದಾರೆ. ಗ್ರಾಮೀಣ ಭಾಗದ ಜೀವನಶೈಲಿ ಉತ್ತಮ ಪಡಿಸುವ ನಿಟ್ಟಿನಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್, ಬೆಳೆ ಆಧಾರಿತ ಯೋಜನೆಯನ್ನು ಉತ್ತೇಜಿಸಿ ರೈತರ ಆದಾಯ ವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂಬ ಪ್ರಸ್ತಾವಕ್ಕೆ ರೈತರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಇನ್ನಷ್ಟು ಬಲಪಡಿಸಲು ಮತ್ತು ಜಾಗತಿಕ ಸ್ಪರ್ಧೆಗೆ ಅವುಗಳನ್ನು ಅಣಿಗೊಳಿಸಲು 10 ಸಾವಿರ ಕೋಟಿ ನೆರವು ಘೋಷಿಸಿರುವುದನ್ನು ಕೈಗಾರಿಕೋದ್ಯಮಿಗಳು ಸ್ವಾಗತಿಸಿದ್ದಾರೆ.

## ಥಲಬಿಡದೆ ಆರೋಪಿಗಳನ್ನು ಬಂಧಿಸಿದ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್

• ಉದಯವಾಹಿನಿ, ದಾವಣಗೆರೆ

ಚಿಗಟೇರಿ ಜಿಲ್ಲಾಸ್ಪತ್ರೆಯ ಆವರಣದಲ್ಲಿ ನಡೆದಿದ್ದ ಗಲಾಟೆ ಪ್ರಕರಣದಲ್ಲಿ ಆರೋಪಿಗಳ ಬಂಧನಕ್ಕೆ ಹೋಗಿದ್ದಾಗ ಪೊಲೀರಿಗೆ ಸ್ಥಳೀಯ ಕಾಂಗ್ರೆಸ್ ಮುಖಂಡರು ವಾಗ್ವಾದ ನಡೆಸಿದ್ದಾರೆ. ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಜೊತೆ ಮಾತಿನ ಚಕಮಕಿ ವಿಡಿಯೋಗಳು ವೈರಲ್ ಆಗಿವೆ. ಚಲಬಿಡದೆ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆಗಿಳಿದ ಸಿಪಿಐ ಗಾಯಿತ್ರಿ ಅವರನ್ನು ತಡೆದು ದೃಶ್ಯಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ಅವರು ಗರಂ ಆದ್ದು ಯಾರೇ ಆದರೂ ಮುಲಾಜಿಲ್ಲದೆ ಆರೋಪಗಳನ್ನು ಒದ್ದು ಒಳಗೆ ಹಾಕಿ ಎಂದು ಹೇಳಿದ್ದಾರೆ. ಸ್ಥಳಿಯ ಕಾಂಗ್ರೆಸ್ ಮುಖಂಡ ಅಯೂಬ್ ಪೈಲ್ವಾನ್ ಅವರ ಮಕ್ಕಳಾದ ಹಸೇನ್, ಹುಸೇನ್, ಅವರ ಸ್ನೇಹಿತರ ನಡುವೆ ಗಲಾಟೆ ನಡೆದಿತ್ತು. ಈ ವೇಳೆ ಗಲಾಟೆ ಬಿಡಿಸಲು ಸಿಪಿಐ ಗಾಯಿತ್ರಿ, ಕಾನ್ಸ್‌ಟೇಬಲ್ ಹರೀಶ್ ಹಾಗೂ ಕೆಂಚಪ್ಪ ಅವರು ತೆರಳಿದ್ದರು. ಈ ವೇಳೆ ಪೊಲೀಸ್ ಸಿಬ್ಬಂದಿ ಮೇಲೆ ಅಯೂಬ್ ಅವರ ಮಕ್ಕಳು ಹಾಗೂ ಸ್ನೇಹಿತರು ಹಲ್ಲೆ ನಡೆಸಿದ್ದರು. ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಕ್ಕೆ ಸಿಪಿಐ ಗಾಯತ್ರಿಯವರು ಕೆರಳಿ ಕೆಂಡವಾಗಿದ್ದರು. ಆರೋಪಿಗಳ ಬಂಧನ ಆಗುವವರೆಗೂ ಇಲ್ಲಿಂದ ತೆರಳುವುದಿಲ್ಲ ಎಂದು ಪಟ್ಟು ಹಿಡಿದ್ದಾಗ ಪೊಲೀಸರು ಮೇಲೆ ಆರೋಪಿಸಾಲಗಿದೆ. ಇದಕ್ಕೆ ಸಿಪಿಐ ಗಾಯಿತ್ರಿ, ಏನು ಬೇಕಾದ್ರೂ ಆರೋಪ ಮಾಡಿ, ಬೇಕಾದ್ರೆ ನೀನು ದೂರು ಕೊಡು ಎಂದು ಪ್ರಕರಣದಲ್ಲಿ ಪೈಲ್ವಾನ್ ಪುತ್ರ ಹಸೇನ್ ಸೇರಿ ನಾಲ್ವರನ್ನು ಬಂಧಿಸಲಾಗಿದೆ. ಇನ್ನೊಬ್ಬ ಪುತ್ರ ಹುಸೇನ್ ತಲೆಮರೆಸಿಕೊಂಡಿದ್ದು ಆತನಿಗಾಗಿ ತೀವ್ರ ಹುಡುಕಾಟ ನಡೆಸಿದ್ದಾರೆ. ಘಟನೆಗೆ ಕುರಿತು ತನಿಖೆ ನಡೆಯುತ್ತಿದೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

## ಕುಮಾರೇಶ್ವರ ವಿರಕ್ತಮಠ ಆಸ್ತಿ ಬಗ್ಗೆ ಪೊಲೀಸ್ ತನಿಖೆ: ಬಿ.ಎಸ್. ದಳವಾಯಿ

• ಉದಯವಾಹಿನಿ, ಹಾನಗಲ್



ಇಲ್ಲಿಯ ಕುಮಾರೇಶ್ವರ ವಿರಕ್ತಮಠದ ಆಸ್ತಿಗಳನ್ನು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ದಾಖಲಿಸಿದ್ದ ಖಾಸಗಿ ಮೊಕದ್ದಮೆ ವಿಚಾರಣೆ ನಡೆಸಿದ್ದ ನ್ಯಾಯಾಲಯ, ತನಿಖೆ ನಡೆಸಿ ವರದಿ ನೀಡುವಂತೆ ಹಾನಗಲ್ ಪೊಲೀಸರಿಗೆ ನಿರ್ದೇಶನ ನೀಡಿದೆ ಎಂದು ಹಾನಗಲ್ ವಿರಕ್ತಮಠ ಉಳಿಸಿ ಹೋರಾಟ ಸಮಿತಿಯ ವಕೀಲ ಬಿ.ಎಸ್. ದಳವಾಯಿ ಮಾಹಿತಿ ನೀಡಿದರು. ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾನಗಲ್ ತಾಲ್ಲೂಕಿನಲ್ಲಿರುವ 10 ಆಸ್ತಿಗಳು ಮತ್ತು ಹುಬ್ಬಳ್ಳಿ ನಗರ ವ್ಯಾಪ್ತಿಯಲ್ಲಿರುವ 51 ಆಸ್ತಿಗಳನ್ನು ನಿಯಮ ಬಾಹಿರವಾಗಿ ಮಾರಾಟ ಮಾಡಲಾಗಿದೆ. ಇದರಿಂದ ಬಂದ 1.60 ಕೋಟಿಗೂ ಅಧಿಕ ಹಣ ದುರುಪಯೋಗವಾಗಿರುವ ಆರೋಪವಿದೆ ಎಂದರು.

ಪೀಠಾಧಿಪತಿಯವರು ತಾವು ಸೋಲ್ ಟ್ರಸ್ಟಿ ಎಂದು ಮಠದ ಆಸ್ತಿ ಮಾರಾಟ ಮಾಡಿದ್ದಾರೆ.

ಕಾನೂನು ಪ್ರಕಾರ ಇದು ಅಪರಾಧ. ಶ್ರೀಮಠದ ಶ್ರೀಗಳು ಸೋಲ್ ಟ್ರಸ್ಟಿ ಎಂದಾದರೂ, ಆಸ್ತಿ ಮಾರುವ ಹಕ್ಕು ಅವರಿಗಿಲ್ಲ. ಅವರು ಮಠದ ಆಸ್ತಿ ವಹಿವಾಟು ನಿರ್ವಹಣೆ ಮಾಡುವವರು ಮಾತ್ರ. ಹೀಗಾಗಿ, ಮಠದ ಆಸ್ತಿಗಳ ಪರಭಾರೆಗೆ ಕಾನೂನು ಅನ್ವಯ ಅಧಿಕಾರವಿಲ್ಲ ಎಂದು ಹೇಳಿದರು. ಆರೋಪದ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಆರಂಭದಲ್ಲಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೆವು. ಆದರೆ, ಅವರು ತನಿಖೆ ಮಾಡಲು ಹಿಂದೇಟು ಹಾಕಿದರು.

ಹೀಗಾಗಿ, ನಾವು ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದೆವು. ಹಾನಗಲ್ ನ್ಯಾಯಾಲಯದಿಂದ ಈಗ ಪೊಲೀಸರಿಗೆ ತನಿಖೆಯ ನಿರ್ದೇಶನ ಬಂದಿದೆ. ಏಪ್ರಿಲ್ 2ರ ಒಳಗಾಗಿ ತನಿಖೆ ನಡೆಸಿ ಅಂತಿಮ ವರದಿ ಸಲ್ಲಿಸುವಂತೆಯೂ ನ್ಯಾಯಾಲಯ ತಿಳಿಸಿದೆ. ಹಾನಗಲ್ ಮಠದ ಆಸ್ತಿ ಉಳಿಸುವ ವಿಷಯಕ್ಕೆ ನ್ಯಾಯ ಸಿಗುವ ಭರವಸೆ ನಮಗಿದೆ ಎಂದರು.

## ಕೇಂದ್ರ ಬಜೆಟ್: ಈಡೇರದ ಜಿಲ್ಲೆಯ ಜನರ ಬೇಡಿಕೆ

• ಉದಯವಾಹಿನಿ, ಗದಗ



ಕೃಷಿ ಪ್ರಧಾನವಾದ ಗದಗ ಜಿಲ್ಲೆಯ ಜನರ ಬೇಡಿಕೆಗಳಿಗೆ ಕೇಂದ್ರ ಬಜೆಟ್‌ನಲ್ಲಿ ಮನ್ನಣೆ ಸಿಗದಿರುವುದಕ್ಕೆ ಬೇಸರ ವ್ಯಕ್ತವಾಗಿದೆ. ಗದಗ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾದ ವಾತಾವರಣ ಇಲ್ಲ. ಆದರೆ, ಕೃಷಿಗೆ ಪೂರಕವಾದ ಕಿರು ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತ ನೆಲೆ ಇದಾಗಿದೆ.

ಜಿಲ್ಲೆಯಲ್ಲಿ ಪ್ರಮುಖವಾಗಿ ಬೆಳೆಯುವ ಹೆಸರು, ಮೆಣಸಿನಕಾಯಿ ಮತ್ತು ಈರುಳ್ಳಿ ಬೆಳೆಗಳ ಸಂಸ್ಕರಣೆಗೆ ಪೂರಕವಾದ ಫುಡ್ ಪಾರ್ಕ್ ನಿರ್ಮಾಣ ಆಗಬೇಕು ಎಂಬ ಕೂಗಿಗೆ ಈ ಬಾರಿಯೂ ಸ್ಪಂದನೆ ಸಿಕ್ಕಿಲ್ಲ. ಕೃಷಿ ಕೈಗಾರಿಕೆ ಹೊರತಾಗಿ ಜಿಲ್ಲೆಯ ಪ್ರಮುಖ ರೈಲ್ವೆ ಯೋಜನೆಗಳಲ್ಲಿ ಒಂದಾದ ಗದಗ–ಯಲವಗಿ, ಗದಗ–ಮುಂಡರಗಿ–ಹರಪನಹಳ್ಳಿ ರೈಲ್ವೆ ಯೋಜನೆಗಳಿಗೆ ಹೆಚ್ಚಿನ ವೇಗ ಸಿಗಲಿದೆ ಎಂದು ಜಿಲ್ಲೆಯ ಜನ ನಂಬಿದ್ದರು. ಆದರೆ, ಅದು ಕೂಡ ಹುಸಿಯಾಗಿದೆ. ಗದಗ ಜಿಲ್ಲೆಯಲ್ಲಿ ಹಾದುಹೋಗಿರುವ ಕಾರವಾರ- ಇಳಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಬೇಕು ಎಂಬ ಜನರ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ. ಲಕ್ಕುಂಡಿಯನ್ನು ಯುನೆಸ್ಕೋ ಪಟ್ಟಿಗೆ ಸೇರ್ಪಡೆಗೊಳಿಸುವ ಪ್ರಯತ್ನಗಳು ಆರಂಭವಾಗಿದ್ದು, ಅದಕ್ಕೆ ನೆರವಾಗಲು ಅಗತ್ಯವಿರುವ ಪ್ರೋತ್ಸಾಹದಾಯ ಯೋಜನೆ ಕೂಡ ಘೋಷಣೆ ಆಗಿಲ್ಲ. ರೈತರಿಗೆ ತಾಂತ್ರಿಕ ನೆರವು ನೀಡಲು ಎಐ ಆಧರಿತ ಭಾರತ್ ವಿಸ್ತಾರ್ ಯೋಜನೆ ಘೋಷಿಸಿರುವುದು ಕೃಷಿ ಮಾಹಿತಿ ಮತ್ತು ಮಾರುಕಟ್ಟೆ ಸಂಪರ್ಕಕ್ಕೆ ಸಹಕಾರಿಯಾಗಲಿದೆ.

**ಸಾರ್ವಜನಿಕರು ಅಭಿಪ್ರಾಯ**

**ಅದೇರೀತಿ, ದೇಸಿ ಎಣ್ಣೆಕಾಳು ಉತ್ಪಾದನೆಗೆ ಉತ್ತೇಜನ ನೀಡಿರುವುದರಿಂದ ಜಿಲ್ಲೆಯಲ್ಲಿ ಸೂರ್ಯಕಾಂತಿ ಮತ್ತು ಹೆಸರುಕಾಳು ಬೆಳೆಯುವ ರೈತರಿಗೆ ಪರೋಕ್ಷವಾಗಿ ವರದಾನವಾಗುವ ನಿರೀಕ್ಷೆ ಇದೆ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನು, ಈ ಬಾರಿ ಎಂಎಸ್‌ಎಂಇ ವಲಯಕ್ಕೆ ಸಾಲ ಸೌಲಭ್ಯ ಮತ್ತು ತಂತ್ರಜ್ಞಾನ ಮೇಲ್ದರ್ಜೆಗೇರಿಸಲು ನೀಡಿದ ಒತ್ತು ಜಿಲ್ಲೆಯಲ್ಲಿನ ಸಣ್ಣ ಉದ್ದಿಮೆದಾರರಿಗೆ ತುಸು ಸಮಾಧಾನ ತಂದಿದೆ.**

## ತಳಮಟ್ಟದ ಜನರ ಶ್ರೇಯೋಭಿವೃದ್ಧಿಗೆ ಬದ್ಧ

• ಉದಯವಾಹಿನಿ, ಹೊನ್ನಾವರ



ಇಂದಿರಾ ಕ್ಯಾಂಟೀನ್ ಸ್ಥಾಪನೆಯಿಂದ ಕಡಿಮೆ ದರದಲ್ಲಿ ಶ್ರಮಿಕರು, ಬಡವರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ತಳಮಟ್ಟದ ಜನರ ಶ್ರೇಯೋಭಿವೃದ್ಧಿಗೆ ರಾಜ್ಯ ಸರ್ಕಾರ ಸದಾಕಾಲ ಬದ್ಧವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು. ತಾಲ್ಲೂಕಿನ ಮಂಕಿಯಲ್ಲಿ ಸ್ಥಾಪನೆಗೊಂಡಿರುವ ಇಂದಿರಾ ಕ್ಯಾಂಟೀನ್‌ನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿಯೂ ಇಂದಿರಾ ಕ್ಯಾಂಟೀನ್ ಸೇವೆ ಉತ್ತಮವಾಗಿ ನಡೆಯುತ್ತಿದೆ. ಜಿಲ್ಲೆಯ ಬಹುತೇಕ ನಗರಗಳಲ್ಲಿ ಕ್ಯಾಂಟೀನ್ ತೆರೆಯಲಾಗಿದ್ದು, ನಿತ್ಯ ಸಾವಿರಾರು ಜನರಿಗೆ ಉಪಯುಕ್ತವಾಗುತ್ತಿದೆ ಎಂದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮೊದಲ ಅವಧಿಯಲ್ಲಿ ಈ ಯೋಜನೆ ಪರಿಚಯಿಸಿತ್ತು. ಈ ಬಾರಿ ಗ್ಯಾರಂಟಿ ಯೋಜನೆ ಮೂಲಕ ಬಡವರ ಕಲ್ಯಾಣಕ್ಕೆ ಕಂಕಣಬದ್ಧವಾಗಿದೆ. ಕೋಟ್ಯಂತರ ಕುಟುಂಬಗಳು ಯೋಜನೆಗಳ ಲಾಭ ಪಡೆದುಕೊಂಡು, ಆರ್ಥಿಕ ಸಬಲತೆ ಸಾಧಿಸುತ್ತಿವೆ ಎಂದರು.

ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಣ್ಣಪ್ಪ ನಾಯ್ಕ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಹೀರ ಅಬ್ಬಾಸ್ ಎಸ್., ಮಂಕಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕೇಶವ ಚೌಗುಲೆ, ಪಟ್ಟಣ ಪಂಚಾಯಿತಿ ಸದಸ್ಯರು ಪಾಲ್ಗೊಂಡಿದ್ದರು.

ಬಳಿಕ ಸಚಿವರು ತಾಲ್ಲೂಕಿನ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ ಪಶ್ಚಿಮವಾಹಿನಿ ಯೋಜನೆಯಡಿ 19.98 ಕೋಟಿ ವೆಚ್ಚದಲ್ಲಿ ಮಂಜೂರಾಗಿರುವ ಮಂಕಿ ಹೊಸಹಿತ್ತು ಸೇತುವೆಯಿಂದ ಬೋಳೆಬಸ್ತಿ ಸೇತುವೆವರೆಗೆ ದೊಡ್ಡ ಹೊಳೆ ಬಲದಂಡೆಗೆ ಮತ್ತು ಎಡದಂಡೆಗೆ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

## ಸಮಾಜ ಬೆಳೆಯಲು ಬೇಕು ಸಂಘಟನೆ ಶ್ರೀನಿವಾಸ ಗುಪ್ತಾ ಅಭಿಮತ

• ಉದಯವಾಹಿನಿ, ಕೊಪ್ಪಳ

ಸಮಾಜದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಆರ್ಯವೈಶ್ಯ ಸಮುದಾಯದ ಜನತೆಯನ್ನು ಒಂದೆಡೆ ಸೇರಿಸಬೇಕು. ಒಂದೆಡೆ ಸೇರಿ ಮುನ್ನಡೆದಾಗ ಸಮಾಜದ ಸಂಘಟನೆಯೂ ಸಾಧ್ಯವಾಗುತ್ತದೆ. ಪರಸ್ಪರ ಸಹಕಾರವೂ ದೊರೆಯುತ್ತದೆ ಎಂದು ಕೊಪ್ಪಳ ಆರ್ಯವೈಶ್ಯ ಸಂಘದ ಅಧ್ಯಕ್ಷ ಶ್ರೀನಿವಾಸ ಗುಪ್ತಾ ಹೇಳಿದರು.

ಕರ್ನಾಟಕ ಆರ್ಯವೈಶ್ಯ ಅಧಿಕಾರಿಗಳ ವೃತ್ತಿನಿರತ ಸಂಘಗಳ ಒಕ್ಕೂಟದಿಂದ ನಗರದಲ್ಲಿ ನಡೆದ ರಾಜ್ಯಮಟ್ಟದ ಪ್ರಥಮ ಆರ್ಯವೈಶ್ಯ ವಕೀಲರ ಸಮಾವೇಶ, ಹಿರಿಯ ವಕೀಲರಿಗೆ ವಾಸವಿ ಕಾನೂನು ಸಿರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ವಿವಿಧ ವೃತ್ತಿಗಳಲ್ಲಿ ಇರುವವರು ಸೇರಿ ಸಮಾಜದ ಬೆಳವಣಿಗೆಗೆ ನೆರವಾಗಬೇಕು. ಸಮಾಜಕ್ಕೆ ಸಂಬಂಧಿಸಿದ ರಾಜ್ಯಮಟ್ಟದ ಯಾವುದೇ ಕಾರ್ಯಕ್ರಮಗಳನ್ನು ಕೊಪ್ಪಳದಲ್ಲಿ ಮಾಡಿದರೂ ಬೆಂಬಲವಿದೆ. ಸಿರಿವಂತರ ನಡುವೆಯೂ ಆರ್ಯವೈಶ್ಯ ಸಮಾಜದಲ್ಲಿ ಸಾಕಷ್ಟು ಜನ ಬಡವರಿದ್ದಾರೆ ಅವರನ್ನು ನಮ್ಮೊಡನೆ ಕರೆದುಕೊಂಡು ಸಾಗಬೇಕಿದೆ ಎಂದರು. ಭಾಗ್ಯನಗರ ಶಂಕರಾಚಾರ್ಯ ಮಠದ ಶಿವರಾಮ ಕೃಷ್ಣಾನಂದಸ್ವಾಮೀಜಿ ಮಾತನಾಡಿ ಅನೇಕ ಎಳೆಗಳು ಕೂಡಿದರೆ ಹೇಗೆ ಹಗ್ಗವಾಗುತ್ತದೆಯೊ ಅದೇ ರೀತಿ ಎಲ್ಲರೂ ಸೇರಿದರೆ ಸಮಾಜಕ್ಕೆ ಬಲ ಬರುತ್ತದೆ.

# ರಾಜ್ಯದಲ್ಲಿ ಸಮೃದ್ಧಿ, ಸಂತೋಷ ಇರಲಿದೆ ಎಂಬುದರ ಸೂಚನೆ

### ದೊಡ್ಡ ಮೈಲಾರ ಗೊರವಯ್ಯನ ಕಾರ್ಣಿಕ ನುಡಿ: ಅಂಬಲಿ ರಾಶಿಗೆ ಮುತ್ತಿನ ಗಿಣಿ... ಅರ್ಥವೇನು?

• ಉದಯವಾಹಿನಿ, ವಿಜಯನಗರ


ಉದಯವಾಹಿನಿ ಚಿತ್ರ

**ಸಮೃದ್ಧಿ ಆಯ್ತಲೇ ಪರಾಕ್**

ಹರಪನಹಳ್ಳಿಯ ದೊಡ್ಡ ಮೈಲಾರದಲ್ಲಿ ಗೊರವಯ್ಯನ ಕಾರ್ಣಿಕ ನುಡಿ ಹೊರಬಿದ್ದಿದೆ. ಅಂಬಲಿ ರಾಶಿಗೆ ಮುತ್ತಿನ ಗಿಣಿ ಸಮೃದ್ಧಿ ಆಯ್ತಲೇ ಪರಾಕ್ ಎಂದು ಗೊರವಯ್ಯ ನುಡಿದಿದ್ದಾರೆ. ಭರತ ಹುಣ್ಣಿಮೆ ಹಿನ್ನೆಲೆ ಪ್ರತಿ ವರ್ಷದಂತೆ ಈ ಬಾರಿಯೂ ಹರಪನಹಳ್ಳಿಯಲ್ಲಿ ಜಾತ್ರಾ ಮಹೋತ್ಸವ ನಡೆದಿದೆ. ಈ ವರ್ಷದ ಕಾರ್ಣಿಕವನ್ನು ಗೊರವಪ್ಪನವರು ಬಿಲ್ಲನ್ನೇರಿ ನಿಂತು, ಶೂನ್ಯವನ್ನು ದಿಟ್ಟಿಸುತ್ತಾ ನುಡಿ ಭಕ್ತರ ಜಯಘೋಷಗಳ ನಡುವೆ ಸದ್ದಲೇ ಪರಾಕ್ ಎಂದು ಹೇಳುವ ಮೂಲಕ ನುಡಿದರು. ಗೊರವಯ್ಯ ಸದ್ದಲೇ ಪರಾಕ್ ಎಂದ ಕೂಡಲೇ ನೆರದಿದ್ದ ಸಾವಿರಾರು ಸಂಖ್ಯೆ ಭಕ್ತ ಸಮೂಹವು ಒಂದು ಕ್ಷಣ ನಿಶ್ಯಬ್ಧವಾಯಿತು. ಆ ಬಳಿಕ ಗೊರವಯ್ಯನವರು ದೇವವಾಣಿಯಾದ ಕಾರ್ಣಿಕವನ್ನು ನುಡಿದರು. ಇದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯದ ಭಾಗವಾಗಿದೆ. ಇಲ್ಲಿ ಕಾರ್ಣಿಕ ಹೇಳಿದ ನಂತರ, ಮೈಲಾರದಲ್ಲಿ ಮತ್ತೊಂದು ಕಾರ್ಣಿಕ ನಡೆಯುತ್ತದೆ. ದೇಗುಲದ ಅಣತಿ ದೂರದಲ್ಲಿರುವ ಡೆಂಕನ ಮರಡಿಗೆ ರಥಸಪ್ತಮಿಯಂದು ದೇವಲೋಕದ 7ಕೋಟಿ ದೇವತೆಗಳು ಮಾರುವೇಷದಲ್ಲಿ ಆಗಮಿಸುತ್ತಾರೆಂಬ ನಂಬಿಕೆಯಿದೆ. 11 ದಿನ ಕಾಲ ಡೆಂಕನ ಮರಡಿ ಪಕ್ಕದಲ್ಲಿರುವ ಗಂಗಿಮಾಳಮ್ಮನ ಮರಡಿಯಲ್ಲಿ ರಾಕ್ಷಸರೊಂದಿಗೆ ಕದನ ನಡೆಯುತ್ತದೆ. ಶಿವ ಮೈಲಾರಲಿಂಗೇಶ್ವರನಾಗಿ, ಪಾರ್ವತಿ ಗಂಗಿಮಾಳಮ್ಮಳಾಗಿ ಇತರ 7 ಕೋಟಿ ದೇವತೆಗಳು ಯುದ್ಧ ಮಾಡುತ್ತಾರೆ. ಪೌರಾಣಿಕ ಹಿನ್ನೆಲೆಯಂತೆ ರಥಸಪ್ತಮಿಯ ದಿನದಂದು ಭಕ್ತರು, ನೈವೇದ್ಯಕ್ಕೆ ತರುವ ಸಜ್ಜೆ ಕಡಬು ಮತ್ತು ಗೊರವಯ್ಯನ ಬಳಿ ಇರುವ ಬಿಲ್ಲು, ಗುರುಗಳ ಕೈಯಲ್ಲಿ ಬತ್ತಳಿಕೆಗಳನ್ನು ಇಟ್ಟುಕೊಂಡು ಪರಸ್ಪರ ಹೊಡೆದಾಡಿಕೊಳ್ಳುವ, ಕಡುಬಿನ ಕಾಳಗ ಭಾನುವಾರ ರಾತ್ರಿ ನಡೆಯಿತು. ಕಾರ್ಣಿಕ ನುಡಿವ ಗೊರವಪ್ಪ ರಾಮಣ್ಣ ಅರ್ಚಕರು ಸೇರಿ 12 ಜನ ಬಾಬುದಾರರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

**ಮೈಲಾರದಲ್ಲಿ ನಾಳೆ ಕಾರ್ಣಿಕ**

**ಹೂವಿನಹಡಗಲಿ ಮೈಲಾರದ ಮೈಲಾರಲಿಂಗೇಶ್ವರ ಜಾತ್ರೆಗೆ ಜ.25 ಭಾನುವಾರ ರಥ ಸಪ್ತಮಿಯಂದು ದೇಗುಲದ ಮಂಟಪದಲ್ಲಿ ಹಾಲು ಉಕ್ಕಿಸುವ ಮೂಲಕ ಜಾತ್ರೆಗೆ ಭಾನುವಾರ ಚಾಲನೆ ನೀಡಲಾಗಿದೆ. ಫೆ.4 ಕಾರ್ಣಿಕೋತ್ಸವ. ಕಾರ್ಣಿಕವನ್ನು ಗೊರವಪ್ಪ ರಾಮಣ್ಣ ನುಡಿಯಲಿದ್ದಾರೆ. ದೇಗುಲದ ವಂಶಪಾರಂಪರ್ಯ ಧರ್ಮಕರ್ತ ಗುರು ವೆಂಕಪ್ಪಯ್ಯ ಒಡೆಯರ್ ಅವರು, ಪ್ರಧಾನ ಅರ್ಚಕ ಪ್ರಮೋದ್ ಭಟ್, ಕಾರ್ಣಿಕ ನುಡಿಯುವ ಗೊರವಪ್ಪ ಕಾರ್ಣಿಕದ ರಾಮಣ್ಣ, ಕಂಚವೀರರು, ಸರಪಳಿ ಪವಾಡದ ಗೊರವರು ಸೇರಿ ನಾನಾ ಬಾಬುದಾರರಿಗೆ ಕಂಕಣಧಾರಣೆ ಮಾಡಿದರು. ದೇಗುಲದ ಆವರಣದಲ್ಲಿ ಆಕಳ ಸಗಣಿಯಿಂದ ತಯಾರಿಸಿದ ಕುಳ್ಳಿನಿಂದ ಹಾಲನ್ನು ಕಾಯಿಸಲಾಯಿತು. ಈ ವೇಳೆ ಹಾಲು ಉತ್ತರ ದಿಕ್ಕಿಗೆ ಉಕ್ಕಿ ಹರಿಯಿತು. ಹಾಲು ಯಾವ ದಿಕ್ಕಿನ ಕಡೆಗೆ ಉಕ್ಕಿ ಹರಿಯುತ್ತದೆಯೋ ಆ ಪ್ರದೇಶ ಹುಲುಸುತ್ತದೆ ಎಂಬುದು ಪ್ರತೀತಿ.**

**ಕಾರ್ಣಿಕದ ಅರ್ಥ ಏನು?**

**ಹರಪನಹಳ್ಳಿಯ ಕಾರ್ಣಿಕವನ್ನು ಸಾವಿರಾರು ಭಕ್ತರು ಬಹಳ ನಂಬುತ್ತಾರೆ. ಈ ಬಾರಿ ಹೇಳಲಾದ ಅಂಬಲಿ ರಾಶಿಗೆ ಮುತ್ತಿನ ಗಿಣಿ ಸಮೃದ್ಧಿ ಆಯ್ತುಲೇ ಪರಾಕ್ ಎಂಬ ನುಡಿ, ರಾಜ್ಯದಲ್ಲಿ ಸಮೃದ್ಧಿ ಮತ್ತು ಸಂತೋಷ ಇರಲಿದೆ ಎಂಬುದರ ಸೂಚನೆ ಎಂದು ಹಲವರು ವಿಶ್ಲೇಷಿಸಿದ್ದಾರೆ. ರಾಜ್ಯದ ಜನತೆ ಸುಖದಿಂದ ಇರುತ್ತಾರೆ, ಮಳೆಬೆಳೆ ಚೆನ್ನಾಗಿ ಆಗುತ್ತದೆ ಎಂದು ಹೇಳಲಾಗಿದೆ. ಈ ಮೂಲಕ ಭಕ್ತರದಲ್ಲಿ ಈ ವರ್ಷ ಆಶಾದಾಯಕವಾಗಿರಲಿದೆ ಎಂಬ ನಂಬಿಕೆ ಬಂದಿದೆ.**

## ರಿಕ್ಷಾ ಚಾಲಕರು ಪಟ್ಟಣದ ಕನ್ನಡಿ ಇದ್ದಂತೆ

• ಉದಯವಾಹಿನಿ, ಕಾರವಾಡ

ಒಂದು ಪಟ್ಟಣ, ನಗರದ ಸಂಸ್ಕಾರವನ್ನು ತಿಳಿದುಕೊಳ್ಳಬೇಕು ಎಂದರೆ ಅಲ್ಲಿಯ ರಿಕ್ಷಾ ಚಾಲಕರಿಂದ ತಿಳಿಯಬಹುದು. ಹೊರಗಿನಿಂದ ಬರುವ ಪ್ರಯಾಣಿಕರೊಂದಿಗೆ ರಿಕ್ಷಾ ಚಾಲಕರು ಸ್ನೇಹಪರವಾಗಿ ವರ್ತಿಸುವುದು ಮುಖ್ಯ. ಏಕೆಂದರೆ ರಿಕ್ಷಾ ಚಾಲಕರು ನಗರದ ಕನ್ನಡಿಯಾಗಿರುತ್ತಾರೆ. ಜನರು ರಿಕ್ಷಾ ಚಾಲಕರ ನಡವಳಿಕೆಯ ಆಧಾರದ ಮೇಲೆ ಒಂದು ಪಟ್ಟಣ ಅಥವಾ ನಗರವನ್ನು ಅಳೆಯಲಾಗುತ್ತದೆ ಎಂದು ನಿರ್ಮಲ ಆಸ್ಪತ್ರೆ ಮನೋವೈದ್ಯ ಡಾ. ಚಂದ್ರಶೇಖರ ಹಲಿಂಗೆಳೆ ಹೇಳಿದರು. ಮಿರಜ ಪಟ್ಟಣದಲ್ಲಿ ಸಾಂಗಲಿ ಜಿಲ್ಲಾ ಪ್ರಯಾಣಿಕ ರಿಕ್ಷಾ ಸಂಘದ 11ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದರು. ಇಲ್ಲಿಯವರೆಗೆ ಸಾಂಗಲಿ ಜಿಲ್ಲಾ ಪ್ರಯಾಣಿಕ ರಿಕ್ಷಾ ಸಂಘ ಸಾಂಗಲಿ ಜಿಲ್ಲೆ ಮತ್ತು ಮಿರಜ್ ಪಟ್ಟಣದ ಪ್ರಯಾಣಿಕರಿಗೆ ಉತ್ತಮ ಸೇವೆಯನ್ನು ನೀಡಿದ್ದು ಅದಕ್ಕಾಗಿಯೇ 11ನೇ ವಾರ್ಷಿಕೋತ್ಸವವನ್ನು ಅತ್ಯಂತ ಸಂತೋಷದಿಂದ ಆಚರಿಸಿಕೊಳ್ಳುತ್ತಿದೆ ಎಂದರು.

# ಜಿ.ಪಂ ಚುನಾವಣೆ: ಶಿವಸೇನೆ ಗೆದ್ದರೆ ಅನುದಾನ ಕಡಿತಗೊಳಿಸುತ್ತೇವೆ: ನಿತೇಶ್ ರಾಣೆ

**ಮುಂಬೈ:** ಮುಂಬರುವ ಜಿಲ್ಲಾ ಪರಿಷತ್ ಮತ್ತು ಪಂಚಾಯಿತಿ ಸಮಿತಿ ಚುನಾವಣೆಯಲ್ಲಿ ಶಿವಸೇನೆ (ಯುಬಿಟಿ) ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಲ್ಲಿ, ಅವರಿಗೆ ನೀಡಬೇಕಾದ ಅಭಿವೃದ್ಧಿ ನಿಧಿಯನ್ನು ತಡೆಹಿಡಿಯುತ್ತೇವೆ ಎಂದು ಮಹಾರಾಷ್ಟ್ರ ಸಚಿವ ನಿತೇಶ್ ರಾಣೆ ಹೇಳಿದ್ದಾರೆ. ಸಿಂಧುದುರ್ಗ ಜಿಲ್ಲೆಯ ಕಂಕ್ಲಾವಿಯ ಫೋಂಡಾ ಕ್ಷೇತ್ರದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, 'ನಾನು ಪಕ್ಷದ ಚಿಹ್ನೆಯನ್ನು ನೋಡಿದ ಬಳಿಕವೇ ಅನುದಾನ ಬಿಡುಗಡೆ ಮಾಡುತ್ತೇನೆ. ಕಮಲ ಅಥವಾ ಬಿಲ್ಲು ಮತ್ತು ಬಾಣ (ಬಿಜೆಪಿ ಮತ್ತು ಶಿವಸೇನೆ ಚುನಾವಣಾ ಚಿಹ್ನೆಗಳು) ಕಂಡರೆ, ತಕ್ಷಣವೇ ಹಣವನ್ನು ನೀಡಲಾಗುತ್ತದೆ. ಒಂದು ವೇಳೆ ತಪ್ಪಾಗಿ, ಪಂಜಿನ ಚಿಹ್ನೆ (ಶಿವಸೇನೆ ಯುಬಿಟಿ) ಕಂಡುಬಂದರೆ... ಈಗಾಗಲೇ ಮಂಜೂರು ಮಾಡಲಾದ ಹಣವನ್ನು ಸಹ ಹಿಂಪಡೆಯುತ್ತೇನೆ' ಎಂದಿದ್ದಾರೆ. ಎಲ್ಲಾ ಸರಪಂಚರು ತಮ್ಮ ಗ್ರಾಮ ಪಂಚಾಯತ್



ಗಳನ್ನು ನಮಗೆ ಹಸ್ತಾಂತರಿಸಬೇಕೆಂದು ನಾವು ಸ್ಪಷ್ಟವಾಗಿ ಹೇಳಿದ್ದೆವು. ಇಲ್ಲದಿದ್ದರೆ, ಅವರಿಗೆ ಒಂದು ರೂಪಾಯಿಯೂ ಅನುದಾನ ಸಿಗುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದೆವು. ಆದ್ದರಿಂದಲೇ ಎಲ್ಲಾ ಸರಪಂಚರು ಬೇಗನೆ ನಮ್ಮ ಪಕ್ಷಕ್ಕೆ ಸೇರ್ಪಡೆಯಾದರು' ಎಂದು ನಿತೇಶ್ ಹೇಳಿದ್ದಾರೆ.

ಜಿಲ್ಲಾ ಪರಿಷತ್ ಮತ್ತು ಪಂಚಾಯಿತಿ ಸಮಿತಿ ಚುನಾವಣೆಗಳು ಏಕಪಕ್ಷೀಯವಾಗುತ್ತಿವೆ ಮತ್ತು ಮತದಾರರು ಪ್ರತಿಸ್ಪರ್ಧಿಗಳನ್ನು ಬೆಂಬಲಿಸುವ ಅಗತ್ಯವನ್ನು ಪ್ರಶ್ನಿಸುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.ಸಂಸದ ನಾರಾಯಣ ರಾಣೆ ಅವರ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳು ನಡೆಯುತ್ತಿವೆ ಮತ್ತು ಮುಂದಿನ ಐದು ವರ್ಷಗಳ ಕಾಲ ಸಿಂಧುದುರ್ಗ ಜಿಲ್ಲೆ ಅವರ ನಾಯಕತ್ವದಲ್ಲಿ ಉಳಿಯುತ್ತದೆ ಎಂದು ನಿತೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಬಗ್ಗೆ ಬಿಜೆಪಿಗೆ ಯಾವುದೇ ಚಿಂತನೆ ಇಲ್ಲ.

ಚುನಾವಣೆಯ ನಂತರ ಅವರು (ಮತ್ತೆ ಅನುದಾನಕ್ಕಾಗಿ ನಮ್ಮ ಬಳಿಗೆ ಬರಬೇಕಾಗುತ್ತದೆ' ಎಂದು ಎಂದಿದ್ದಾರೆ. 12 ಜಿಲ್ಲಾ ಪರಿಷತ್ ಮತ್ತು 125 ಪಂಚಾಯಿತಿ ಸಮಿತಿಗೆ ಫೆಬ್ರುವರಿ 7ರಂದು ಚುನಾವಣೆ ನಡೆಯಲಿದ್ದು, ಫೆ.9ರಂದು ಮತ ಎಣಿಕೆ ನಡೆಯಲಿದೆ.

# ಲಡಾಖ್ ಬಿಕ್ಕಟ್ಟಿನ ಬಗ್ಗೆ ರಾಹುಲ ಪ್ರಸ್ತಾಪ

**ಲೋಕಸಭೆಯಲ್ಲಿ ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿದ್ದ ವಿಪಕ್ಷ ನಾಯಕ ರಾಹುಲ್ ಗಾಂಧಿ, ಚೀನಾ ಗಡಿ ವಿವಾದದ ಬಗ್ಗೆ ಮಾತನಾಡಿದ್ದರು. ಡೋಕ್ಲಾಮ್ ಗಡಿ ವಿವಾದ, ಗಾಲ್ವಾನ್ ಘರ್ಷಣೆ ಬಗ್ಗೆ ಮಾತನಾಡಿದ್ದಕ್ಕೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತು.**



**ನವದೆಹಲಿ:** ಭಾರತ ಮತ್ತು ಚೀನಾ ನಡುವಿನ ಲಡಾಖ್ ಬಿಕ್ಕಟ್ಟಿನ ಬಗ್ಗೆ ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಪ್ರಸ್ತಾಪಿಸಿದ ನಂತರ ಸದನದಲ್ಲಿ ಗದ್ದಲ ಸೃಷ್ಟಿಯಾಯಿತು ಎಂದು ಮಾಧ್ಯಮಗಳು ವರದಿ ಮಾಡಿವೆ. ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ವೇಳೆ ರಾಹುಲ್, ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಕುಂದ್ ನರವಾಣೆ ಅವರ ಅಪ್ರಕಟಿತ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ ಭಾರತ-ಚೀನಾ ನಡುವಿನ ಲಡಾಖ್ ಬಿಕ್ಕಟ್ಟಿನ ವಿಚಾರವನ್ನು ಪ್ರಸ್ತಾಪಿಸಿದ್ದಾರೆ.

ಇದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ವಿರೋಧ ವ್ಯಕ್ತಪಡಿಸಿದರು. ಪ್ರಕಟಿತವಲ್ಲದ ಪುಸ್ತಕವನ್ನು ಲೋಕಸಭೆಯಲ್ಲಿ ಚರ್ಚಿಸುವುದು ಸರಿಯಲ್ಲ ಎಂದು ವಿರೋಧ ವ್ಯಕ್ತಪಡಿಸಿದರು. ನರವಾಣೆ ಅವರ ಆತ್ಮಚರಿತ್ರೆಯ ಕೆಲವು ಅಂಶಗಳನ್ನು ನಿಯತ ಕಾಲಿಕೆಯಲ್ಲಿ ಪ್ರಕಟಿಸಲಾಗಿದೆ ಎನ್ನಲಾಗಿದೆ. ಅಪ್ರಕಟಿತ ಪುಸ್ತಕದ ವಿಚಾರಗಳನ್ನು ಲೋಕಸಭೆಯಲ್ಲಿ ಚರ್ಚಿಸುವುದು ಸರಿಯಲ್ಲ. ಇದು ನಿಯಮಗಳ ಉಲ್ಲಂಘನೆಯಾಗುತ್ತದೆ. ಸಂಸದೀಯ ಸಂಪ್ರದಾಯಕ್ಕೆ ವಿರೋಧವಾಗಿದೆ. ನಿಯತಕಾಲಿಕೆಯಲ್ಲಿ ಏನೂ ಬೇಕಾದರೂ ಪ್ರಕಟಿಸಬಹುದು ಎಂದು ರಾಹುಲ್ ಹೇಳಿಕೆಗೆ ರಾಜನಾಥ್ ಸಿಂಗ್ ತಿರುಗೇಟು ನೀಡಿದ್ದಾರೆ. ಸಿಂಗ್‌ಗೆ ಅಮಿತ್ ಶಾ ಬೆಂಬಲ ವ್ಯಕ್ತಪಡಿಸಿದ್ದಾರೆ.

**ಸ್ಪೀಕರ್ ಎಚ್ಚರಿಕೆ, ರಾಹುಲ್ ಪಟ್ಟು:** ಸ್ಪೀಕರ್ ಓಂ ಬಿರ್ಲಾ ಅವರು ನಿಯಮಾವಳಿಗಳ ಪ್ರಕಾರ, ಮಾತನಾಡಲು ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಪದೇ ಪದೇ ಸೂಚಿಸಿದರು. ಆದಾಗ್ಯೂ, ರಾಹುಲ್ ಅವರು ಮಾಜಿ ಸೇನಾಧಿಕಾರಿಯ ಹೇಳಿಕೆಯನ್ನು ಪ್ರಸ್ತಾಪಿಸಿದರು. ಇದೇ ವಿಷಯವಾಗಿ ಸದನದಲ್ಲಿ ತೀವ್ರ ಗದ್ದಲ ಏರ್ಪಟ್ಟಿತು. ವಿಪಕ್ಷ ಸದಸ್ಯರು ಲೇಖನ ಅಧಿಕೃತವಾಗಿದೆ. ಅದನ್ನು ಸದನದಲ್ಲಿ ಉಲ್ಲೇಖಿಸಬಹುದು ಎಂದು ಪಟ್ಟು ಹಿಡಿದರು.ಇತ್ತ, ರಾಜನಾಥ್ ಸಿಂಗ್ ಅಪ್ರಕಟಿತ ಪುಸ್ತಕ ಮತ್ತು ನಿಯತಕಾಲಿಕೆಗಳಲ್ಲಿ ಬರೆದ ಮಾತ್ರಕ್ಕೆ ಅದನ್ನು ಸದನದಲ್ಲಿ ಮಂಡಿಸುವಂತಿಲ್ಲ. ಇದು ನಿಯಮಕ್ಕೆ ವಿರುದ್ಧ ಎಂದು ವಾದಿಸಿದರು. ಇದನ್ನು ಗೃಹ ಸಚಿವ ಅಮಿತ್ ಶಾ ಬೆಂಬಲಿಸಿದರು. ಸ್ಪೀಕರ್ ನಿರ್ದೇಶನದ ಬಳಿಕವೂ ರಾಹುಲ್ ಗಾಂಧಿ ಮಾಜಿ ಸೇನಾಧಿಕಾರಿಯ ಅಪ್ರಕಟಿತ ಪುಸ್ತಕದಲ್ಲಿನ ಮಾಹಿತಿ ಓದಲು ಆರಂಭಿಸಿದಾಗ, ಸದನವನ್ನು ಎರಡು ಬಾರಿ ಮುಂದೂಡಲಾಯಿತು. ಮಾಜಿ ಸೇನಾ ಮುಖ್ಯಸ್ಥ ಎಂ.ಎಂ.ನರವಾಣೆ 2019ರ ಡಿಸೆಂಬರ್‌ನಿಂದ 2022ರ ಏಪ್ರಿಲ್‌ವರೆಗೆ ಭಾರತದ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಸಚಿವ ಕಿರಣ್ ರಿಜಿಜು ಸಾಥ್: ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮತ್ತು ಬಿಜೆಪಿ ಸಂಸದ ನಿಶಾಂತ್ ದುಬೆ ಅವರು ಪುಸ್ತಕಗಳಿಂದ, ವಿಶೇಷವಾಗಿ ಪ್ರಕಟಣೆಗೊಳ್ಳದ ಪುಸ್ತಕಗಳಿಂದ ಉಲ್ಲೇಖಿಸುವುದರ ವಿರುದ್ಧದ ನಿಯಮಗಳನ್ನು ಪುನರುಚ್ಚರಿಸಿದರು. ಸಭಾಧ್ಯಕ್ಷರು, ಅದು ಪ್ರಕಟಗೊಂಡಿದ್ದರೂ ಸಹ, ಸದನದ ಕಾರ್ಯಕಲಾಪಗಳಿಗೆ ಸಂಬಂಧವಿಲ್ಲದ ಯಾವುದೇ ಪುಸ್ತಕದಿಂದ ಉಲ್ಲೇಖಿಸಲು ಅನುಮತಿ ಇಲ್ಲ, ಎಂದು ಒತ್ತಿ ಹೇಳಿದರು.

ವಿರೋಧ ಪಕ್ಷದ ನಾಯಕನಿಗೆ ಬೆಂಬಲವಾಗಿ ಮಾತನಾಡಿದ ಸಮಾಜವಾದಿ ಪಕ್ಷದ ಸಂಸದ ಅಖಿಲೇಶ್ ಯಾದವ್, ಚೀನಾದ ವಿಷಯಗಳು ಅತ್ಯಂತ ಸೂಕ್ಷ್ಮವಾಗಿರುವುದರಿಂದ ರಾಹುಲ್ ಗಾಂಧಿಯವರಿಗೆ ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ನೀಡಬೇಕು ಎಂದು ಹೇಳಿದರು. ಈ ಆಕ್ಷೇಪಗಳ ನಂತರ, ಸದನದಲ್ಲಿ ಗದ್ದಲ ಉಂಟಾಯಿತು. ವಿರೋಧ ಪಕ್ಷದ ಸದಸ್ಯರು ಮಧ್ಯಪ್ರವೇಶವನ್ನು ಪ್ರತಿಭಟಿಸಿದರು. ಆದರೆ ಆಡಳಿತ ಪಕ್ಷದ ಸಂಸದರು ಸಂಸದೀಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಒತ್ತಾಯಿಸಿದರು. ಸುಮಾರು 45 ನಿಮಿಷಗಳ ಈ ಗದ್ದಲದ ನಂತರ, ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಯಿತು. ಸದನ ಮುಂದೂಡಲ್ಪಟ್ಟ ನಂತರ, ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಅವರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರೊಂದಿಗೆ ಸಭೆ ನಡೆಸಿದರು.

- ನೈಜ ಬಿಕ್ಕಟ್ಟುಗಳ ಬಗ್ಗೆ ಕುರುಡಾದ ಬಜೆಟ್
- ಕೇಂದ್ರದ ವಿರುದ್ಧ ರಾಹುಲ್ ಆಕ್ರೋಶ!
- ಬಜೆಟ್ ಅಧಿವೇಶನ ವೇಳೆ ಪ್ರಕಟಣೆಗೊಳ್ಳದ ಪುಸ್ತಕದ ಭಾಗಗಳನ್ನು
- ಪ್ರಸ್ತಾಪಿಸಿದ ರಾಹುಲ್ ಗಾಂಧಿ; ಲೋಕಸಭೆಯಲ್ಲಿ ಗದ್ದಲ, ಗಲಾಟೆ

**ಪುಸ್ತಕ ಪ್ರಕಟಗೊಂಡಿಲ್ಲ**

**ರಾಹುಲ್ ಗಾಂಧಿ ಅವರು ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡಲು ಪ್ರಾರಂಭಿಸಿದಾಗ, ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ನಾರವಣೆ ಅವರ ಪ್ರಕಟಣೆಗೊಳ್ಳದ ಪುಸ್ತಕದಿಂದ ಕೆಲವು ಸಾಲುಗಳನ್ನು ಉಲ್ಲೇಖಿಸಲು ಮುಂದಾದರು. ತಕ್ಷಣವೇ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಧ್ಯಪ್ರವೇಶಿಸಿದರು. ಆ ಪುಸ್ತಕ ಪ್ರಕಟಗೊಂಡಿದೆಯೇ ಎಂದು ರಾಹುಲ್ ಗಾಂಧಿಯನ್ನು ಕೇಳಿದರು. ಆ ಪುಸ್ತಕ ಪ್ರಕಟಗೊಂಡಿದೆಯೇ ಇಲ್ಲವೇ ಎಂಬುದನ್ನು ರಾಹುಲ್ ಗಾಂಧಿ ನಮಗೆ ಹೇಳಬೇಕು. ಅದು ಪ್ರಕಟಗೊಂಡಿಲ್ಲ. ಅದರಿಂದ ಅವರು ಉಲ್ಲೇಖಿಸಲು ಸಾಧ್ಯವಿಲ್ಲ.**

**ನಾನು ವಿಶ್ವಾಸದಿಂದ ಹೇಳಬಲ್ಲೆ, ಆ ಪುಸ್ತಕ ಪ್ರಕಟಗೊಂಡಿಲ್ಲ ಎಂದು ರಾಜನಾಥ್ ಸಿಂಗ್ ಹೇಳಿದರು.**

**ಗೃಹ ಸಚಿವ ಅಮಿತ್ ಶಾ ಕೂಡ ಈ ವಿಷಯದಲ್ಲಿ ಸಾಥ್ ನೀಡಿದರು. ಪುಸ್ತಕವೇ ಪ್ರಕಟಗೊಳ್ಳದಿದ್ದಾಗ, ಅದರಿಂದ ಹೇಗೆ ಉಲ್ಲೇಖಿಸಬಹುದು? ಎಂದು ಪ್ರಶ್ನಿಸಿದರು. ಪತ್ರಿಕೆಗಳ ತುಣುಕುಗಳು, ಪುಸ್ತಕಗಳು, ಅಥವಾ ಇಂತಹ ಇತರ ಅಧಿಕೃತವಲ್ಲದ ವಿಷಯಗಳನ್ನು ಸದನದಲ್ಲಿ ಉಲ್ಲೇಖಿಸಲುಬರುವುದಿಲ್ಲ ಎಂದು ಅಮಿತ್ ಶಾ ಹೇಳಿದರು. ರಾಹುಲ್ ಗಾಂಧಿಯವರು ಪುಸ್ತಕವನ್ನು ಉಲ್ಲೇಖಿಸದೆ ತಮ್ಮ ಭಾಷಣವನ್ನು ಮುಂದುವರಿಸುವಂತೆ ವಿನಂತಿಸಿದರು.**

1 ಸಂಸತ್ತಿನಲ್ಲಿ ಇಂದು ಬಜೆಟ್ ಅಧಿವೇಶನ ವೇಳೆ ಗದ್ದಲ

2 ರಾಹುಲ್ ಗಾಂಧಿ ಅವರು ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ನಾರವಣೆ ಅವರ ಪ್ರಕಟಣೆಗೊಳ್ಳದ ಪುಸ್ತಕ ಪ್ರಸ್ತಾಪಿಸಿದರು

3 ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಧ್ಯಪ್ರವೇಶಿಸಿ, ಪುಸ್ತಕ ಪ್ರಕಟಗೊಂಡಿಲ್ಲ ಎಂದರು

**ರಾಹುಲ್ ಹೇಳಿಕೆಗೆ ರಾಜನಾಥ್ ಸಿಂಗ್ ತಿರುಗೇಟು**

**ರೈತರು ಮತ್ತು ಸಾಮಾನ್ಯ ಜನರ ಸಂಕಷ್ಟ**

**ರಾಹುಲ್ ಗಾಂಧಿ ಅಸಮಾಧಾನ**

ರೈತರ ಸತತ ಪ್ರತಿಭಟನೆ ಮತ್ತು ಬೇಡಿಕೆಗಳ ನಡುವೆಯೂ ಬಜೆಟ್‌ನಲ್ಲಿ ಅವರಿಗೆ ಪೂರಕವಾದ ಸ್ಪಷ್ಟ ಯೋಜನೆಗಳಿಲ್ಲ ಎಂದು ರಾಹುಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಂದೆಡೆ ರೈತರು ಸಂಕಷ್ಟದಲ್ಲಿದ್ದಾರೆ, ಮತ್ತೊಂದೆಡೆ ಸಾಮಾನ್ಯ ಜನರ ಉಳಿತಾಯ ಪಾತಾಳಕ್ಕೆ ಕುಸಿಯುತ್ತಿದೆ. ಜಾಗತಿಕ ಆರ್ಥಿಕ ಆಘಾತಗಳು ಎದುರಿಗಿದ್ದರೂ ಸರ್ಕಾರ ಕುರುಡುತನ ಪ್ರದರ್ಶಿಸುತ್ತಿದೆ, ಎಂದು ವಾಗ್ದಾಳಿ ನಡೆಸಿದ್ದಾರೆ.

# ಬಂಗಾಳಿಗರಿಗೆ ಪೊಲೀಸ್ ಕಿರುಕುಳ' – ಸಿಎಂ ಮಮತಾ ಆಕ್ರೋಶ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಹಲವು ಕಾರಣಗಳಿಂದ ಹೊರಬಿದ್ದ ಮತದಾರರು ದೆಹಲಿಗೆ ಆಗಮಿಸಿದ್ದಾರೆ. ಇಲ್ಲಿನ ಬಂಗಾಳ ಭವನದಲ್ಲಿ ಅವರು ಉಳಿದ ವೇಳೆ ಅಲ್ಲಿಗೆ ಬಂದ ಪೊಲೀಸರ ವಿರುದ್ಧ ಸಿಎಂ ಮಮತಾ ಬ್ಯಾನರ್ಜಿ ಹರಿಹಾಯ್ದು, ಇದು ಕೇಂದ್ರದ ಒತ್ತಡ ಹೇರುವ ತಂತ್ರ ಎಂದು ಆರೋಪಿಸಿದ್ದಾರೆ.

ಎಸ್‌ಐಆರ್‌ನಿಂದಾಗಿ ಪಟ್ಟಿಯಲ್ಲಿ ಹೆಸರು ಕಳೆದುಕೊಂಡ ಜನರು ಚುನಾವಣಾ ಆಯೋಗಕ್ಕೆ ದೂರು ನೀಡಲು ಇಲ್ಲಿಗೆ ಬಂದಿದ್ದಾರೆ. ಆದರೆ, ದೆಹಲಿ ಪೊಲೀಸರು ಭದ್ರತೆ ನೀಡುವ ನೆಪದಲ್ಲಿ ಅವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು. ಎಸ್‌ಐಆರ್ ಕುರಿತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರೊಂದಿಗೆ ಸಿಎಂ ಮಮತಾ ಬ್ಯಾನರ್ಜಿ ಮಾತುಕತೆ



ನಡೆಸಲಿದ್ದಾರೆ. ಅದಕ್ಕೂ ಮೊದಲು, ಬಂಗಾಳ ಭವನದ ಮುಂದೆ ಈ ಹೈಡ್ರಾಮಾ ನಡೆದಿದೆ.

ಪೊಲೀಸರು, ಬಂಗಾಳ ಭವನದೊಳಗೆ ಬಂದಿದ್ದಾರೆ ಎಂಬ ಮಾಹಿತಿ ಪಡೆದ ಮಮತಾ, ತಕ್ಷಣವೇ ದಕ್ಷಿಣ ಅವೆನ್ಯೂದಲ್ಲಿರುವ ತಮ್ಮ ಸಂಸದ ನಿವಾಸದಿಂದ ಹೊರಟು ತೃಣಮೂಲ ಕಾಂಗ್ರೆಸ್ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರೊಂದಿಗೆ ಬಂದರು. ಈ ವೇಳೆ ಅಲ್ಲಿದ್ದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿಯಿಂದ ಹೊರಬಿದ್ದ ಜನರು ನ್ಯಾಯ ಕೋರಿ ಚುನಾವಣಾ ಆಯೋಗದ ಮುಂದೆ ಮನವಿ ಮಾಡಲು ಬಂದಿದ್ದಾರೆ. ಆದರೆ, ಕೇಂದ್ರ ಸರ್ಕಾರ ಅವರ ಮೇಲೆ ಒತ್ತಡ ಹೇರಲು ಪೊಲೀಸರನ್ನು ಕಳುಹಿಸಿದೆ ಎಂದು ಆರೋಪಿಸಿದರು.ಬಂಗಾಳದ ಜನರ ಮೇಲಿನ ನಿಮ್ಮ ದಬ್ಬಾಳಿಕೆಯನ್ನು ಸಹಿಸುವುದಿಲ್ಲ. ಇದರ ವಿರುದ್ಧ ನಾನು ಮತ್ತು ನನ್ನ ಪಕ್ಷ ಹೋರಾಟ ನಡೆಸಲಿದೆ. ಬಂಗಾಳದ ಪ್ರತಿಷ್ಠೆಯನ್ನು ಹಾಳು ಮಾಡಲು ದೆಹಲಿ ಪೊಲೀಸರು ಈ ರೀತಿಯ ಕಿರುಕುಳ ನೀಡುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಕೇಂದ್ರ ಗೃಹ ಸಚಿವರು ಬಂಗಾಳಕ್ಕೆ ಬಂದಾಗ, ಅವರಿಗೆ ಕೆಂಪುಹಾಸಿನ ಸ್ವಾಗತ ಸಿಗುತ್ತದೆ. ಆದರೆ, ಬಂಗಾಳದ ಜನರು ದೆಹಲಿಗೆ ಬಂದರೆ ಬೆದರಿಸಲಾಗುತ್ತಿದೆ. ಅವರು ಇಲ್ಲಿ ಪ್ರತಿಭಟಿಸಲು ಬಂದಿಲ್ಲ.

## ಇಂದು ಪತ್ರಿಕಾಗೋಷ್ಠಿ

**ಈ ಹೈಡ್ರಾಮಾದ ಬಳಿಕ ಇಂದು ಮಧ್ಯಾಹ್ನ 3 ಗಂಟೆಗೆ ಬಂಗಾಳ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಲಾಗುವುದು. ಮತದಾರರ ಪಟ್ಟಿಯಿಂದ ಹೊರಬಿದ್ದ ಜನರು ಮಾಧ್ಯಮಗಳ ಮುಂದೆ ತಮ್ಮ ಅಳಲು ತೋಡಿಕೊಳ್ಳಲಿದ್ದಾರೆ.**

**ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಅಸಲಿ ಸತ್ಯ ಹೊರಬರುತ್ತದೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದರು.**

# ಶಾಂತಿ ಮಾತುಕತೆ ಘೋಷಣೆ ಬೆನ್ನಲ್ಲೇ ಉಕ್ರೇನ್‌ನ ಡ್ನಿಪ್ರೊ ನಗರದ ಮೇಲೆ ರಷ್ಯಾ ಡ್ರೋನ್ ದಾಳಿ; 12 ಜನರ ಸಾವು, ಹಲವರಿಗೆ ಗಾಯ

**ಕೀವ್:** ರಷ್ಯಾ ಮತ್ತು ಉಕ್ರೇನಿಯನ್ ನಿಯೋಗಗಳ ನಡುವಿನ ಮುಂದಿನ ಸುತ್ತಿನ ಶಾಂತಿ ಮಾತುಕತೆ ಬುಧವಾರ ಮತ್ತು ನಡೆಯಲಿದೆ ಎಂಬ ಘೋಷಣೆ ಬೆನ್ನಲ್ಲೇ ಉಕ್ರೇನ್‌ನ ಡ್ನಿಪ್ರೊ ನಗರದ ಮೇಲೆ ರಷ್ಯಾ ದಾಳಿ ಮಾಡಿದೆ. ಈ ಡ್ರೋನ್ ದಾಳಿ ಗಣಿ ಕಾರ್ಮಿಕರನ್ನು ಸಾಗಿಸುತ್ತಿದ್ದ ಬಸ್‌ಗೆ ಡಿಕ್ಕಿ ಹೊಡೆದು ಕನಿಷ್ಠ 12ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ತಿಳಿಸಿದ್ದಾರೆ.

ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ ಎಂದು ತುರ್ತು ಸೇವೆ ತಿಳಿಸಿದೆ. ಉಕ್ರೇನ್‌ನ ಅತಿದೊಡ್ಡ ಖಾಸಗಿ ಇಂಧನ ಕಂಪನಿ ಡಿಟಿಇಕೆ ಆಗಿದ್ದು, , ಡ್ನಿಪ್ರೊಪೆಟ್ರೋವ್ಸ್ಕ್ ಪ್ರದೇಶದಲ್ಲಿ ಡಿಟಿಇಕೆ ಗಣಿಗಳ ಮೇಲೆ ದೊಡ್ಡ ಪ್ರಮಾಣದ ಭಯೋತ್ಪಾದಕ ದಾಳಿಯನ್ನು ರಷ್ಯಾ ನಡೆಸಿದೆ ಎಂದು ಆರೋಪಿಸಿದೆ

ಡ್ನಿಪ್ರೊಪೆಟ್ರೋವ್ಸ್ಕ್ ಪ್ರದೇಶದಲ್ಲಿ ಸ್ಥಳಾಂತರದ ಬಳಿಕ ಗಣಿಗಾರರನ್ನು ಸಾಗಿಸುತ್ತಿದ್ದ ಕಂಪನಿಯ ಬಸ್ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ಕಂಪನಿ ತಿಳಿಸಿದೆ ಎಂದು ಟೆಲಿಗ್ರಾಂ ವರದಿ ಮಾಡಿದೆ.ಉಕ್ರೇನಿಯನ್ ರಾಜಧಾನಿ ಮತ್ತು ಇತರ ನಗರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಕ್ರೆಮ್ಲಿನ್ (ರಷ್ಯಾ) ಒಪ್ಪಿಕೊಂಡಿದೆ ಎಂಬ ಇತ್ತೀಚೆಗೆ ಅಮೆರಿಕ ಅಧ್ಯಕ್ಷರ ಹೇಳಿಕೆ ಬೆನ್ನಲ್ಲೇ ಈ ದಾಳಿ ನಡೆದಿದೆ. ಈ ಪ್ರದೇಶವು ತೀವ್ರ ಕನಿಷ್ಠ ತಾಪಮಾನದಿಂದ ಬಳಲುತ್ತಿದ್ದು, ಇದು ಉಕ್ರೇನಿಯನ್ನರಿಗೆ ವ್ಯಾಪಕ ಸಂಕಷ್ಟವನ್ನು ತಂದೊಡ್ಡಿದೆ.

ರಷ್ಯಾದ ಈ ಡ್ರೋನ್ ದಾಳಿ ದಕ್ಷಿಣ ಉಕ್ರೇನ್‌ನ ಜಪೋರಿಝಿಯಾದಲ್ಲಿ ಆಸ್ಪತ್ರೆಯಲ್ಲಿ 6 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ತುರ್ತುಸೇವೆ ವರದಿ ಮಾಡಿದೆ. ಈ ನಡುವೆ ಸಂಪೂರ್ಣ



ಯುದ್ಧ ನಿಲ್ಲಿಸುವ ಗುರಿಯೊಂದಿಗೆ ಮಾತುಕತೆ ನಡೆಸಲು ರಷ್ಯಾ, ಉಕ್ರೇನ್ ಮತ್ತು ಅಮೆರಿಕದ ರಾಯಭಾರಿಗಳು ಅಬುಧಾಬಿಯಲ್ಲಿ ಭೇಟಿಯಾಗುವ ನಿರೀಕ್ಷೆಯಿತ್ತು. ಆದರೆ, ಇದನ್ನು ಮುಂದಿನವಾರಕ್ಕೆ ಮುಂದೂಡಲಾಗಿದೆ ಎಂದು ಝೆಲೆನ್ಸ್ಕಿ ಘೋಷಿಸಿದ್ದಾರೆ.

ಮಾತುಕತೆಯ ತಂಡದೊಂದಿಗೆ ಈಗಷ್ಟೇ ಲಭ್ಯವಾದ ಮಾಹಿತಿ ಪ್ರಕಾರ, ಮುಂದಿನ ತ್ರಿಪಕ್ಷೀಯ ಸಭೆಗಳನ್ನು ಫೆಬ್ರವರಿ 4 ಮತ್ತು 5 ರಂದು ಅಬುಧಾಬಿಯಲ್ಲಿ ನಡೆಸಲಾಗುವುದು. ಉಕ್ರೇನ್ ಮಹತ್ವದ ಮಾತುಕತೆಗಳಿಗೆ ಸಿದ್ಧವಾಗಿದೆ. ಯುದ್ಧದ ಅಂತ್ಯಕ್ಕೆ ನಮ್ಮನ್ನು ಹತ್ತಿರವಾಗುವ ಫಲಿತಾಂಶದಲ್ಲಿ ನಾವು ಆಸಕ್ತಿ ಹೊಂದಿದ್ದೇವೆ ಎಂದು ಅವರು ತಿಳಿಸಿದ್ದರು.

ಈ ಸಭೆ ಮುಂದೂಡಿಕೆ ಕುರಿತು ಅಮೆರಿಕ ಅಥವಾ ರಷ್ಯಾದ ಅಧಿಕಾರಿಗಳಿಂದ ತಕ್ಷಣದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ರಷ್ಯಾದ ಉನ್ನತ ರಾಯಭಾರಿ ಕಿರಿಲ್ ಡಿಮಿಟ್ರಿವ್ ಅವರು ಅಮೆರಿಕದ ಶಾಂತಿಪಾಲನಾ ನಿಯೋಗದೊಂದಿಗೆ ರಚನಾತ್ಮಕ ಸಭೆ ನಡೆಸಿದ್ದರು.

## ಉಕ್ರೇನಿಯನ್ ಹೆರಿಗೆ ಆಸ್ಪತ್ರೆಯ ಮೇಲೆ ಡ್ರೋನ್‌ಗಳ ದಾಳಿ

**ರಷ್ಯಾದ ದಾಳಿ ಡ್ರೋನ್‌ಗಳು ದಕ್ಷಿಣ ಉಕ್ರೇನ್‌ನ ಹೆರಿಗೆ ಆಸ್ಪತ್ರೆಯ ಮೇಲೆ ದಾಳಿ ಮಾಡಿವೆ ಎಂದು ಉಕ್ರೇನಿಯನ್ ತುರ್ತು ಸೇವೆ ವರದಿ ಮಾಡಿದೆ. ಟೆಲಿಗ್ರಾಮ್ ಪೋಸ್ಟ್‌ನಲ್ಲಿ, ದಾಳಿಯಿಂದ ಜಪೋರಿಝಿಯಾದ ಆಸ್ಪತ್ರೆಯಲ್ಲಿ ಮೂವರು ಮಹಿಳೆಯರು ಗಾಯಗೊಂಡಿದ್ದಾರೆ ಮತ್ತು ಸ್ತ್ರೀರೋಗ ಆಸ್ಪತ್ರೆಯ ಸ್ವಾಗತ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನಂತರ ಅದನ್ನು ನಂದಿಸಲಾಯಿತು ಎಂದು ಅದು ಹೇಳಿದೆ. ಗಾಯಗೊಂಡವರ ಸಂಖ್ಯೆ ಆರಕ್ಕೆ ಏರಿದೆ ಎಂದು ಪ್ರಾದೇಶಿಕ ಆಡಳಿತ ಮುಖ್ಯಸ್ಥ ಇವಾನ್ ಫೆಡೋರೊವ್ ನಂತರ ತಿಳಿಸಿದ್ದಾರೆ. ವಾರ, ಕ್ರೆಮ್ಲಿನ್, ಕೀವ್‌ನಲ್ಲಿ ನಡೆಯಲಿರುವ ಮುಷ್ಕರವನ್ನು ತಡೆಹಿಡಿಯಲು ಒಪ್ಪಿಕೊಂಡಿತು ಎಂದು ದೃಢಪಡಿಸಿತು, ಯಾವುದೇ ವಿವರಗಳನ್ನು ಬಹಿರಂಗಪಡಿಸಲು ನಿರಾಕರಿಸಿತು, ಇದರಿಂದಾಗಿ ಸಮಾಧಾನಕರ ಹೆಜ್ಜೆ ನಿಜವಾಗಿಯೂ ನಡೆದಿದೆಯೇ ಎಂಬುದರ ಸ್ವತಂತ್ರ ಮೌಲ್ಯಮಾಪನಕ್ಕೆ ಕಷ್ಟವಾಯಿತು.**

# ಕೃಷಿ ತ್ಯಾಜ್ಯ ಸುಡುವಿಕೆಗೆ ಪರಿಹಾರ ಬಯೋಚಾರ್ ಪದ್ಧತಿ ಪರಿಹಾರವಾಗಬಲ್ಲದು

**ಹೈದರಾಬಾದ್:** ಕೊಯ್ಲಿನ ಬಳಿಕದ ಕೃಷಿ ತ್ಯಾಜ್ಯಗಳ ಸುಡುವಿಕೆ ವಾಯು ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಸೂಕ್ಷ್ಮ ಜೀವಿ ಮತ್ತು ಕೀಟಗಳನ್ನು ನಾಶ ಮಾಡಲು ಇದು ಸಹಾಯಕವಾದರೂ, ನಿರಂತರವಾಗಿ ಸುಡುವಿಕೆಯು ಮಣ್ಣಿನಲ್ಲಿನ ಇಂಗಾಲದ ಅಂಶವನ್ನು ಕಡಿಮೆ ಮಾಡುವ ಜೊತೆಗೆ ಭೂಮಿ ನೀರನ್ನು ಹಿಡಿದಿರುವ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ. ಇದಕ್ಕೆ ಬಯೋಚಾರ್ ಪದ್ಧತಿ ಪರಿಹಾರವಾಗಬಲ್ಲದು ಎಂದು ತಜ್ಞರು 22ಅಭಿಪ್ರಾಯ ಪಟ್ಟಿದ್ದಾರೆ.ಭತ್ತದ ಹುಲ್ಲು, ಎಳ್ಳು, ಹತ್ತಿ ಕಾಂಡಗಳು, ತೊಗರಿ, ಮೆಣಸಿನಕಾಯಿ ಬೆಳೆಗಳ ತ್ಯಾಜ್ಯಗಳ ಸುಡುವಿಕೆಯಲ್ಲಿ ಈ ಬಯೋಚಾರ್ ಮಾದರಿ ಬಳಕೆ ಮಾಡಬಹುದು. ಇದರಿಂದ ಸಾವಯವ ಇಂಗಾಲ ವಾತಾವರಣಕ್ಕೆ ಸೇರುವ ಜೊತೆಗೆ ಮಣ್ಣಿನ ರಚನೆಯನ್ನು ಸುಧಾರಿಸಿ ಅದನ್ನು ಸಮೃದ್ಧಗೊಳಿಸುತ್ತದೆ. ಭತ್ತದ ಗದ್ದೆಗಳಿಗೆ ಅನ್ವಯಿಸಿದಾಗ, ಬಯೋಚಾರ್ ಮಾದರಿ ನೀರಿನ ಅಡಿ ಮಣ್ಣಿನಲ್ಲಿ ಆಮ್ಲಜನಕದ ಲಭ್ಯತೆಯನ್ನು ಹೆಚ್ಚಿಸುತ್ತದೆ. ಮೀಥೇನ್ ಮತ್ತು ಇತರ ಹಸಿರುಮನೆ ಅನಿಲಗಳನ್ನು ಸಹ ಹೀರಿಕೊಳ್ಳುತ್ತದೆ.

**ಹೇಗೆ ತಯಾರಿಸುವುದು ಈ ಬಯೋಚಾರ್:** ಕಬ್ಬಿಣದ ಡ್ರಮ್ ಬಳಸಿ ಬಯೋಚಾರ್ ತಯಾರಿಸಬಹುದು. ಡ್ರಮ್‌ನ ಕೆಳಭಾಗದಲ್ಲಿ ರಂಧ್ರಗಳನ್ನು ಮಾಡಿ. ಒಣಗಿದ ಬೆಳೆ ತ್ಯಾಜ್ಯಗಳನ್ನು 20 ರಿಂದ 25 ಸೆಂ. ಮೀ. ತುಂಡುಗಳಾಗಿ ಕತ್ತರಿಸಿ, ಮಧ್ಯದಲ್ಲಿ ಜಾಗಬಿಡದೇ ಡ್ರಮ್‌ನಲ್ಲಿ ಬಿಗಿಯಾಗಿ ತುಂಬಿಸಲಾಗುತ್ತದೆ.

# 132 ವರ್ಷದ ಹಿಂದಿನ ಉಯಿಲಿನಲ್ಲಿ ಬರೆದಿಟ್ಟ ಮಾತನ್ನು ಈಗಲೂ ಪಾಲಿಸುತ್ತಿರುವ ಕುಟುಂಬಸ್ಥರು

**ಬಿಕಾನೆರ್ :** ಹಣ, ಆಸ್ತಿಯು ಕುಟುಂಬದ ಈ ಸದಸ್ಯರಿಗೆ ಇಷ್ಟು ಸೇರಬೇಕು ಎಂದು ಕುಟುಂಬದ ಹಿರಿಯರು ಉಯಿಲು ಬರೆದಿಡುವುದನ್ನು ನಾವು ನೋಡಿದ್ದೇವೆ. ಆದರೆ, ಇಲ್ಲೊಬ್ಬರು, ಬಡ ಮತ್ತು ನಿರ್ಗತಿಕ ಹೆಣ್ಣುಮಕ್ಕಳಿಗೆ ಸಾಮೂಹಿಕ ವಿವಾಹ' ನಡೆಸಿಕೊಡಬೇಕು ಎಂದು ಉಯಿಲು ಬರೆದಿಟ್ಟಿದ್ದಾರೆ. ಇದನ್ನು ಆ ಕುಟುಂಬವು 132 ವರ್ಷಗಳಿಂದ ಚಾಚೂತಪ್ಪದೇ ನಡೆಸಿಕೊಂಡು ಬರುತ್ತಿದೆ.

ಇದೇನಿದುಇಂತಹ ಉಯಿಲು ಕೂಡ ಬರೆದಿಡುತ್ತಾರಾ ಅಂತ ನಿಮಗೆ ಅನ್ನಿಸಬಹುದು. ರಾಜಸ್ಥಾನದ ಬಿಕಾನೆರ್‌ನ ಮೇಘರಾಜ್ ಬಿನ್ನಾನಿ ಕುಟುಂಬವು ತಮ್ಮ ಪೂರ್ವಜರು ಬರೆದಿಟ್ಟ ಉಯಿಲಿನ ಪ್ರಕಾರ, ಈಗಲೂ ಬಡ ಹೆಣ್ಣುಮಕ್ಕಳಿಗೆ ತಮ್ಮ ನೇತೃತ್ವದಲ್ಲಿ ವಿವಾಹ ಮಾಡಿಸಿಕೊಡುತ್ತಿದ್ದಾರೆ. ಈ ಮೂಲಕ ಸಾಮಾಜಿಕ ಬದ್ಧತೆಯ ಜೊತೆಗೆ, ಹಿರಿಯರ ಸದಾಶಯವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ.

**ವಂಶಪಾರಂಪರ್ಯವಾಗಿ ನಡೆದು ಬಂದ ಸಂಪ್ರದಾಯ:** ಶತಮಾನಗಳ ಹಿಂದೆ ಬರೆದಿಟ್ಟ ಉಯಿಲಿನಂತೆ ಕುಟುಂಬ ಸದಸ್ಯರು ವಂಶಪಾರಂಪರ್ಯವಾಗಿ ಇದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮೊದಲು ಮೇಘರಾಜ್ ಬಿನ್ನಾನಿ ಅವರು ಇದನ್ನು ನಡೆಸಿಕೊಟ್ಟರು ಬಳಿಕ ಅವರ ಮಗ ಬುಲಾಕಿ ದಾಸ್ ಬಿನ್ನಾನಿ ಅವರು ಮುಂದುವರಿಸಿದರು. ಇವರು 2008 ರಲ್ಲಿ ಮೃತಪಟ್ಟರು.

ಇದಕ್ಕೂ ಮೊದಲು, ಉಯಿಲಿನ ನಿಯಮವನ್ನು ಪಾಲಿಸಿಕೊಂಡು ಹೋಗುವಂತೆ ಮೂವರು ಪುತ್ರರಿಗೆ ಸೂಚಿಸಿದರು. ಇದೀಗ, ದಾಸ್‌ರ ಮಕ್ಕಳು ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದ್ದಾರೆ.

# ಗ್ರ್ಯಾಮಿ ಪ್ರಶಸ್ತಿ ಸಮಾರಂಭದಲ್ಲಿ ರಿಕ್ಕಿ ಕೇಜ್

**ಲಾಸ್ ಏಂಜಲೀಸ್ :** ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ ಸಮಾರಂಭದಲ್ಲಿ ಸತತ 11ನೇ ಬಾರಿಗೆ ಭಾರತೀಯ ಸಂಗೀತ ಸಂಯೋಜಕ ರಿಕಿ ಕೇಜ್ ಕಾಣಿಸಿಕೊಂಡಿದ್ದಾರೆ. ನಾಲ್ಕು ಬಾರಿ ನಾಮಿನೇಷನ್ ಹಾಗೂ ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ ಪಡೆದಿರುವ ಕೇಜ್, ಸಾಂಸ್ಕೃತಿಕ ಮತ್ತು ಪರಿಸರ ಪ್ರೇಮವನ್ನು ತೋರಿಸುವ ಉಡುಪಿನೊಂದಿಗೆ ಗಮನ ಸೆಳೆದರು. ಕಸೂತಿ ಕಲೆಯ ಏಷ್ಯನ್ ಸಿಂಹ ಅಲಂಕರಿಸಲ್ಪಟ್ಟ, ಸೂಕ್ಷ್ಮ ಕಸ್ತೂರಿಯ ಕಪ್ಪು ಅಚ್ಕನ್ ಧರಿಸಿದ್ದರು. ಅಚ್ಕನ್‌ಗೆ ಪೂರಕವಾಗಿ, ಸಾಂಪ್ರದಾಯಿಕ ಚಿನ್ನದ ಬಣ್ಣದ ಧೋತಿ ಧರಿಸಿದ್ದರು. ರಾಜಸ್ಥಾನದ ಬಂಜಾರ ಮಹಿಳೆಯೊಬ್ಬರು ಉಡುಗೊರೆಯಾಗಿ ನೀಡಿದ್ದ ಕಿವಿಯೋಲೆ ಆಭರಣಗಳು ಇವರಿಗೆ ಮತ್ತಷ್ಟು ಮೆರುಗು ನೀಡಿದವು. ಕಿವಿಯೋಲೆ ಜೊತೆಗೆ ಬ್ರೆಸ್ಲೆಟ್, ಕಾಲಿನ ಕಡಗಗಳ ಅವರ ಆಭರಣ ಸಾಂಪ್ರದಾಯಿಕತೆಯ ಸೊಬಗನ್ನು ಹೆಚ್ಚಿಸಿತು. ಇದರ ಮೂಲಕ ತಾವು ಶೀಘ್ರದಲ್ಲೇ ಹೊಸ ಆಭರಣ ಶ್ರೇಣಿಯನ್ನು ಪ್ರಾರಂಭಿಸುವುದಾಗಿ ಕೇಜ್ ಇದೇ ವೇಳೆ ಬಹಿರಂಗಪಡಿಸಿದರು.

# ಫೆಡ್ ಮುಂದಿನ ಅಧ್ಯಕ್ಷರಾಗಿ ವಾರ್ಷ್ ಹೆಸರು ಘೋಷಿಸುತ್ತಿದ್ದಂತೆ ಇಳಿಕೆ ಕಂಡ ಚಿನ್ನ

**ವಾಷಿಂಗ್ಟನ್, ಅಮೆರಿಕ:** ಅಮೆರಿಕದ ಫೆಡರಲ್ ರಿಸರ್ವ್‌ನ ಮುಂದಿನ ಅಧ್ಯಕ್ಷರಾಗಿ ಕೆವಿನ್ ವಾರ್ಷ್ ಅವರನ್ನು ನಾಮನಿರ್ದೇಶನ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ದೃಢಪಡಿಸಿದ್ದಾರೆ. ಸದ್ಯ ಟ್ರಂಪ್ ಮತ್ತು ಈಗಿನ ಫೆಡ್‌ಅಧ್ಯಕ್ಷ ಜೆರೋಮ್ ಪೊವೆಲ್ ಅವರ ನಡುವಿನ ತಿಕ್ಕಾಟದ ಹಿನ್ನಲೆ ಈ ಘಟನೆಯನ್ನು ಸೂಕ್ಷ್ಮವಾಗಿ ನೋಡಲಾಗಿದೆ. ಟ್ರಂಪ್ ಈ ಘೋಷಣೆ ಬೆನ್ನಲ್ಲೇ ಚಿನ್ನ ಮತ್ತು ಬೆಳ್ಳಿ ಮಾರುಕಟ್ಟೆಗಳಲ್ಲಿ ಗಮನಾರ್ಹ ಕುಸಿತ ಕಂಡಿವೆ. ದಾಖಲೆಯ ಗರಿಷ್ಠ ಏರಿಕೆ ಮತ್ತು ಮೌಲ್ಯಮಾಪನಗಳ ಬಳಿಕ ಚಿನ್ನ ಮತ್ತು ಬೆಳ್ಳಿಯ ಬೆಲೆಯಲ್ಲಿ ಕ್ರಮವಾಗಿ ಶೇ9 ಮತ್ತು ಶೇ28ರಷ್ಟು ಕುಸಿತ ಕಂಡಿದೆ. ಹಾಗೇ ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಪ್ರಮುಖ ಸೂಚ್ಯಂಕಗಳು ಸಾಧಾರಣ ನಷ್ಟದ ವರದಿ ಮಾಡಿವೆ. ಆದಾಗ್ಯೂ, ಫೆಡ್‌ನಲ್ಲಿ ಟ್ರಂಪ್ ಹಸ್ತಕ್ಷೇಪದ ಬಗ್ಗೆ ಕಳವಳ ವ್ಯಕ್ತವಾಗಿದೆ.

# ಬಲೂಚಿಸ್ತಾನದಾದ್ಯಂತ ಸರಣಿ ದಾಳಿ

**ಇಸ್ಲಾಮಾಬಾದ್ :** ಬಲೂಚಿಸ್ತಾನದ ಹಲವು ಸ್ಥಳಗಳಲ್ಲಿ ನಡೆದ ಸಂಘಟಿತ ದಾಳಿಗಳಿಗೆ ಪ್ರತಿಕ್ರಿಯೆಯಾಗಿ ನಡೆಸಲಾಗುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ಈವರೆಗೆ 92 ಉಗ್ರರನ್ನು ಕೊಂದಿದ್ದೇವೆ ಎಂದು ಪಾಕಿಸ್ತಾನದ ಭದ್ರತಾ ಪಡೆಗಳು ಹೇಳಿಕೊಂಡಿವೆ. ಘರ್ಷಣೆಯಲ್ಲಿ 15 ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ದೇಶದ ಮಿಲಿಟರಿ ಮಾಧ್ಯಮ ವಿಭಾಗ, ಇಂಟರ್ - ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ ತಿಳಿಸಿದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಕ್ವೆಟ್ಟಾ, ಮಾಸ್ತುಂಗ್, ನುಷ್ಕಿ, ದಲ್ಬಂದಿನ್, ಖರನ್, ಪಂಜ್‌ಗುರ್, ಟಂಪ್, ಗ್ವಾದರ್ ಮತ್ತು ಪಾಸ್ನಿ ಸೇರಿದಂತೆ ಇತರೆಡೆ ನಾಗರಿಕರು ಮತ್ತು ಭದ್ರತಾ ಪಡೆಗಳನ್ನು ಗುರಿಯಾಗಿಸಿಕೊಂಡು ಉಗ್ರರು ದಾಳಿ ನಡೆಸಿದ್ದಾರೆ ಎಂದು MTPS ಹೇಳಿಕೆ ಬಿಡುಗಡೆ ಮಾಡಿದೆ. ಕಳೆದ ಎರಡು ದಿನಗಳಿಂದ ಭಯೋತ್ಪಾದಕರು ನಾಗರಿಕರ ಮೇಲೆ ದಾಳಿ ನಡೆಸುತ್ತಿದ್ದು, ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳು ವಿವಿಧ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ಭಯೋತ್ಪಾದಕರನ್ನು ಹತ್ಯೆ ಮಾಡಿರುವ ವರದಿಯಾಗಿದೆ. ಪಂಜ್‌ಗುರ್ ಮತ್ತು ಹರ್ನೈ ಸೇರಿದಂತೆ ವಿವಿಧೆಡೆ ನಡೆದ ದಾಳಿಯಲ್ಲಿ ಒಟ್ಟು 57 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ದಾಳಿ ಮುಂದುವರೆದಿತ್ತು.

ಬಲೂಚಿಸ್ತಾನದ ಪ್ರಮುಖ ಕೇಂದ್ರಗಳಾದ ಗ್ವಾದರ್ ಮತ್ತು ಖರನ್ ಜಿಲ್ಲೆಗಳಲ್ಲಿ ನಡೆದ ದಾಳಿಯಲ್ಲಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಸೇರಿದಂತೆ 18 ನಾಗರಿಕರು ಸಾವನ್ನಪ್ಪಿದ್ದಾರೆ.

ಸಾರ್ವಜನಿಕ ಜೀವನ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಅಡ್ಡಿಪಡಿಸುವ ಗುರಿಯಾಗಿ ಈ ದಾಳಿಗಳನ್ನು ನಡೆಸಲಾಗುತ್ತಿದೆ. ಸೇನೆಯ ಪ್ರತಿ ದಾಳಿಯಿಂದ ಮೂವರು ಆತ್ಮಹತ್ಯಾ ದಾಳಿಕೋರರು ಸೇರಿದಂತೆ ಬಲೂಚಿಸ್ತಾನದಲ್ಲಿ ಕಳೆದ ಎರಡು ದಿನಗಳಲ್ಲಿ ಕೊಲ್ಲಲ್ಪಟ್ಟ ಒಟ್ಟು ಉಗ್ರರ ಸಂಖ್ಯೆ 133ಕ್ಕೆ ತಲುಪಿದೆ. ಪ್ರಾಂತ್ಯದ ರಾಜಧಾನಿ ಕ್ವೆಟ್ಟಾ



ಸೇರಿದಂತೆ ಪ್ರಮುಖ ನಗರಗಳಲ್ಲಿ ಸ್ಥಿತಿ ಅತ್ಯಂತ ಗಂಭೀರವಾಗಿದ್ದು, ಭದ್ರತಾ ಪಡೆ ನಿಯಂತ್ರಣ ಸಾಧಿಸಲು ಹರಸಾಹಸ ಪಡುತ್ತಿದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.ಹಲಭೆ ಪೀಡಿತ ಪ್ರದೇಶಗಳಲ್ಲಿ ಕಾರ್ಯಾಚರಣೆ ಮುಂದುವರೆದಿದ್ದು, ದಾಳಿಗೆ ಕಾರಣರಾದವರನ್ನು ಸೆರೆ ಹಿಡಿಯುವ ಕೆಲಸವಾಗುತ್ತಿದೆ. ಗಲಭೆ ಸೃಷ್ಟಿಸಿದವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಮಿಲಿಟರಿ ತಿಳಿಸಿದೆ ಎಂದೂ ವರದಿಯಲ್ಲಿ ಉಲ್ಲೇಖಿಸಿದೆ. ಈ ನಡುವೆ, ಬಲೂಚಿಸ್ತಾನ ಸರ್ಕಾರದ ವಕ್ತಾರ ಶಾಹಿದ್ ರಿಂಡ್, ಎಕ್ಸ್‌ನಲ್ಲಿ ಪೋಸ್ಟ್ ಮಾಡಿಕೊಂಡಿದ್ದು, ''ಪಾಕಿಸ್ತಾನಿ ಪೊಲೀಸರು ಮತ್ತು ಫ್ರಾಂಟಿಯರ್ ಕಾರ್ಪ್ಸ್ (ಎಫ್‌ಸಿ) ಸಕಾಲಿಕ ಕ್ರಮದಿಂದಾಗಿ ಹಲವು ಸ್ಥಳಗಳಲ್ಲಿ ನಡೆದ ದಾಳಿಗಳನ್ನು ವಿಫಲಗೊಳಿಸಲಾಗಿದೆ. ಎಂದು ಹೇಳಿದ್ದಾರೆ.

# ಸರ್ಕಾರಿ ಶಾಲೆ H8 ಫೆ.6ರಂದು ರಿಲೀಸ್

ಕಿರುತೆರೆ ಮಾತ್ರವಲ್ಲದೇ ಹಿರಿತೆರೆಯಲ್ಲೂ ಗಿಲ್ಲಿ ನಟ ಅವರು ಆಕ್ಟೀವ್ ಆಗಿದ್ದಾರೆ. ಅವರಿಗೆ ಬೇಡಿಕೆ ಹೆಚ್ಚಿದೆ. ಗಿಲ್ಲಿ ಅಭಿನಯಿಸಿದ 'ಸರ್ಕಾರಿ ಶಾಲೆ-H8' ಬಿಡುಗಡೆ ಆಗಲಿದೆ. ಶೀರ್ಷಿಕೆಯಿಂದಲೇ ಈ ಸಿನಿಮಾ ಕೌತುಕ ಮೂಡಿಸಿದೆ. ಫೆ.6ರಂದು 'ಸರ್ಕಾರಿ ಶಾಲೆ-H8' ಚಿತ್ರ ತೆರೆಕಾಣಲಿದೆ. ಗುಣ ಹರಿಯಬ್ಬೆ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.



ಹಾಸ್ಯ ಕಲಾವಿದ ಗಿಲ್ಲಿ ನಟ ಅವರು ಬಿಗ್ ಬಾಸ್ ಶೋನಿಂದ ಅಪಾರ ಜನಪ್ರಿಯತೆ ಪಡೆದಿದ್ದಾರೆ. ಬಿಗ್ ಬಾಸ್ ಟ್ರೋಫಿ ವಿನ್ ಆದ ಬಳಿಕ ಹಲವು ಊರುಗಳಲ್ಲಿ ಮೆರವಣಿಗೆ ಮಾಡಿದ್ದೇ ಅವರ ಜನಪ್ರಿಯತೆಗೆ ಸಾಕ್ಷಿ ಆಗಿದೆ. ಬಿಗ್ ಬಾಸ್‌ನಲ್ಲಿ ಸ್ಪರ್ಧಿಸುವುದಕ್ಕೂ ಮುನ್ನವೇ ಅವರು ಒಂದಷ್ಟು ಸಿನಿಮಾಗಳಲ್ಲಿ ನಟಿಸಿದ್ದರು. ಆ ಪೈಕಿ 'ಸರ್ಕಾರಿ ಶಾಲೆ H8' ಕೂಡ ಇದೆ. ಈ ಸಿನಿಮಾ ಈಗ ಬಿಡುಗಡೆಗೆ ಸಜ್ಜಾಗಿದೆ. ಫೆಬ್ರವರಿಯಿಂದ 6ರಂದು ಈ ಚಿತ್ರ ರಿಲೀಸ್ ಆಗಲಿದೆ. ಇದರಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಕಹಾನಿ ಇದೆ. 'ಸರ್ಕಾರಿ ಶಾಲೆ H8' ಸಿನಿಮಾದಲ್ಲಿ ಗಿಲ್ಲಿ ನಟ ಮಾತ್ರವಲ್ಲದೇ ಗುಣ ಹರಿಯಬ್ಬೆ, ಮೇಘಶ್ರೀ, ಜನಪದ ಕಲಾವಿದ ಮೋಹನ್, ಸುಚೇಂದ್ರ ಪ್ರಸಾದ್ ಮುಂತಾದವರು ಅಭಿನಯಿಸಿದ್ದಾರೆ.

ಗುಣ ಹರಿಯಬ್ಬೆ ಅವರು ಕಥೆ, ಚಿತ್ರಕಥೆ ಬರೆದು ಈ ಸಿನಿಮಾಗೆ ನಿರ್ದೇಶನ ಮಾಡಿದ್ದಾರೆ. 'ಗಿರಿಚಂದ್ರ ಪ್ರೊಡಕ್ಷನ್ಸ್' ಮೂಲಕ ಈ ಚಿತ್ರ ನಿರ್ಮಾಣ ಆಗಿದೆ. ತೇಜಸ್ವಿನಿ ಎಸ್. ಅವರು ಬಂಡವಾಳ ಹೂಡಿದ್ದಾರೆ.

ಕೆಲವು ಕಾರಣಗಳಿಂದಾಗಿ 'ಸರ್ಕಾರಿ ಶಾಲೆ H8' ಸಿನಿಮಾ ಮೇಲೆ ನಿರೀಕ್ಷೆ ಇದೆ. ಟೈಟಲ್ ಗಮನ ಸೆಳೆದಿದೆ. ಗಿಲ್ಲಿ ನಟ ಅಭಿನಯದ ಸಿನಿಮಾ ಆದ್ದರಿಂದ ಅವರ ಅಭಿಮಾನಿಗಳಲ್ಲಿ ಹೈಪ್ ಇದೆ. ಈ ಸಿನಿಮಾದ ಕಥೆಯು ಒಂದು ವಿಗ್ರಹದ ಸುತ್ತ ಸುತ್ತಲಿದೆಯಂತೆ.

ಈ ಸಿನಿಮಾಗೆ ಬೆಂಗಳೂರು, ಚಿತ್ರದುರ್ಗ, ಶಿರಾ, ಶಿವಮೊಗ್ಗ ಸುತ್ತಮುತ್ತ ಶೂಟಿಂಗ್ ಮಾಡಲಾಗಿದೆ. 'ಸರ್ಕಾರಿ ಶಾಲೆ H8' ಸಿನಿಮಾಗೆ ವಿಜೇತ್ ಮಂಜಯ್ಯ ಅವರ ಸಂಗೀತ ನಿರ್ದೇಶನ ಮಾಡಿದ್ದಾರೆ. 3 ಹಾಡುಗಳು ಈ ಸಿನಿಮಾದಲ್ಲಿವೆ. ಕಾಮಿಡಿ ಸಿನಿಮಾಗಳ ಮೂಲಕ ಫೇಮಸ್ ಆದ ನಟ ಶರಣ್ ಮತ್ತು ಮೆಹಬೂಬ್ ಸಾಬ್ ಒಂದೊಂದು ಹಾಡನ್ನು ಹಾಡಿದ್ದಾರೆ. ನಾಗೇಂದ್ರ ಪ್ರಸಾದ್ ಅವರು ಸಾಹಿತ್ಯ ರಚಿಸಿದ್ದಾರೆ.



# ಟೆಂಟ್ ಹಾಕಿ ಮಲಗೋಣ

ಪ್ರಕಾಶ್ ರಾಜ್ ತಮ್ಮ ಟೊಯೋಟಾ ಹೈಲಕ್ಸ್ ಪಿಕಪ್ ಟ್ರಕ್ ಅನ್ನು ಕ್ಯಾಂಪಿಂಗ್‌ಗಾಗಿ ಮಾಡಿಫೈ ಮಾಡಿದ್ದಾರೆ. ಈ ವಿಶೇಷ ವಾಹನದಲ್ಲಿ ಟೆಂಟ್ ಹಾಕಿ ಮಲಗಲು ವ್ಯವಸ್ಥೆ ಮಾಡಲಾಗಿದ್ದು, ಆಫ್-ರೋಡ್ ಪ್ರವಾಸಗಳಿಗೆ ಸೂಕ್ತವಾಗಿದೆ. ಅವರ ಈ ಆಕರ್ಷಕ ಮಾಡಿಫಿಕೇಷನ್ ವಾಹನವು ಈಗ ವೈರಲ್ ಆಗಿದೆ. ಸುಮಾರು 50 ಲಕ್ಷ ಬೆಲೆಯ ಈ ಟ್ರಕ್ ನಲ್ಲಿರುವ ಬದಲಾವಣೆಗಳು ಮತ್ತು ಅದರ ವಿಶೇಷತೆಗಳ ಕುರಿತು ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಕಾಶ್ ರಾಜ್ ಅವರು ತಮ್ಮ ಸಿದ್ಧಾಂತಗಳ ಮೂಲಕ ಆಗಾಗ ಸುದ್ದಿ ಆಗುತ್ತಾ ಇರುತ್ತಾರೆ. ಅವರು ನಟನೆಯಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಈಗ ಅವರು ಟೊಯಾಟೋ ಹೈಲಕ್ಸ ಪಿಕಪ್ ಕಾರು ಖರೀದಿ ಮಾಡಿದ್ದಾರೆ. ಅಷ್ಟೇ ಅಲ್ಲ, ಅದರಲ್ಲಿ ಸಾಕಷ್ಟು ಬದಲಾವಣೆಗಳನ್ನು ಕೂಡ ಮಾಡಿಸಿದ್ದಾರೆ. ವಿಶೇಷ ಎಂದರೆ ಈ ವಾಹನದಲ್ಲಿ ಕ್ಯಾಪಿಂಗ್ ಮಾಡೋ ವ್ಯವಸ್ಥೆ ಕೂಡ ಇದೆ ಎಂದು ಹೇಳಲಾಗುತ್ತಾ ಇದೆ. ಈ ವಿಡಿಯೋ ವೈರಲ್ ಆಗಿ ಗಮನ ಸೆಳೆಯುತ್ತಿದೆ.

ಪ್ರಕಾಶ್ ಅವರು ದಕ್ಷಿಣದ ಖ್ಯಾತ ಹೀರೋ. ಅವರಿಗೆ ವಾಹನಗಳ ಬಗ್ಗೆ ಸಾಕಷ್ಟು ಕ್ರೇಜ್ ಇದೆ. ಅವರ ಬಳಿ ಸಾಕಷ್ಟು ದುಬಾರಿ ಕಾರುಗಳು ಇವೆ. ಈಗ ಅವರ ಹೈಲಕ್ಸ್ ಟ್ರಕ್‌ನ ವಿಡಿಯೋನ ವ್ರಾಪ್‌ಜಿಲ್ಲಾ ಹೆಸರಿನ ಇನ್‌ಸ್ಟಾ ಖಾತೆ ಮೂಲಕ ಹಂಚಿಕೊಳ್ಳಲಾಗಿದೆ. ಈ ಸಂಸ್ಥೆ ಈ ಮೊದಲು ಪ್ರಕಾಶ್ ರಾಜ್ ಅವರ ಹಲವು ಕಾರುಗಳನ್ನು ಆಲ್ಟ್ರೇಷನ್ ಮಾಡಿತ್ತು ಎನ್ನಲಾಗಿದೆ. ಈಗ ಅವರು ಪಿಕಪ್ ಟ್ರಕ್‌ಗೆ ಹಲವು ಬದಲಾವಣೆ ಮಾಡಿಸಿದ್ದಾರೆ.

ಪ್ರಕಾಶ್ ರಾಜ್ ಅವರೇ ಮುಂದೆ ನಿಂತು ಬದಲಾವಣೆಗಳನ್ನು ಮಾಡಿಸಿದ್ದಾರೆ. ಈ ಟ್ರಕ್ ಹಿಂಭಾಗದಲ್ಲಿ ಅವರು ಟೆಂಟ್ ಹಾಕಿಸೋ ವ್ಯವಸ್ಥೆ ಮಾಡಿಸಿದ್ದಾರೆ. ಈ ಕಾರನ್ನು ಎಲ್ಲಾದರೂ ಆಫ್‌ರೋಡ್ ತೆಗೆದುಕೊಂಡು ಹೋದರೆ ಅಲ್ಲಿಯೇ ಕ್ಯಾಂಪ್ ಹಾಕಿ ಹಾಯಾಗಿ ಮಲಗಬಹುದು. ಪ್ರಕಾಶ ರಾಜ್ ಅವರ ಕಾರನ್ನು ಅನೇಕರು ಇಷ್ಟಪಟ್ಟಿದ್ದಾರೆ. ಹಣವನ್ನು ಅವರು ತಮ್ಮ ಕನಸುಗಳನ್ನು ಸಹಕಾರ ಮಾಡಿಕೊಳ್ಳಲು ಬಳಸಿಕೊಳ್ಳುತ್ತಿರುವ ಬಗ್ಗೆ ಅವರ ಅಭಿಮಾನಿಗಳು ಸಂತಸ ವ್ಯಕ್ತಪಡಿಸಿದ್ದಾರೆ. 'ಪ್ರಕಾಶ್ ರಾಜ್ ಅನೇಕರ ಕನಸುಗಳನ್ನು ಜೀವಿಸುತ್ತಿದ್ದಾರೆ' ಎಂದು ಕೆಲವರು ಕಮೆಂಟ್ ಮಾಡಿದ್ದಾರೆ. ಹೈಲಕ್ಸ್ ಇದು ಕಾರಿನ ಕ್ಯಾಟೆಗರಿಗೆ ಬರೋದಿಲ್ಲ, ಇದು ಪಿಕಪ್ ಟ್ರಕ್.



ಆನ್ ರೋಡ್ ಬೆಲೆ 50 ಲಕ್ಷ ರೂ.

ಇದರಲ್ಲಿ ಐದು ಜನ ಕುಳಿತುಕೊಳ್ಳಬಹುದು. ಹಿಂಭಾಗದಲ್ಲಿ ಬೈಕ್ ಅಥವಾ ಇತರ ವಸ್ತುಗಳನ್ನು ಇಟ್ಟುಕೊಂಡು ಹೋಗಲು ಅವಕಾಶ ಇರುತ್ತದೆ. ಈ ಕಾರಿನ ಆನ್ ರೋಡ್ ಬೆಲೆ 50 ಲಕ್ಷ ರೂಪಾಯಿ ಆಸುಪಾಸಿನಲ್ಲಿ ಇದೆ. ಮಾಡಿಫಿಕೇಷನ್ ಮಾಡಿಸಿದರೆ ಮತ್ತಷ್ಟು ಹಣ ಖರ್ಚಾಗಲಿದೆ. ಹೈಲಕ್ಸ್ ಕಾರಿನಲ್ಲಿ ಮ್ಯಾನ್ಯುವಲ್ ಆಯ್ಕೆಯನ್ನು ಭಾರತದಲ್ಲಿ ನಿಲ್ಲಿಸಲಾಗಿದ್ದು, ಆಟೋಮ್ಯಾಟಿಕ್ ಆಯ್ಕೆ ಮಾತ್ರ ಲಭ್ಯವಿದೆ.



# ಬಿಗ್ ಬಜೆಟ್ ಚಿತ್ರ ಕೈಗೆತ್ತಿಕೊಂಡ ರಿಷಬ್

ಕಾಂತಾರ ಗೆಲುವಿನ ಬಳಿಕ ರಿಷಬ್ ಶೆಟ್ಟಿ ಅವರು ವಿಶ್ರಾಂತಿ ಪಡೆಯುತ್ತಿದ್ದು, ಈಗ ನಿಂತುಹೋಗಿದ್ದ ದೊಡ್ಡ ಬಜೆಟ್ ಚಿತ್ರವೊಂದನ್ನು ಕೈಗೆತ್ತಿಕೊಂಡಿದ್ದಾರೆ ಎಂಬ ಸುದ್ದಿ ಇದೆ. ಎಂ.ಟಿ. ವಾಸುದೇವನ್ ನಾಯರ್ ಅವರ 'ರಂಡಮೂಳಂ' ಕಾದಂಬರಿ ಆಧರಿಸಿದ ಈ ಸಿನಿಮಾವನ್ನು ರಿಷಬ್ ಅವರೇ ನಿರ್ದೇಶಿಸಿ, ನಟಿಸಲಿದ್ದಾರೆ ಎನ್ನಲಾಗಿದೆ. ಈ ಹಿಂದೆ ಹಲವಾರು ಪ್ರಯತ್ನಗಳು ವಿಫಲವಾಗಿದ್ದ ಈ ಮಹತ್ವಾಕಾಂಕ್ಷಿ ಯೋಜನೆಗೆ ರಿಷಬ್ ಮರುಜೀವ ನೀಡಲಿದ್ದಾರೆಯೇ ಎಂಬ ಪ್ರಶ್ನೆ ಮೂಡಿದೆ. ರಿಷಬ್ ಶೆಟ್ಟಿ ಅವರು 'ಕಾಂತಾರ: ಚಾಪ್ಟರ್ 1' ಸಿನಿಮಾ ಗೆಲುವಿನ ಬಳಿಕ ಬ್ರೇಕ್ ಪಡೆದಿದ್ದಾರೆ. ಕುಟುಂಬದ ಜೊತೆ ಸಾಕಷ್ಟು ಸಮಯ ಕಳೆಯುತ್ತಿದ್ದಾರೆ. ಈಗ ರಿಷಬ್ ಶೆಟ್ಟಿ ಅವರು ನಟನೆಯ ಕಡೆ ಗಮನ ಹರಿಸುತ್ತಿದ್ದಾರೆ. ಒಪ್ಪಿಕೊಂಡ ಸಿನಿಮಾಗಳ ಶೂಟ್‌ನ ಅವರು ಪೂರ್ಣಗೊಳಿಸಬೇಕಿದೆ. ಈ ಮಧ್ಯೆ ಅವರು ಹೊಸ ಸಿನಿಮಾ ಕೈಗೆತ್ತಿಕೊಂಡರೇ ಎನ್ನುವ ಪ್ರಶ್ನೆ ಮೂಡಿದೆ. ಅದು ಕೂಡ ನಿಂತು ಹೋದ ಬಿಗ್ ಬಜೆಟ್ ಚಿತ್ರ ಎಂಬ ವದಂತಿ ಹರಿದಾಡಿದೆ. ಮಲಯಾಳಂ ಚಿತ್ರರಂಗದಲ್ಲಿ 'ರಂಡಮೂಳಂ' ಎಂಬ ಸಿನಿಮಾ ಸೆಟ್ಟೇರಬೇಕಿತ್ತು.

# ಅಬ್ಬಾ ಎಷ್ಟು ಅದ್ದೂರಿ ನೋಡಿ ರಶ್ಮಿಕಾ ಮದುವೆ

ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರ ರಹಸ್ಯ ವಿವಾಹ ಉದಯಪುರದಲ್ಲಿ ನಡೆಯಲಿದೆ. ಈ ಮದುವೆಯ ಸಿದ್ಧತೆಗಳ ವಿಡಿಯೋ ಲೀಕ್ ಆಗಿದ್ದು, ಅದ್ದೂರಿ ಸಿದ್ಧತೆಗಳು ಬಹಿರಂಗವಾಗಿವೆ. ಇವರಿಬ್ಬರ ಪ್ರೀತಿ 'ಗೀತ ಗೋವಿಂದಂ' ಸೆಟ್‌ನಲ್ಲಿ ಶುರುವಾಗಿತ್ತು. ಖಾಸಗಿಯಾಗಿ ನಡೆಯುತ್ತಿರುವ ಈ ವಿವಾಹದ ದಿನಾಂಕದ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೂ, ರಶ್ಮಿಕಾ ಅವರ ಕನಸಿನ ಮದುವೆಗೆ ತೆರೆಮರೆಯಲ್ಲಿ ದೊಡ್ಡ ಸಿದ್ಧತೆ ನಡೆದಿದೆ.

ರಶ್ಮಿಕಾ ಮಂದಣ್ಣ ಅವರು ವಿಜಯ್ ದೇವರಕೊಂಡ ಜೊತೆ ರಾಜಸ್ಥಾನದ ಉದಯಪುರದಲ್ಲಿ ಮದುವೆ ಆಗುತ್ತಿದ್ದಾರೆ. ಈ ವಿಷಯದಲ್ಲಿ ಈ ಜೋಡಿ ಗುಟ್ಟು ಕಾಯ್ದುಕೊಳ್ಳುತ್ತಾ ಬರುತ್ತಿದೆ. ಈಗ ರಶ್ಮಿಕಾ ಮಂದಣ್ಣ ಅವರು ವಿವಾಹ ಆಗೋ ಹೋಟೆಲ್‌ನ ಸಿದ್ಧತೆಯ ವಿಡಿಯೋ ಲೀಕ್ ಆಗಿದೆ. ಈ ವಿಡಿಯೋದಲ್ಲಿ ಮದುವೆ ಎಷ್ಟು ಅದ್ದೂರಿಯಾಗಿ ನೆರವೇರಲಿದೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತಿದೆ. ತುಂಬಾನೇ ಖಾಸಗಿಯಾಗಿ ಈ ವಿವಾಹ ನಡೆಯಲಿದೆ. ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಪರಿಚಯ ಆಗಿ ಹಲವು ವರ್ಷಗಳು ಕಳೆದಿವೆ. 'ಗೀತ ಗೋವಿಂದಂ' ಸಿನಿಮಾ ಟೈಮ್ ಅಲ್ಲಿ ಸೆಟ್ ಅಲ್ಲಿ ಇವರ ಪರಿಚಯ ಆಯಿತು. ಆ ಬಳಿಕ ಇಬ್ಬರ ಮಧ್ಯೆ ಸಾಕಷ್ಟು ಒಳ್ಳೆಯ ಬಾಂಡಿಂಗ್ ಬೆಳೆಯಿತು. ಪರಿಚಯ ಪ್ರೀತಿಗೆ ತಿರುಗಿದೆ. ಈಗ ಇವರು ಮದುವೆ ಆಗುವ ನಿರ್ಧಾರಕ್ಕೆ ಬಂದಿದ್ದಾರೆ. ವಿಜಯ್ ನಿವಾಸದಲ್ಲಿ ಗುಟ್ಟಾಗಿಯೇ ನಿಶ್ಚಿತಾರ್ಥ ನಡೆದಿತ್ತು. ವಿವಾಹ ಕೂಡ ಸಾಕಷ್ಟು ರಹಸ್ಯವಾಗಿ ನಡೆಯುತ್ತಿದೆ. ಉದಯಪುರದ ಸಿಟಿ ಪ್ಯಾಲೇಸ್ ಹೋಟೆಲ್ ಅಲ್ಲಿ ಮದುವೆ ನಡೆಯುತ್ತಿದೆ ಎಂದು ವಿಡಿಯೋ ವೈರಲ್ ಮಾಡಲಾಗಿದೆ. ವಿಡಿಯೋದಲ್ಲಿರುವವರು ಹೇಳುವ ಮಾಹಿತಿ ಪ್ರಕಾರ ಫೆಬ್ರವರಿ 2ರಂದೇ ಈ ಮದುವೆ ನಡೆಯಲಿದೆಯಂತೆ. ಫೆಬ್ರವರಿ 26ರಂದು ಇವರ ಮದುವೆ ಎಂದು ಹೇಳಲಾಗಿತ್ತು.



# ಸೋತ ನಿರ್ದೇಶಕನ ಜೊತೆ ಕೈ ಜೋಡಿಸಿದ ರಣವೀರ್ ಸಿಂಗ್

ರಣವೀರ್ ಸಿಂಗ್ ನಟನೆಯ 'ಧುರಂಧರ್' ಯಶಸ್ಸಿನ ನಂತರ, ಅವರು ದಕ್ಷಿಣದ ನಿರ್ದೇಶಕ ಶಂಕರ್ ಅವರ ಕನಸಿನ ಯೋಜನೆ 'ವೇಲ್ಪಾರಿ'ಗೆ ಕೈಜೋಡಿಸಲಿದ್ದಾರೆ. ಈ ಐತಿಹಾಸಿಕ ಪ್ಯಾನ್ ಇಂಡಿಯಾ ಚಿತ್ರದಲ್ಲಿ ಬಹುಮುಖ ನಟ ವಿಕ್ರಮ್ ಕೂಡ ಪ್ರಮುಖ ಪಾತ್ರ ವಹಿಸಲಿದ್ದಾರೆ ಎನ್ನಲಾಗಿದೆ. ಶಂಕರ್ ತಮ್ಮ ಹಿಂದಿನ ವೈಭವವನ್ನು ಮರಳಿ ಪಡೆಯಲು ಈ ಕಥೆಯನ್ನು ನಂಬಿದ್ದು, ರಣವೀರ್ ಅವರ ಜನಪ್ರಿಯತೆ ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಲಿದೆ. ರಣವೀರ್ ಸಿಂಗ್ ನಟನೆಯ 'ಧುರಂಧರ್' ಬಾಲಿವುಡ್ ಬಾಕ್ಸ್ ಆಫೀಸ್‌ನಲ್ಲಿ ದಾಖಲೆಗಳನ್ನು ಮುರಿಯುತ್ತಲೇ ಇದೆ. ಸಾವಿರ ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿರುವ ಈ ಚಿತ್ರ ಪ್ರೇಕ್ಷಕರನ್ನು ಮೋಡಿ ಮಾಡಿದೆ. ಚಿತ್ರಮಂದಿರಗಳಲ್ಲಿ ಸಂಚಲನ ಮೂಡಿಸಿರುವ ಈ ಚಿತ್ರ ಶುಕ್ರವಾರದಿಂದ ನೆಟ್‌ಫ್ಲಿಕ್ಸ್ ಒಟಿಟಿಯಲ್ಲಿ ಸ್ಟ್ರೀಮಿಂಗ್ ಆಗುತ್ತಿದೆ. ಅಲ್ಲಿಯೂ ಸಿನಿಮಾ ಮೆಚ್ಚುಗೆ ಪಡೆದಿದೆ.

ಈಗ ರಣವೀರ್ ಸಿಂಗ್ ಅವರು ದಕ್ಷಿಣದ ನಿರ್ದೇಶಕನ ಜೊತೆ ಕೈ ಜೋಡಿಸುತ್ತಿದ್ದಾರೆ ಎಂದು ವರದಿ ಆಗಿದೆ. ಅದು ಕೂಡ ಸತತ ಸೋಲು ಕಂಡ ನಿರ್ದೇಶಕ. ಐದು ವರ್ಷಗಳ ಹಿಂದೆಯೇ ರಣವೀರ್ ಸಿಂಗ್ ಹಾಗೂ ಶಂಕರ್ ಸಿನಿಮಾ ಮಾಡಬೇಕಿತ್ತು. ಆದರೆ ಕೆಲವು ಕಾರಣಗಳಿಂದಾಗಿ ಅದು ಮುಂದೂಡಲ್ಪಡುತ್ತಲೇ ಇತ್ತು. ಆದರೆ ಈಗ ಶಂಕರ್ ಅವರು ರಣವೀರ್ ಸಿಂಗ್ ಜೊತೆ ಕನಸಿನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಿದ್ಧರಾಗಿದ್ದಾರೆ ಎನ್ನಲಾಗಿದೆ.

ಪ್ರಮುಖ ಪಾತ್ರದಲ್ಲಿ ವಿಕ್ರ

ಕಾಲಿವುಡ್‌ನಿಂದ ಕೇಳಿಬರುತ್ತಿರುವ ಮಾಹಿತಿಯ ಪ್ರಕಾರ, ದಕ್ಷಿಣ ಭಾರತದ ಬಹುಮುಖ ನಟ ವಿಕ್ರಮ್ ಕೂಡ ಈ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಈ ಚಿತ್ರದೊಂದಿಗೆ ಶಂಕರ್ ತಮ್ಮ ಹಳೆಯ ಫಾರ್ಮ್ ಅನ್ನು ಮರಳಿ ಪಡೆಯುತ್ತಾರೆಯೇ ಎಂಬುದು ಸದ್ಯದ ಪ್ರಶ್ನೆ.

# ಪಾಕಿಸ್ತಾನದ 200 ಕೋಟಿ ನಷ್ಟದ ಲೆಕ್ಕಾಚಾರ!

ಬಹುನಿರೀಕ್ಷಿತ ಟಿ20 ವಿಶ್ವಕಪ್ ಫೆಬ್ರವರಿ 7 ರಿಂದ ಶುರುವಾಗಲಿದೆ. 20 ತಂಡಗಳ ನಡುವಣ ಈ ಕದನದಲ್ಲಿ ಭಾರತ ಮತ್ತು ಪಾಕಿಸ್ತಾನ್ ಒಂದೇ ಗ್ರೂಪ್‌ನಲ್ಲಿದೆ.

ಆದರೆ ಮೊದಲ ಸುತ್ತಿನಲ್ಲಿ ಭಾರತ ಮತ್ತು ಪಾಕಿಸ್ತಾನ್ ಮುಖಾಮುಖಿಯಾಗುವುದು ಅನುಮಾನ. ಏಕೆಂದರೆ ಟೀಮ್ ಇಂಡಿಯಾ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವುದಾಗಿ ಪಿಸಿಬಿ ತಿಳಿಸಿದೆ. ಭಾರತ ಮತ್ತು ಪಾಕಿಸ್ತಾನ್ ನಡುವಣ ಟಿ20 ವಿಶ್ವಕಪ್ ಪಂದ್ಯ ನಡೆಯಲಿದೆಯಾ ಈ ಪ್ರಶ್ನೆಗೆ ಉತ್ತರ ಸಿಗಲು ಇನ್ನೊಂದಷ್ಟು ದಿನಗಳವರೆಗೆ ಕಾಯಲೇಬೇಕು. ಏಕೆಂದರೆ ಟಿ20 ವಿಶ್ವಕಪ್ ಆರಂಭಕ್ಕೆ ದಿನಗಳು ಮಾತ್ರ ಉಳಿದಿರುವಾಗ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಭಾರತದ ವಿರುದ್ಧದ ಪಂದ್ಯವನ್ನು ಬಹಿಷ್ಕರಿಚುವ ಬೆದರಿಕೆಯೊಡ್ಡಿದೆ. ಇದಕ್ಕೆ ಪಾಕಿಸ್ತಾನ್ ಸರ್ಕಾರ ಕೂಡ ಸಂಪೂರ್ಣ ಬೆಂಬಲ ನೀಡಿದೆ. ಹೀಗಾಗಿ ಫೆಬ್ರವರಿ 15 ರಂದು ಭಾರತ ಮತ್ತು ಪಾಕಿಸ್ತಾನ್ ನಡುವಣ ಪಂದ್ಯ ನಡೆಯಲಿದೆಯಾ ಎಂಬುದೇ ಈಗ ದೊಡ್ಡ ಪ್ರಶ್ನೆ. ಇತ್ತ ಭಾರತದ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸಿದರೆ ಪಾಕಿಸ್ತಾನಕ್ಕೇನು ಲಾಭ ಎಂಬ ಪ್ರಶ್ನೆ ಮೂಡುವುದು ಸಹಜ. ಈ ಪ್ರಶ್ನೆಗೆ 200 ಕೋಟಿ ರೂ. ನಷ್ಟದ ಲೆಕ್ಕಾಚಾರವೊಂದು ಉತ್ತರವಾಗಿ ಸಿಗುತ್ತದೆ. ಅಂದರೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಐಸಿಸಿ ಹಾಗೂ ಬಿಸಿಸಿಐ ಅನ್ನು ಇಕ್ಕಟಿಗೆ ಸಿಲುಕಿಸಲೆಂದೇ ಪಂದ್ಯ ಬಹಿಷ್ಕಾರದ ಬೆದರಿಕೆಯೊಡ್ಡಿದೆ. ಭಾರತ ಮತ್ತು ಪಾಕಿಸ್ತಾನ್ ನಡುವಣ ಪಂದ್ಯ ನಡೆಯದೇ ಇದ್ದರೆ ಐಸಿಸಿ ಆದಾಯಕ್ಕೆ ಹೊಡೆತ ಬೀಳುವುದು ಖಚಿತ. ಇತ್ತ ಈ ಬಾರಿ ಟಿ20 ವಿಶ್ವಕಪ್ ಅನ್ನು ಶ್ರೀಲಂಕಾ ಜೊತೆಗೂಡಿ ಬಿಸಿಸಿಐ ಆಯೋಜಿಸುತ್ತಿದೆ. ಹೀಗಾಗಿ ಬಿಸಿಸಿಐ ಕೂಡ ಈ ನಷ್ಟದ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಕ್ರಿಕ್‌ಬಜ್‌ನ ವರದಿಯ ಪ್ರಕಾರ, ಯಾವುದೇ ಐಸಿಸಿ ಪಂದ್ಯಾವಳಿಯಲ್ಲಿ ಭಾರತದ ಪಂದ್ಯಗಳು ಸುಮಾರು 100 ಕೋಟಿ ರೂ. ಗಳಿಸುತ್ತವೆ. ಇದೇ ವೇಳೆ ಭಾರತ-ಪಾಕಿಸ್ತಾನ್ ನಡುವಣ ಪಂದ್ಯಗಳಲ್ಲಿ ಈ ಆದಾಯವು ಬಹುತೇಕ ದ್ವಿಗುಣಗೊಳ್ಳುತ್ತದೆ. ಅಂದರೆ ಕನಿಷ್ಠ 200 ಕೋಟಿ ರೂ. ಆದಾಯ ಸೃಷ್ಟಿಯಾಗುತ್ತದೆ. ಈ ಆದಾಯದ ಮುಖ್ಯ ಮೂಲ ಜಾಹೀರಾತು. ಅದರಲ್ಲೂ ಪಂದ್ಯದ ನೇರ ಪ್ರಸಾರಕರು ಭಾರತ-ಪಾಕಿಸ್ತಾನ್ ನಡುವಣ ಪಂದ್ಯದ ಪ್ರತಿ 10-ಸೆಕೆಂಡ್ ಜಾಹೀರಾತಿಗೆ ಸಾಮಾನ್ಯವಾಗಿ 25 ಲಕ್ಷದಿಂದ 40 ಲಕ್ಷ ರೂ.ಗಳನ್ನು ನಿಗದಿ ಮಾಡುತ್ತಾರೆ.



ಒಂದು ವೇಳೆ ಭಾರತ ಮತ್ತು ಪಾಕಿಸ್ತಾನ್ ನಡುವಣ ಪಂದ್ಯ ರದ್ದಾದರೆ, ಜಾಹೀರಾತಿನ ಆದಾಯದ ಮೇಲೆ ನೇರ ಪರಿಣಾಮ ಬೀರಲಿದೆ. ಇದಲ್ಲದೆ ಟಿಕೆಟ್ ಮಾರಾಟ, ಇತರೆ ಮೂಲಗಳಿಂದ ಬರುವ ಆದಾಯಕ್ಕೂ ಹೊಡೆತ ಬೀಳಲಿದೆ. ಇತ್ತ ಬಿಸಿಸಿಐ ಹಾಗೂ ಐಸಿಸಿ ಗಳಿಸಲಿರುವ ಆದಾಯಕ್ಕೆ ಹೊಡೆತ ನೀಡುವ ಸಲುವಾಗಿಯೇ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಇದೀಗ ಭಾರತದ ವಿರುದ್ಧದ ಪಂದ್ಯದ ಬಹಿಷ್ಕಾರಕ್ಕೆ ಪ್ಲ್ಯಾನ್ ರೂಪಿಸಿದೆ. ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್‌ನ ಈ ನಡೆಯನ್ನು ಗಂಭೀರವಾಗಿ ಪರಿಗಣಿಸಿರುವ ಐಸಿಸಿ ತುರ್ತು ಸಭೆ ಕರೆದಿದೆ.



# ವಿಶ್ವಕಪ್ ಆರಂಭಕ್ಕೂ ಮುನ್ನವೇ ಆಸ್ಟ್ರೇಲಿಯಾಗೆ ಆಘಾತ

ಟಿ20 ವಿಶ್ವಕಪ್ 2026ರ ಆರಂಭಕ್ಕೂ ಮುನ್ನವೇ ಆಸ್ಟ್ರೇಲಿಯಾ ತಂಡಕ್ಕೆ ಆಘಾತ ಎದುರಾಗಿದೆ. ತಂಡದ ಪ್ರಮುಖ ವೇಗಿ ಫಿಟ್‌ನೆಸ್ ಸಮಸ್ಯೆಯಿಂದ ಬಳಲುತ್ತಿದ್ದು, ಹೀಗಾಗಿ ಆರಂಭಿಕ ಪಂದ್ಯಗಳಿಂದ ಹೊರಗುಳಿಯಲಿದ್ದಾರೆ. ಇದರಿಂದ ಆಸೀಸ್ ಪಡೆ ಆರಂಭಿಕ ಮ್ಯಾಚ್‌ಗಳಲ್ಲಿ ಹಿನ್ನಡೆ ಅನುಭವಿಸುವ ಸಾಧ್ಯತೆಯಿದೆ.

ಫೆಬ್ರವರಿ 7 ರಿಂದ ಶುರುವಾಗಲಿರುವ ಟಿ20 ವಿಶ್ವಕಪ್‌ಗಾಗಿ ಆಸ್ಟ್ರೇಲಿಯಾ 15 ಸದಸ್ಯರುಗಳ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಈ ಹದಿನೈದು ಸದಸ್ಯರುಗಳಲ್ಲಿ ಜೋಶ್ ಹೇಝಲ್‌ವುಡ್ ಕೂಡ ಕಾಣಿಸಿಕೊಂಡಿದ್ದರು. ಇದಾಗ್ಯೂ ಅವರು ಸಂಪೂರ್ಣ ಫಿಟ್ ಆಗಿಲ್ಲ ಎಂಬ ಮಾಹಿತಿ ಹೊರಬಿದ್ದಿದೆ.

ಅಂದರೆ ಜೋಶ್ ಹೇಝಲ್‌ವುಡ್ ಟಿ20 ವಿಶ್ವಕಪ್‌ನ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ ಎಂದು ವರದಿಯಾಗಿದೆ. ಮಂಡಿರಜ್ಜು ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಅವರು ಸಂಪೂರ್ಣವಾಗಿ ಗುಣಮುಖರಾಗಲು ಹೆಚ್ಚಿನ ಸಮಯ ತೆಗೆದುಕೊಳ್ಳಲಿದ್ದಾರೆ.

ಹೀಗಾಗಿ ಆಸ್ಟ್ರೇಲಿಯಾ ತಂಡದ ಆರಂಭಿಕ ಪಂದ್ಯಗಳಲ್ಲಿ ಜೋಶ್ ಹೇಝಲ್‌ವುಡ್ ಕಣಕ್ಕಿಳಿಯುವುದಿಲ್ಲ ಎಂಬುದು ಖಚಿತವಾಗಿದೆ. ಇದಾಗ್ಯೂ ಅವರು ಸೂಪರ್-8 ಪಂದ್ಯಗಳಲ್ಲಿ ಕಾಣಿಸಿಕೊಳ್ಳುವುದು ಬಹುತೇಕ ಕನ್ಫರ್ಮ್. ಏಕೆಂದರೆ ದ್ವಿತೀಯ ಸುತ್ತಿನ ಪಂದ್ಯಗಳು ಫೆಬ್ರವರಿ 21 ರಿಂದ ಶುರುವಾಗಲಿದೆ. ಅಷ್ಟರಲ್ಲಿ ಜೋಶ್ ಹೇಝಲ್‌ವುಡ್ ಫಿಟ್‌ನೆಸ್ ಸಾಧಿಸಲಿದ್ದಾರೆ. ಹೀಗಾಗಿ ದ್ವಿತೀಯ ಸುತ್ತಿನಲ್ಲಿ ಹೇಝಲ್‌ವುಡ್ ಕಣಕ್ಕಿಳಿಯುವುದನ್ನು ಎದುರು ನೋಡಬಹುದು. ಮತ್ತೊಂದೆಡೆ ಫಿಟ್‌ನೆಸ್ ಸಮಸ್ಯೆಯ ಕಾರಣ ಪ್ಯಾಟ್ ಕಮಿನ್ಸ್ ಟಿ20 ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ. ಬೆನ್ನಿನ ಕೆಳ ಭಾಗದ ನೋವಿನ ಸಮಸ್ಯೆಯಿಂದ ಬಳಲುತ್ತಿರುವ ಕಮಿನ್ಸ್ ಇನ್ನೂ ಸಹ ಚೇತರಿಸಿಕೊಂಡಿಲ್ಲ. ಹೀಗಾಗಿ ಅವರನ್ನು ಟಿ20 ವಿಶ್ವಕಪ್ ತಂಡದಿಂದಲೂ ಕೈ ಬಿಡಲಾಗಿದೆ. ಅವರ ಬದಲಿಗೆ ಎಡಗೈ ವೇಗಿ ಬೆನ್ ದ್ವಾರ್ಶುಯಿಸ್ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ.



# ಕೋಪ-ತಾಪ ಪಾಕ್ ಆಟಗಾರನ ವಿರುದ್ಧ ಸಿಡಿದೆದ್ದ ವೈಭವ್

ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಪ್ರವೇಶ

ಅಂಡರ್-19 ವಿಶ್ವಕಪ್‌ನ 12ನೇ ಪಂದ್ಯವು ಜಿದ್ದಾಜಿದ್ದಿನ ಹೋರಾಟಕ್ಕೆ ಸಾಕ್ಷಿಯಾಗಿತ್ತು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ 49.5 ಓವರ್‌ಗಳಲ್ಲಿ ಕಲೆಹಾಕಿದ್ದು 252 ರನ್‌ಗಳು. ಈ ಗುರಿಯನ್ನು ಬೆನ್ನತ್ತಿದ ಪಾಕಿಸ್ತಾನ್ ತಂಡವು 35 ಓವರ್‌ಗಳಲ್ಲಿ 168 ರನ್ ಕಲೆಹಾಕಿದ್ದರು.

ಇದರ ನಡುವೆ ಉಭಯ ತಂಡಗಳ ಆಟಗಾರರ ನಡುವೆ ಮಾತಿನ ಚಕಮಕಿ ಕೂಡ ನಡೆಯಿತು. ಅದರಲ್ಲೂ ವಿಹಾನ್ ಮಲ್ಹೋತ್ರ ಎಸೆದ 37ನೇ ಓವರ್‌ನ ಕೊನೆಯ ಎಸೆತದಲ್ಲಿ ಅಲಿ ಹಸನ್ ಬಲೂಚ್ ವಿಕೆಟ್ ಒಪ್ಪಿಸಿದ್ದರು. ಅತ್ತ ಅಲಿ ಹಸನ್ ಔಟಾಗುತ್ತಿದ್ದಂತೆ ವೈಭವ್ ಸೂರ್ಯವಂಶಿ ಪಾಕ್ ಆಟಗಾರನ ವಿರುದ್ಧ ಸಿಡಿದೆದ್ದಿದ್ದಾರೆ.

ಅಲಿ ಹಸನ್ ಬಲೂಚ್‌ನನ್ನು ಗುರಿಯಾಗಿಸಿ ವಾಗ್ದಾಳಿ ಆರಂಭಿಸಿದ್ದ ವೈಭವ್‌ನನ್ನು ಸಹ ಆಟಗಾರರು ಬಂದು ತಡೆದಿದ್ದಾರೆ. ಈ ಮೂಲಕ ಇಬ್ಬರ ನಡುವಣ ವಾಕ್ಸಮರವನ್ನು ತಡೆದಿದ್ದಾರೆ.

ಇದೀಗ ವೈಭವ್ ಸೂರ್ಯವಂಶಿಯ ಕೋಪ-ತಾಪದ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇನ್ನು ಈ ಪಂದ್ಯದಲ್ಲಿ ಟೀಮ್ ಇಂಡಿಯಾ ನೀಡಿದ 253 ರನ್‌ಗಳ ಗುರಿ ಬೆನ್ನತ್ತಿದ ಪಾಕಿಸ್ತಾನ್ 46.2 ಓವರ್‌ಗಳಲ್ಲಿ 194 ರನ್‌ಗಳಿಸಿ ಆಲೌಟ್ ಆಗಿದೆ. ಈ ಮೂಲಕ 58 ರನ್‌ಗಳ ಜಯದೊಂದಿಗೆ ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಪ್ರವೇಶಿಸಿದೆ.



# ಫೈನಲ್‌ನಲ್ಲಿ ಆರ್‌ಸಿಬಿ ತಂಡದ ಎದುರಾಳಿ ಯಾರು


ಡೆಲ್ಲಿ ಕ್ಯಾಪಿಟಲ್ ಚಾಂಪಿಯನ್ ಪಟ್ಟ ಅಲಂಕರಿಸಲು ಅವಕಾಶ

ವುಮೆನ್ಸ್ ಪ್ರೀಮಿಯರ್ ಲೀಗ್‌ನ ಮೊದಲ ಸುತ್ತಿನ ಪಂದ್ಯಗಳು ಪೂರ್ಣಗೊಂಡಿದೆ. ಪ್ರಥಮ ಸುತ್ತಿನಲ್ಲಿ ಕಣಕ್ಕಿಳಿದ 5 ತಂಡಗಳಲ್ಲಿ ಮೂರು ತಂಡಗಳು ಪ್ಲೇಆಫ್‌ಗೆ ಪ್ರವೇಶಿಸಿದರೆ, ಎರಡು ಟೀಮ್‌ಗಳು ಹೊರಬಿದ್ದಿವೆ. ಪ್ಲೇಆಫ್‌ಗೆ ಪ್ರವೇಶಿಸಿರುವ ಮೂರು ತಂಡಗಳಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನೇರವಾಗಿ ಫೈನಲ್‌ಗೆ ಎಂಟ್ರಿ ಕೊಟ್ಟಿದೆ.

ಇನ್ನು ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಗುಜರಾತ್ ಜೈಂಟ್ಸ್ ತಂಡಗಳು ನಾಕೌಟ್ ಹಂತಕ್ಕೇರಿದೆ. ಅಂದರೆ ಎಲಿಮಿನೇಟರ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತುಗುಜರಾತ್ ಜೈಂಟ್ಸ್ ಮುಖಾಮುಖಿಯಾಗಲಿದ್ದು, ಈ ಪಂದ್ಯದಲ್ಲಿ ಗೆಲ್ಲುವ ತಂಡ ಫೈನಲ್‌ಗೆ ಅರ್ಹತೆ ಪಡೆಯಲಿದೆ.

ಗುಜರಾತ್ ಜೈಂಟ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವೆ ಎಲಿಮಿನೇಟರ್ ಪಂದ್ಯ ನಡೆಯುವುದರಿಂದ ಈ ತಂಡಗಳಲ್ಲಿ ಒಂದು ಟೀಮ್ ಟೂರ್ನಿಯಿಂದ ಹೊರಬೀಳುವುದು ಖಚಿತ. ಹೀಗಾಗಿ ಫೆಬ್ರವರಿ 3 ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಫೈನಲ್ ಆಡುವ ತಂಡ ಯಾವುದೆಂಬುದು ನಿರ್ಧಾರವಾಗಲಿದೆ. ಅಂದರೆ ಫೈನಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಜೈಂಟ್ಸ್ ಅಥವಾ ಡೆಲ್ಲಿ ಕ್ಯಾಪಿಟಲ್ಸ್ ಕಣಕ್ಕಿಳಿಯುವುದು ಖಚಿತ. ಅದರಂತೆ ಈ ಬಾರಿಯ ವುಮೆನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಆರ್‌ಸಿಬಿ ಅಥವಾ ಗುಜರಾತ್ ಜೈಂಟ್ಸ್ ಅಥವಾ ಡೆಲ್ಲಿ ಕ್ಯಾಪಿಟಲ್ಸ್‌ಗೆ ಚಾಂಪಿಯನ್ ಪಟ್ಟ ಅಲಂಕರಿಸಲು ಅವಕಾಶವಿದೆ.

ಇನ್ನು ಫೈನಲ್ ಪಂದ್ಯವು ಫೆಬ್ರವರಿ 5 ರಂದು ನಡೆಯಲಿದ್ದು, ಈ ಪಂದ್ಯವು ವಡೋದರಾದ ಬಿಸಿಎ ಸ್ಟೇಡಿಯಂನಲ್ಲಿ ನಡೆಯಲಿದೆ. ಈ ಪಂದ್ಯದ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 2ನೇ ಬಾರಿ ಟ್ರೋಫಿ ಎತ್ತಿ ಹಿಡಿಯಲಿದೆಯಾ ಕಾದು ನೋಡಬೇಕಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966